ಸಂಪಾದಕರು :
ಎಂ.ಎಸ್. ವಿಕಾಸ್

ಮಂಗಳವಾರ, ಮೇ 30, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 16 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 50 2023

janathavani@mac.com
www.janathavani.com
☎ 08192 254736 91642 99999

## ಶೈಕ್ಷಣಿಕ ವರ್ಷ ಆರಂಭ ಶಾಲಾರಂಭಕ್ಕೆ ಸಕಲ ಸಿದ್ಧತೆ



ಸೋಮವಾರ ದಾವಣಗೆರೆ ಸರ್ಕಾರಿ ಶಾಲೆಯಲ್ಲಿ ಬಿಸಿ ಊಟದ ಅಡುಗೆ ಕೋಣೆ ಸ್ವಚ್ಛಗೊಳಿಸುತ್ತಿರುವ ಸಿಬ್ಬಂದಿ

ದಾವಣಗೆರೆ, ಮೇ 29- 2023-24ನೇ ಸಾಲಿನ ಶೈಕ್ಷಣಿಕ ವರ್ಷ ಇಂದಿನಿಂದ ಆರಂಭಗೊಂಡಿದ್ದು, 31ರ ಬುಧವಾರದಿಂದ ಶಾಲೆಗಳು ಅಧಿಕೃತವಾಗಿ ಆರಂಭವಾಗಲಿವೆ.

ಶಾಲಾ ಆರಂಭಕ್ಕೆ ಸ್ವಚ್ಛತಾ ಕಾರ್ಯಗಳು ಬರದಿಂದ ಸಾಗಿವೆ. ಬಹುತೇಕ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಬುಧವಾರ ತರಗತಿಗಳ ಕೊಠಡಿ, ಅಡುಗೆ ಕೊಠಡಿ, ಡೆಸ್ಕ್‌ಗಳನ್ನು ಸ್ವಚ್ಛಗೊಳಿಸಲಾಗುತ್ತಿತ್ತು.

ಶೈಕ್ಷಣಿಕ ವರ್ಷದ ಕಾರ್ಯಕ್ರಮ ಪಟ್ಟಿ ಸಿದ್ಧಗೊಂಡಿದ್ದು, ಶಾಲೆಗಳಲ್ಲಿ ಶಿಕ್ಷಕರ ಸಭೆಗಳು ನಡೆದವು. ಏತನ್ಮಧ್ಯೆಯೂ ವಿದ್ಯಾರ್ಥಿಗಳು ಶಾಲೆಗಳಿಗೆ ಆಗಮಿಸಿದ್ದರು. ಒಂದಿಷ್ಟು ಹರಟೆ, ಆಟದ ಜೊತೆ ಪಾಠವೂ ನಡೆಯಿತು.

ಸರ್ಕಾರಿ ಬಾಲಕರ ಪ್ರೌಢಶಾಲೆಯ ಉಪ ಪ್ರಾಚಾರ್ಯ ಜೆ.ಎಸ್. ಪರಮೇಶ್ವರಪ್ಪ ಪತ್ರಿಕೆಯೊಂದಿಗೆ ಮಾತನಾಡುತ್ತಾ, ಶಾಲೆಯಲ್ಲಿ 174 ಮಕ್ಕಳಿದ್ದರು, ಅದರಲ್ಲಿ 51 ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆದಿದ್ದಾರೆ. ನೂತನ ವಿದ್ಯಾರ್ಥಿಗಳಿಗೆ ಪ್ರವೇಶ ಆರಂಭವಾಗಿದೆ ಎಂದು ಹೇಳಿದರು.

31ರಂದು ಶಾಲೆಯನ್ನು ತಳಿರು ತೋರಣಗಳಿಂದ ಸಿಂಗರಿಸಿ ಸಂಭ್ರಮದಿಂದ ಆರಂಭಿಸಲಾಗುವುದು. ಎಸ್‌ಡಿಎಂಸಿ ಸದಸ್ಯರನ್ನು ಆಹ್ವಾನಿಸಿದ್ದೇವೆ. ಅಂದು ಪಠ್ಯ ಪುಸ್ತಕ ಹಾಗೂ ಬಟ್ಟೆಗಳನ್ನು ವಿತರಿಸಲಾಗುವುದು. ವಿದ್ಯಾರ್ಥಿಗಳಿಗೆ ಸಿಹಿ ಊಟ ಮಾಡಿ, ಪ್ರೀತಿಯಿಂದ ಸ್ವಾಗತಿಸಲು ಅಗತ್ಯ ಸಿದ್ಧತೆ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಶ್ರೀಮತಿ ಸುಂದರಮ್ಮ ರಾಜನಹಳ್ಳಿ ಲಕ್ಷ್ಮಣಶೆಟ್ಟಿ ಮಹಾತ್ಮ ವಿದ್ಯಾಶಾಲೆಯಲ್ಲಿಯೂ ತರಗತಿಗಳಿಗೆ 30 ಮಕ್ಕಳು ಆಗಮಿಸಿದ್ದರು. ಮುಖ್ಯೋಪಾಧ್ಯಾಯರಾದ ಶ್ರೀಮತಿ ಸಾಕಮ್ಮ ಮಾತನಾಡಿ, ಇಂದು ಎಲ್ಲಾ ಕೊಠಡಿಗಳನ್ನು ಸ್ವಚ್ಛಗೊಳಿಸಿದ್ದೇವೆ. ಇಂದು ಬಂದಿರುವ ಮಕ್ಕಳಿಗೆ ನೋಟ್ ಪುಸ್ತಕ ನೀಡಿದ್ದೇವೆ. ಬುಧವಾರ ಆಗಮಿಸಿರುವ ಮಕ್ಕಳಿಗೆ ಪಠ್ಯ ಪುಸ್ತಕ ನೀಡಿ, ಸಿಹಿ ಕೊಡುವ ಮೂಲಕ ಸ್ವಾಗತಕ್ಕೆ ಸಿದ್ಧವಾಗಿದ್ದೇವೆ ಎಂದರು.

ಶಾಲೆಯನ್ನು ತಳಿರು, ತೋರಣಗಳಿಂದ ಸಿಂಗರಿಸುವ ಉದ್ದೇಶವಿದೆ ಎಂದ ಅವರು, (3ನೇ ಪುಟಕ್ಕೆ)

## ಜೂನ್ 1ರಿಂದಲೇ ಗ್ಯಾರಂಟಿಗಳ ಅನುಷ್ಠಾನ

### ಕ್ರಮ ತೆಗೆದುಕೊಳ್ಳಲು ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ಧರಾಮಯ್ಯ ಸೂಚನೆ

ಬೆಂಗಳೂರು, ಮೇ 29 - ವಿಧಾನಸಭಾ ಚುನಾವಣೆಗೂ ಮುನ್ನ ರಾಜ್ಯದ ಜನತೆಗೆ ನೀಡಿದ್ದ ಗ್ಯಾರಂಟಿಗಳನ್ನು ಜೂನ್ ಒಂದರಿಂದ ಕಾಂಗ್ರೆಸ್ ಸರ್ಕಾರ ಅನುಷ್ಠಾನಗೊಳಿಸಲು ಮುಂದಾಗಿದೆ ಎಂದು ಮೂಲಗಳು ತಿಳಿಸಿವೆ.

ಪ್ರತಿ ಮನೆಗೆ 200 ಯುನಿಟ್ ವಿದ್ಯುತ್ ಬಳಕೆ ಉಚಿತ, ಬಿಪಿಎಲ್ ಪಡಿತರ ಚೀಟಿದಾರರಿಗೆ ಮಾಸಿಕ 10 ಕೆ.ಜಿ. ಅಕ್ಕಿ, ಮಹಿಳೆಯರಿಗೆ ಸರ್ಕಾರಿ ಸಾಮಾನ್ಯ ಬಸ್ಸುಗಳಲ್ಲಿ ಉಚಿತ ಪ್ರಯಾಣ ವ್ಯವಸ್ಥೆ, ಮನೆ ಒಡತಿಗೆ 2000 ರೂ. ಡಿಪ್ಲೋಮಾ ಮತ್ತು ಪದವೀಧರ ನಿರುದ್ಯೋಗಿಗಳಿಗೆ ಮಾಸಿಕ ಭತ್ಯೆ ನೀಡುವ ಸಂಬಂಧ ಜೂನ್ ಒಂದರಂದು ನಡೆಯುವ ಸಂಪುಟ ಸಭೆಯಲ್ಲಿ ತೀರ್ಮಾನ ಕೈಗೊಳ್ಳುವ ನಿರೀಕ್ಷೆ ಇದೆ.

ಮುಂಬರುವ ಲೋಕಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಪೂರ್ಣ ಪ್ರಮಾಣದಲ್ಲಿ ಮಂತ್ರಿಮಂಡಲ ರಚಿಸಿ, ಸಚಿವರಿಗೆ ಖಾತೆ ಹಂಚಿಕೆ ಮಾಡಿದ ಬೆನ್ನಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಗ್ಯಾರಂಟಿ ಅನುಷ್ಠಾನಕ್ಕೆ ಚಾಲನೆ ನೀಡಿದ್ದಾರೆ.

ಐದು ಗ್ಯಾರಂಟಿಗಳ ಅನುಷ್ಠಾನಕ್ಕಾಗಿ ಮುಖ್ಯಮಂತ್ರಿ ಅವರು ಇಂದು ಶಕ್ತಿ ಭವನದಲ್ಲಿ ಇಡೀ ದಿನ ಅಧಿಕಾರಿಗಳೊಂದಿಗೆ ಕಸರತ್ತು ನಡೆಸಿದರು.

ಹಣಕಾಸು, ಸಾರಿಗೆ, ಆಹಾರ ಮತ್ತು ನಾಗರಿಕ ಪೂರೈಕೆ, ಯುವ ಸಬಲೀಕರಣ, ಇಂಧನ, ಕಂದಾಯ ಸೇರಿದಂತೆ ವಿವಿಧ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಜೊತೆ ಸಮಾಲೋಚನೆ ನಡೆಸಿದರು.



ಜೂನ್ ಒಂದರಿಂದಲೇ ಗ್ಯಾರಂಟಿಗಳು ಅನುಷ್ಠಾನಗೊಳ್ಳಲೇಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿರುವ ಮುಖ್ಯಮಂತ್ರಿ, ಸಂಪುಟ ಸಭೆಗೆ ಬರುವ ಮುನ್ನ ಸಂಬಂಧಪಟ್ಟ ಇಲಾಖೆಯವರು ವರದಿ ತರುವಂತೆ ಆದೇಶಿಸಿದ್ದಾರೆ.

ಯೋಜನೆ ಅನುಷ್ಠಾನಕ್ಕೆ ವಾರ್ಷಿಕ 50 ಸಾವಿರ ಕೋಟಿ ರೂ. ತಗಲುವ ಅಂದಾಜಿದ್ದು, ಇಷ್ಟು ಹಣವನ್ನು ವಿವಿಧ ಮೂಲಗಳಿಂದ ಕ್ರೋಢೀಕರಿಸಿ ನೀಡುವುದಾಗಿ ಹಣಕಾಸು ಇಲಾಖೆ ಹೊಣೆ ಹೊತ್ತಿರುವ ಮುಖ್ಯಮಂತ್ರಿ ತಿಳಿಸಿದ್ದಾರೆ.

ಸಂಪನ್ಮೂಲ ಕ್ರೋಢೀಕರಣ, ನಿರುಪಯುಕ್ತ ಯೋಜನೆಗಳ ಸ್ಥಗಿತಗೊಳಿಸುವುದು ಮತ್ತು ಯೋಜನಾ ಗಾತ್ರವನ್ನು (4ನೇ ಪುಟಕ್ಕೆ)

## ನೂತನ ಶಿಕ್ಷಣ ನೀತಿ ಬಗ್ಗೆ ತೀರ್ಮಾನ

### ದ್ವೇಷ ರಾಜಕಾರಣ ಮತ್ತು ಟ್ರೋಲ್‌ಗಳ ವಿರುದ್ಧ ಕಠಿಣ ಕ್ರಮ : ಸಿಎಂ

ಬೆಂಗಳೂರು, ಮೇ 29 - ಕನ್ನಡ ನಾಡಿನ ಸೌಹಾರ್ದ ಮತ್ತು ಜಾತ್ಯತೀತ ಪರಂಪರೆಯ ರಕ್ಷಣೆ ವಿಚಾರದಲ್ಲಿ ರಾಜೀ ಮಾಡಿಕೊಳ್ಳುವ ಪ್ರಶ್ನೆಯೇ ಇಲ್ಲ. ದ್ವೇಷ ರಾಜಕಾರಣವನ್ನು ಬಲಿ ಹಾಕಿ, ಭಯದ ವಾತಾವರಣ ಅಳಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಗೃಹ ಕಚೇರಿ ಕೃಷ್ಣದಲ್ಲಿ 40 ಕ್ಕೂ ಹೆಚ್ಚು ಮಂದಿ ಸಾಹಿತಿ ಬರಹಗಾರರು ಹಾಗೂ ನಾನಾ ಜನಪರ ಸಂಘಟನೆಗಳ ಮುಖ್ಯಸ್ಥರ ಜತೆಗೆ ನಡೆದ ಸಭೆಯಲ್ಲಿ ಸಿದ್ದರಾಮಯ್ಯ ಅವರು ಈ ಭರವಸೆ ನೀಡಿದರು.

ಪಠ್ಯ ಪುಸ್ತಕಗಳ ಮೂಲಕ ಮಕ್ಕಳ ಮನಸ್ಸನ್ನು ಕಲುಷಿತಗೊಳಿಸುವ ಅಕ್ಷಮ್ಯ ಕೃತ್ಯ ಎಸಗಲಾಗಿದೆ. ಈ ಬಗ್ಗೆ ಚರ್ಚಿಸಿ ಕ್ರಮ ತೆಗೆದುಕೊಳ್ಳಲಾಗುವುದು. ನೂತನ ಶಿಕ್ಷಣದ ಬಗ್ಗೆ ಸಮಗ್ರವಾಗಿ ಚರ್ಚಿಸಿ ನಿಷ್ಠೂರ ನಿರ್ಧಾರ ತೆಗೆದುಕೊಳ್ಳಲಾಗುವುದು. ಅನೈತಿಕ ಪೊಲೀಸ್ ಗಿರಿ, ದ್ವೇಷದ ರಾಜಕಾರಣ, ಟ್ರೋಲ್ ಮತ್ತು ಸಾಹಿತಿಗಳಿಗೆ ಬೆದರಿಕೆ ಹಾಕುವವರ ವಿರುದ್ಧ ಕಠಿಣ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ಪಠ್ಯ ಮತ್ತು ಪಾಠಗಳ ಮೂಲಕ ಮಕ್ಕಳ ಮನಸ್ಸನ್ನು ಕಲುಷಿತಗೊಳಿಸಲು ನಡೆಸಿರುವ ಕೃತ್ಯವನ್ನು ಕ್ಷಮಿಸಲು ಸಾಧ್ಯವಿಲ್ಲ. ಶೈಕ್ಷಣಿಕ ವರ್ಷ ಆರಂಭ ಆಗಿರುವುದರಿಂದ ಮಕ್ಕಳ ಶಿಕ್ಷಣಕ್ಕೆ ತೊಂದರೆ ಆಗದಂತೆ ಚರ್ಚಿಸಿ ಕ್ರಮ ಕೈಗೊಳ್ಳುತ್ತೇವೆ ಎಂದವರು ಹೇಳಿದರು.

ಕನ್ನಡ ಹೋರಾಟಗಾರರು, ರೈತ-ಕಾರ್ಮಿಕ-ದಲಿತ ಚಳವಳಿಗಳ ಹೋರಾಟಗಾರರು ಮತ್ತು ಸಾಹಿತಿ, ಬರಹಗಾರರ ಮೇಲೆ ಹಾಕಿರುವ ಸುಳ್ಳು ಮೊಕದ್ದಮೆಗಳನ್ನು ಹಿಂದಕ್ಕೆ ಪಡೆಯಲಾಗುವುದು ಎಂದು ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ.


ಹೊಸ ಶಿಕ್ಷಣ ನೀತಿ ಹೆಸರಲ್ಲಿ ಶಿಕ್ಷಣ ಕ್ಷೇತ್ರವನ್ನು ಹಾಳುಗೆಡವಲು ಅವಕಾಶ ಕೊಡುವುದಿಲ್ಲ. ಈ ಬಗ್ಗೆ ಮತ್ತೊಮ್ಮೆ ಪ್ರತ್ಯೇಕವಾದ ಸಭೆ ಕರೆದು ಸಮಗ್ರವಾಗಿ ಚರ್ಚಿಸಿ ನಿಷ್ಠೂರ ಮತ್ತು ಖಚಿತವಾದ ತೀರ್ಮಾನಗಳನ್ನು ತೆಗೆದುಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ.

ಅನೈತಿಕ ಪೊಲೀಸ್ ಗಿರಿ, ದ್ವೇಷದ ರಾಜಕಾರಣ, ತೇಜೋವಧೆ ಮಾಡುವ ಟ್ರೋಲ್‌ಗಳು (4ನೇ ಪುಟಕ್ಕೆ)

## ಗ್ಯಾರಂಟಿ ವಿಷಯದಲ್ಲಿ ಕಾಂಗ್ರೆಸ್‌ನಿಂದ ದೋಖಾ

ಬೆಂಗಳೂರು, ಮೇ 29- ಐದು ಗ್ಯಾರಂಟಿಗಳ ಜಾರಿ ವಿಚಾರದಲ್ಲಿ ಕಾಂಗ್ರೆಸ್ ಜನರಿಗೆ ದೋಖಾ ಮಾಡಿದೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಟೀಕಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಬೊಮ್ಮಾಯಿ, ಜನರಿಗೆ ಕಾಂಗ್ರೆಸ್ ದೋಖಾ ಮಾಡಿದೆ. ತಾತ್ವಿಕ ಒಪ್ಪಿಗೆಯಲ್ಲಿ ಎಲ್ಲರಿಗೂ ಉಚಿತ ಅಂದಿದ್ದರು. ಈಗ ಬೇರೆ ಬೇರೆ ಹೇಳಿಕೆ ನೀಡುತ್ತಿದ್ದಾರೆ. ಕಾಂಗ್ರೆಸ್‌ನವರು ಹೇಳುವುದೊಂದು ಮಾಡುವುದೊಂದು ಎಂದು ವಾಗ್ದಾಳಿ ನಡೆಸಿದರು.



ಬಿಜೆಪಿ ಸರ್ಕಾರ ಈ ಹಿಂದೆ ನೀಡಿರುವ ಭರವಸೆಗಳನ್ನು ಈಡೇರಿಸಿಲ್ಲ ಎಂದು ಕಾಂಗ್ರೆಸ್ ಮಾಡುತ್ತಿರುವ ಆರೋಪಗಳನ್ನೂ ಬೊಮ್ಮಾಯಿ ತಳ್ಳಿ ಹಾಕಿದ್ದಾರೆ.

ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಗ್ಯಾರಂಟಿಗಳ ಕಾರಣದಿಂದಾಗಿ ಜನರು ಅಧಿಕಾರ ನೀಡಿದ್ದಾರೆ. ಅದಕ್ಕೆ ಉತ್ತರಿಸದೇ, ಹಿಂದಿನ ಸರ್ಕಾರದ (3ನೇ ಪುಟಕ್ಕೆ)

## ಮಣ್ಣಿಗೆ ನ್ಯಾನೋ ಕ್ಲೇ, ಮೊಟ್ಟೆಯ ಕ್ಯಾಲ್ಸಿಯಂ ಗುಳಿಗೆ

### ಬಿಐಇಟಿ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಂದ 56 ಮಾದರಿಗಳ ಪ್ರದರ್ಶನ



ದಾವಣಗೆರೆ, ಮೇ 29 - ಮಣ್ಣಿನ ಫಲವತ್ತತೆ ಹೆಚ್ಚಿಸಲು ನ್ಯಾನೋ ಕ್ಲೇ ಬಳಕೆ, ಕೋಳಿ ಮೊಟ್ಟೆ ಚಿಪ್ಪಿನಿಂದ ಕ್ಯಾಲ್ಸಿಯಂ ಗುಳಿಗೆ, ಹೊಲಗಳ ಮೇಲೆ ಆಧುನಿಕ ನಿಗಾ... ಇವೆಲ್ಲ ಬಿ.ಐ.ಇ.ಟಿ. ಕಾಲೇಜಿನ ಇಂಜಿನಿಯರಿಂಗ್ ವಿದ್ಯಾರ್ಥಿಗಳು ರೂಪಿಸಿರುವ ಪ್ರಾಯೋಗಿಕ ಮಾದರಿಗಳು.

ನಗರದ ಬಿ.ಐ.ಇ.ಟಿ. ಕಾಲೇಜಿನಲ್ಲಿ 'ನಿರ್ಮಾಣ 3.0' ಯೋಜನೆಗಳ ಪ್ರಾತ್ಯಕ್ಷಿಕೆಯನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಹತ್ತು ಶಾಖೆಗಳ 56 ಮಾದರಿಗಳನ್ನು ಪ್ರದರ್ಶಿಸಲಾಗಿತ್ತು.

ಬರಡಾಗಿರುವ ಜಮೀನನ್ನು ಮತ್ತೆ ಫಲವತ್ತಾಗಿ ಮಾಡುವ ದ್ರವರೂಪದ ನ್ಯಾನೋ ಕ್ಲೇ ರೂಪಿಸಿದ್ದೇವೆ. ಇದರಿಂದ ಮಣ್ಣಿನ ಫಲವತ್ತತೆ ಹೆಚ್ಚಾಗುತ್ತದೆ ಹಾಗೂ ಇಳುವರಿಯೂ ಹೆಚ್ಚಾಗುತ್ತದೆ ಎಂದು ಬಿಐಇಟಿ ಕಾಲೇಜಿನ ಉಪನ್ಯಾಸಕ ಹಾಗೂ ಯೋಜನೆಯ ಮಾರ್ಗದರ್ಶಕ ಡಾ. ಎ. ಎಸ್. ಶರಣ್ ತಿಳಿಸಿದ್ದಾರೆ.

ನಗರದ ರಂಗನಾಥ ಬಡಾವಣೆಯಲ್ಲಿನ ಮಣ್ಣಿನಲ್ಲಿ ನ್ಯಾನೋ ಕ್ಲೇಗೆ ಅಗತ್ಯವಾದ ಗುಣ ಇದ್ದದ್ದು ಕಂಡು ಬಂದಿತ್ತು. ಅದನ್ನು ಬಳಸಿಕೊಂಡಿದ್ದೇವೆ. ಮಣ್ಣಿನಿಂದಲೇ ಲಭ್ಯವಾಗುವ ಈ ನ್ಯಾನೋ ಕ್ಲೇ ಗೊಬ್ಬರ ಬಳಸುವುದರಿಂದ ಬರಡು ಭೂಮಿಯೂ (4ನೇ ಪುಟಕ್ಕೆ)

## ಕಾಳಾಪುರ ಗ್ರಾಮದ ಮಕ್ಕಳಿಗೆ ಉಚಿತ ಶಿಕ್ಷಣ

### ಶ್ರೀ ತರಳಬಾಳು ಜಗದ್ಗುರುಗಳ ಆದೇಶ ಜಾರಿ



ದಾವಣಗೆರೆ, ಮೇ 29- ಇತ್ತೀಚೆಗೆ ಕೊಟ್ಟೂರಿನಲ್ಲಿ ಜರುಗಿದ ತರಳಬಾಳು ಹುಣ್ಣಿಮೆ ಮಹೋತ್ಸವದ ಸಂದರ್ಭದಲ್ಲಿ ಅಲ್ಲಿನ ಕಾಳಾಪುರ ಗ್ರಾಮವನ್ನು ದತ್ತು ತೆಗೆದುಕೊಳ್ಳುವುದಾಗಿ ಶ್ರೀ ತರಳಬಾಳು ಜಗದ್ಗುರುಗಳು ಘೋಷಿಸಿದ್ದರು. ಅದು ಈಗ ಜಾರಿಯಾಗಿದೆ. ಆ ಪ್ರಕಾರ ಕಾಳಾಪುರ ಗ್ರಾಮದ ಮಕ್ಕಳಿಗೆ ನಾಡಿನ ನಾನಾ ಸ್ಥಳಗಳಲ್ಲಿರುವ ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ಶಾಲಾ-ಕಾಲೇಜ್‌ಗಳಲ್ಲಿ ನರ್ಸರಿಯಿಂದ ಕಾಲೇಜ್‌ನವರೆಗೆ ಉಚಿತ ಶಿಕ್ಷಣ ನೀಡಲು ತೀರ್ಮಾನಿಸಲಾಗಿದೆ. ಆಸಕ್ತ ಪೋಷಕರು ತಮ್ಮ ಮಕ್ಕಳ (4ನೇ ಪುಟಕ್ಕೆ)

## ರೋಲ್ಸ್ ರಾಯ್ಸ್ ವಿರುದ್ಧ ಭ್ರಷ್ಟಾಚಾರದ ಪ್ರಕರಣ

ನವದೆಹಲಿ, ಮೇ 29 – ತರಬೇತಿ ವಿಮಾನ ಪೂರೈಕೆಗೆ ಸಂಬಂಧಿಸಿದಂತೆ ಭ್ರಷ್ಟಾಚಾರ ಎಸಗಿದ ಆರೋಪದ ಮೇಲೆ ಬ್ರಿಟನ್‌ನ ರಕ್ಷಣಾ ಕಂಪನಿಯಾದ ರೋಲ್ಸ್ ರಾಯ್ಸ್ ಪಿಎಲ್‌ಸಿ ವಿರುದ್ಧ ಸಿ.ಬಿ.ಐ. ಪ್ರಕರಣ ದಾಖಲಿಸಿದೆ.

**ವಿಮಾನ ಪೂರೈಕೆಯಲ್ಲಿ ಅವ್ಯವಹಾರದ ಬಗ್ಗೆ ಎಫ್.ಐ.ಆರ್.**

ವಾಯುಪಡೆ ಹಾಗೂ ನೌಕಾ ದಳಕ್ಕೆ ಹಾಕ್ 115 ಆಧುನಿಕ ತರಬೇತಿ ವಿಮಾನ ಪೂರೈಸುವಾಗ ಭ್ರಷ್ಟಾಚಾರ ನಡೆಸಲಾಗಿದೆ ಎಂದು ಆರೋಪಿಸಲಾಗಿದೆ.

ರೋಲ್ಸ್ ರಾಯ್ಸ್ ಇಂಡಿಯಾ ನಿರ್ದೇಶಕ ಟಿಮ್ ಜೋನ್ಸ್, ಶಸ್ತ್ರಾಸ್ತ್ರ ಡೀಲರ್‌ಗಳಾದ ಸುಧೀರ್ ಚೌಧರಿ ಹಾಗೂ ಮಗ ಭಾನು ಚೌಧರಿ, ರೋಲ್ಸ್ ರಾಯ್ಸ್ ಪಿಎಲ್‌ಸಿ ಹಾಗೂ ಬ್ರಿಟಿಷ್ ಏರೋಸ್ಪೇಸ್ ಸಿಸ್ಟಂಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಕಂಪನಿಯ ವಹಿವಾಟಿನಲ್ಲಿ (4ನೇ ಪುಟಕ್ಕೆ)

WANTED
B.Com.,/ PUC Candidates with Computer Knowledge
Graduates with Computer knowledge for account maintainance
MANGALA CONSTRUCTIONS
DAVANGERE.
8095963636, 9844163163, 8861462469

ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು



ಶ್ರೀ ಪಿ. ತಿಮ್ಮಪ್ಪ, ರಾಜ್ಯಾಧ್ಯಕ್ಷರು
ವಿಶ್ವ ಕನ್ನಡ ಸಾಹಿತ್ಯ ಸಾಂಸ್ಕೃತಿಕ ಪರಿಷತ್ತು, ಬೆಂಗಳೂರು.
ಶ್ರೀಮತಿ ಶರಣಮ್ಮ (ಶಾರದಮ್ಮ)
ರಾಜ ಮಾತಂಗ ಮಹಿಳಾ ವಿದ್ಯಾಸಂಸ್ಥೆ ಸ್ಥಾಪಕಿ, ಕಾರ್ಯದರ್ಶಿ
ಇವರು 50 ವರ್ಷಗಳ ಆದರ್ಶ ದಾಂಪತ್ಯ ಜೀವನಕ್ಕೆ ಪಾದಾರ್ಪಣೆ ಮಾಡಿರುವುದರಿಂದ ಹಾರ್ದಿಕ ಶುಭಾಶಯಗಳು.
ಶುಭಾಶಯ ಕೋರುವವರು :
+ ಶ್ರೀ/ಶ್ರೀಮತಿ ಪದ್ಮಾವತಿ ವಿಜಯಕುಮಾರ್ ರಾಂಪುರೆ + ದ್ರಾಕ್ಷಾಯಿಣಿ ಪರಮೇಶ್ + ಭಾನುಮತಿ ಶಿವಪ್ಪ + ಭಾಗ್ಯಲಕ್ಷ್ಮಿ ಗೋವಿಂದ + ರಾಘವೇಂದ್ರ ಸ್ವಾಮಿ + ಚಂದನ್ + ಪೂಜಾ + ಪ್ರಾರ್ಥನ + ತನಿಷ್ಕಾ + ಸಿರಿಶಾ + ಜೀವನ ರಾಜ್ + ಅಪಾರ ಬಂಧುಗಳು ಹಾಗೂ ಸ್ನೇಹಿತರುಗಳು.



# ಪರಮೇಶ್ವರ ನಾಯ್ಕಗೆ ಸಚಿವ ಸ್ಥಾನ ನೀಡಲು ಆಗ್ರಹ

ಹರಪನಹಳ್ಳಿ, ಮೇ 29- ಮಾಜಿ ಶಾಸಕ ಪಿ.ಟಿ ಪರಮೇಶ್ವರ ನಾಯ್ಕ ಅವರಿಗೆ ಸಿದ್ದರಾಮಯ್ಯ ಸಂಪುಟದಲ್ಲಿ ಸಚಿವ ಸ್ಥಾನ ನೀಡುವಂತೆ ಬಂಜಾರ್ ಸಮುದಾಯ ಆಗ್ರಹ ಮಾಡಿದೆ.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಜರುಗಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಬಾರಿ ಲಂಬಾಣಿ ಸಮಾಜವು ರಾಜ್ಯದಲ್ಲಿ ಶೇ.85 ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದೆ. ರಾಜ್ಯದಲ್ಲಿ 40 ಲಕ್ಷಕ್ಕೂ ಅಧಿಕ ಸಂಖ್ಯೆಯಲ್ಲಿರುವ ಬಂಜಾರ್ ಸಮುದಾಯದ ಶಾಸಕರಿಗೆ ಸಚಿವ ಸ್ಥಾನ ನೀಡಬೇಕು ಎಂದು ಸಮುದಾಯದ ಮುಖಂಡರು ಆಗ್ರಹಿಸಿದರು.


ಹರಪನಹಳ್ಳಿ

ಟಿಎಪಿಎಂಎಸ್ ಮಾಜಿ ಅಧ್ಯಕ್ಷ ತಿಮ್ಮನಾಯ್ಕ ಮಾತನಾಡಿ, ಬಂಜಾರ್ ಸಮಾಜ ಇನ್ನೂ ಹಿಂದುಳಿದಿದೆ. ಸಾಕಷ್ಟು ಜಮೀನು, ಉದ್ಯೋಗ ಅವಕಾಶ ಇಲ್ಲದ ಕಾರಣ ಉದ್ಯೋಗ ಅರಸಿಕೊಂಡು ಈಗಲೂ ಗೋವಾ, ಮಂಗಳೂರು ಕಾಫಿ ತೋಟದ ಕಡೆಗೆ ವಲಸೆ ಹೋಗುತ್ತಿದ್ದಾರೆ. ಅದೇ ದುಡಿಮೆಯಿಂದ ಅವರ ಕುಟುಂಬಗಳು ಜೀವಿಸುತ್ತಿವೆ. ಶಾಶ್ವತ ಯೋಜನೆಗಳಿಂದ ಸಮಾಜ ವಂಚಿತಗೊಂಡಿದೆ. ಸಮಾಜದ ಬಗ್ಗೆ ಹೊಸ ಯೋಜನೆ ಹಾಕಿಕೊಳ್ಳಲು ಸರ್ಕಾರದಲ್ಲಿ ಸಮಾಜದವರಿಗೆ ಸಚಿವ ಸ್ಥಾನ ನೀಡಿದರೆ ಕಾಳಜಿ ವಹಿಸುತ್ತಾರೆ ಎಂದರು.

ಟಿಎಪಿಎಂಎಸ್ ಮಾಜಿ ಅಧ್ಯಕ್ಷ ಎಲ್. ಬಿ. ಹಾಲೇಶ್ ನಾಯ್ಕ ಮಾತನಾಡಿ, ಲಂಬಾಣಿ ಸಮಾಜದ ಕಾಂಗ್ರೆಸ್ ಶಾಸಕ ರುದ್ರಪ್ಪ ಲಮಾಣಿ, ವಿಧಾನಪರಿಷತ್ ಸದಸ್ಯ ಪ್ರಕಾಶ್ ರಾಠೋಡ್, ಹೂವಿನ ಹಡಗಲಿ ಮಾಜಿ ಶಾಸಕ ಪಿ.ಟಿ.ಪರಮೇಶ್ವರ ನಾಯ್ಕರವರನ್ನು ಪರಿಷತ್ತಿಗೆ ಆಯ್ಕೆ ಮಾಡಿ ಸಚಿವ ಸ್ಥಾನ ನೀಡಬೇಕೆಂದು ಒತ್ತಾಯಿಸಿದರು.

ವೇದುನಾಯ್ಕ ಮಾತನಾಡಿ, ಬಂಜಾರ್ ಸಮುದಾಯದ ಅನೇಕ ತಾಂಡಾಗಳು ಮೂಲಭೂತ ಸೌಲಭ್ಯಗಳಿಂದ ವಂಚಿತಗೊಂಡಿದ್ದು, ಇವು ಕಂದಾಯ ಗ್ರಾಮಗಳಾಗಲು ಸಮಾಜದ ಶಾಸಕರಿಗೆ ಸರ್ಕಾರದಲ್ಲಿ ಮಂತ್ರಿ ಸ್ಥಾನ ಹೊಂದಿದರೆ ಉಪಯುಕ್ತವಾಗುತ್ತದೆ. ಹೀಗಾಗಿ ಬಂಜಾರ ಸಮಾಜಕ್ಕೆ ನ್ಯಾಯ ಒದಗಿಸಿದಂತಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಶಿವಣ್ಣನಾಯ್ಕ, ತಾವರ್‍ಯಾನಾಯ್ಕ, ಭೀಮಾನಾಯ್ಕ, ಮಹಾಂತೇಶ್ ನಾಯ್ಕ, ನೇಮ್ಯಾನಾಯ್ಕ, ಕುಮಾರ್ ನಾಯ್ಕ ಮತ್ತಿತರರು ಇದ್ದರು.

# ಬೆಳೆ ವಿಮೆ ಹಣ ರೈತರ ಖಾತೆಗೆ ಜಮಾ ಮಾಡದಿದ್ದರೆ ಶಿಸ್ತು ಕ್ರಮ

## ರಾಣೇಬೆನ್ನೂರು : ಜಿಲ್ಲಾ ಲೀಡ್ ಬ್ಯಾಂಕ್ ವ್ಯವಸ್ಥಾಪಕ ಅಣ್ಣಯ್ಯ ಎಚ್ಚರಿಕೆ



ರಾಣೇಬೆನ್ನೂರು, ಮೇ 29- ಬೆಳೆವಿಮೆ ಸೇರಿದಂತೆ ಸಂಧ್ಯಾ ಸುರಕ್ಷ, ವಿಧವಾ ವೇತನ, ಉದ್ಯೋಗ ಖಾತ್ರಿ ಸೇರಿದಂತೆ ಸರಕಾರದ ವಿವಿಧ ಯೋಜನೆಯ ಹಣವನ್ನು ರೈತರ ಸಾಲದ ಖಾತೆಗೆ ಜಮಾ ಮಾಡಿಕೊಂಡು 'ಲಾಕ್' ಮಾಡಿಕೊಂಡಿರುವುದು ಸಾಬೀತಾಗಿದೆ. ಕೂಡಲೇ ನಾಳೆಯಿಂದಲೇ ಮರಳಿ ರೈತರ ಖಾತೆಗೆ ಜಮಾ ಮಾಡಬೇಕು ಇಲ್ಲದಿದ್ದರೆ ಸಂಬಂಧಿಸಿದ ಬ್ಯಾಂಕ್ ವ್ಯವಸ್ಥಾಪಕರ ಮೇಲೆ ಶಿಸ್ತು ಕ್ರಮ ಜರುಗಿಸಲಾಗುವುದೆಂದು ಲೀಡ್ ಬ್ಯಾಂಕ್ ವ್ಯವಸ್ಥಾಪಕ ಅಣ್ಣಯ್ಯ ಎಚ್ಚರಿಕೆ ನೀಡಿದರು.

ಅವರು ಇಂದು ಮಾಕನೂರಿನ ಯೂನಿಯನ್ ಬ್ಯಾಂಕ್‌ನವರು ರೈತರ ಹೆಸರಿಗೆ ಮಂಜೂರಾಗಿದ್ದ ವಿವಿಧ ಯೋಜನೆಯ ಹಣವನ್ನು ಸಾಲದ ಖಾತೆಗೆ ಜಮಾಮಾಡಿಕೊಂಡಿದ್ದ ಬಗ್ಗೆ ಕರ್ನಾಟಕ ರಾಜ್ಯ ರೈತ ಸಂಘಟನೆಯ ಮುಖಂಡರಾದ ರವೀಂದ್ರಗೌಡ ಎಫ್. ಪಾಟೀಲ ಮತ್ತು ಈರಣ್ಣ ಹಲಗೇರಿ ನೇತೃತ್ವದಲ್ಲಿ ನಾಳೆ ಹೆದ್ದಾರಿ ತಡೆ ಕಾರ್ಯಕ್ರಮವನ್ನು ಹಮ್ಮಿಕೊಂಡ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಮತ್ತು ಉಪವಿಭಾಗಾಧಿಕಾರಿಗಳ ಆದೇಶದ ಮೇರೆಗೆ ಪ್ರತಿಭಟನೆಯ ಮುನ್ನಾ ದಿನವೆ ಮಾಕನೂರಿಗೆ ಬಂದು ರೈತರು ಮತ್ತು ಬ್ಯಾಂಕ್ ಅಧಿಕಾರಿಗಳ ಸಭೆ ನಡೆಸಿ, ಚರ್ಚಿಸಿ ಬ್ಯಾಂಕ್‌ನವರಿಂದ ಆದ ತಪ್ಪನ್ನು ಸರಿಪಡಿಸಿ ನೊಂದ ರೈತರಿಗೆ ನ್ಯಾಯಯುತವಾಗಿ ಬರಬೇಕಾಗಿದ್ದ ಸರಕಾರದ ವಿವಿಧ ಯೋಜನೆಯ ಹಣವನ್ನು ಮುಟ್ಟುಗೋಲು ಹಾಕಿಕೊಂಡ ಬಗ್ಗೆ ಖೇದ ವ್ಯಕ್ತಪಡಿಸಿದ ಅವರು ಮುಂದೆಂದೂ ಇಂಥ ಪ್ರಮಾದ ಆಗುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದರು.

ನೇತೃತ್ವ ವಹಿಸಿ ಮಾತನಾಡಿದ ರವೀಂದ್ರಗೌಡ ಎಫ್. ಪಾಟೀಲ, ರೈತರು ಸುಳ್ಳು ಹೇಳಿ ಬದುಕುವವರಲ್ಲ, ಸ್ವಾಭಿಮಾನಿಗಳು ಅವರಿಗೆ ಕೆಲವು ಅಧಿಕಾರಿಗಳಿಂದ ಯೋಜನೆಗಳ ಉಪಯೋಗ ಸಿಗುತ್ತಿಲ್ಲ ಅನ್ನದಾತನ ಬಗ್ಗೆ ಇಂಥ ನಿರ್ಲಕ್ಷ ಸಲ್ಲದು ಎಂದು ಎಚ್ಚರಿಸಿದರು.

ಜಿಲ್ಲಾಧ್ಯಕ್ಷ ಈರಣ್ಣ ಹಲಗೇರಿ ಮಾತನಾಡಿ ನಮ್ಮ ಮುಂದಿನ ಹೋರಾಟ 2 ನೇ ಹಂತದ 'ಓಟಿಎಸ್' ಯೋಜನೆಯ ಕಡೆ, 'ಓಟಿಎಸ್' ಯೋಜನೆ ಸಾವಿರಾರು ಅರ್ಹ ರೈತರಿಗೆ ತಲುಪದೆ ಇರಲು ಬ್ಯಾಂಕ್ ಅಧಿಕಾರಿಗಳ ರೈತ ವಿರೋಧಿ ನೀತಿಯೇ ಕಾರಣವಾಗಿದೆ ಎಂದರು.

# ರಾಣೇಬೆನ್ನೂರು : ಮಂತ್ರಿಮಂಡಲದಲ್ಲಿ ಬಂಜಾರ ಸಮಾಜ ನಿರ್ಲಕ್ಷ್ಯ

**ತೀವ್ರ ಅಸಮಾಧಾನ, ಹೋರಾಟದ ಸಿದ್ಧತೆ**

ರಾಣೇಬೆನ್ನೂರು, ಮೇ 29- ಕಾಂಗ್ರೆಸ್ ಪಕ್ಷದಿಂದ ಆಯ್ಕೆಯಾಗಿರುವ ಬಂಜಾರ ಸಮಾಜದ ಏಕೈಕ ಶಾಸಕರಾದ ಹಾವೇರಿಯ ರುದ್ರಪ್ಪ ಲಮಾಣಿ ಅವರಿಗೆ ಮಂತ್ರಿಗಿರಿ ತಪ್ಪಿಸಿ, ಸಿದ್ದರಾಮಯ್ಯ ಸರ್ಕಾರ ಬಂಜಾರ ಸಮಾಜಕ್ಕೆ ಬಹಳಷ್ಟು ಅನ್ಯಾಯ ಮಾಡಿದೆ ಎಂದು ರಾಣೇಬೆನ್ನೂರು ತಾಲ್ಲೂಕು ಬಂಜಾರ ಸೇವಾ ಸಂಘದ ಅಧ್ಯಕ್ಷ ರಾಮಣ್ಣ ನಾಯ್ಕ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಪ್ರವಾಸಿ ಮಂದಿರದಲ್ಲಿ ಇಂದು ನಿವೃತ್ತ ನೌಕರರ ಜೊತೆಗೂಡಿ ಪತ್ರಿಕಾಗೋಷ್ಠಿ ನಡೆಸಿದರು. ಬರಲಿರುವ ಲೋಕಸಭೆ, ವಿಧಾನ ಪರಿಷತ್, ಜಿ.ಪಂ., ತಾ.ಪಂ. ಚುನಾವಣೆಗಳನ್ನು ಗಮನದಲ್ಲಿರಿಸಿಕೊಳ್ಳದೇ 40 ಲಕ್ಷದಷ್ಟು ಮತದಾರರಿರುವ ನಮ್ಮನ್ನು ಅಲಕ್ಷಿಸಿರುವುದು, ಜೊತೆಗೆ ಐದು



ಜನ ಕಾಂಗ್ರೆಸ್ ಶಾಸಕರಿರುವ ಹಾವೇರಿ ಜಿಲ್ಲೆಯನ್ನೂ ಸಹ ಅಲಕ್ಷಿಸಿರುವುದು ಕಾಂಗ್ರೆಸ್ ಪಕ್ಷಕ್ಕೆ ಭಾರೀ ಆಘಾತ ಮಾಡಬಹುದು ಎಂದು ರಾಮಣ್ಣ ಹೇಳಿದರು.

ಮುಂದೆ ಮಂತ್ರಿ ಮಂಡಲ ಪುನರ್‌ರಚಿಸುವ ಸಂದರ್ಭದಲ್ಲಿ ನಮ್ಮನ್ನು ಗಣನೆಗೆ ತೆಗೆದುಕೊಳ್ಳದಿದ್ದರೆ ನಮ್ಮ ಮನವಿ ತೀವ್ರ ಹೋರಾಟದತ್ತ ನಡೆಯಲಿದೆ ಎಂದು ಕೆಲವರು ಅಭಿಪ್ರಾಯಿಸಿದರು. ಓಬ್ಯಾನಾಯ್ಕ, ಮಹಾಂತೇಶ ಲಮಾಣಿ, ಜಿ.ಕೆ. ಲಮಾಣಿ, ಹನುಮಂತ ಲಮಾಣಿ, ಹಾಲೇಶ ಲಮಾಣಿ, ಲಂಬಾಣಿ ಸಂಘದ ಹಾಗೂ ನಿವೃತ್ತ ನೌಕರರ ಸಂಘದ ಪದಾಧಿಕಾರಿಗಳು ಗೋಷ್ಠಿಯಲ್ಲಿದ್ದರು.

# ನಾಗನರಸನಹಳ್ಳಿಯಲ್ಲಿ 'ಸಾಮಾಜಿಕ ಸಾಮರಸ್ಯದೆಡೆಗೆ ಯುವ ಜನತೆ

ದಾವಣಗೆರೆ ವಿಶ್ವವಿದ್ಯಾನಿಲಯ ರಾಷ್ಟ್ರೀಯ ಸೇವಾ ಯೋಜನಾ ವಿಭಾಗ ಹಾಗೂ ಸುಶೀಲಮ್ಮ ಬಂಕಾಪುರದ ಚನ್ನಬಸಪ್ಪ ಪ್ರಥಮ ದರ್ಜೆ ಮಹಿಳಾ ಕಾಲೇಜು (ಎಸ್.ಬಿ.ಸಿ.) ಹಾಗೂ ಅಥಣಿ ಸ್ನಾತಕೋತ್ತರ ಕೇಂದ್ರ ಇವರುಗಳ ಸಂಯುಕ್ತಾಶ್ರಯದಲ್ಲಿ ವಿಶೇಷ ಶಿಬಿರವು ನಾಗರಸನಹಳ್ಳಿಯ ಶ್ರೀ ವೀರಭದ್ರಸ್ವಾಮಿ ದೇವಸ್ಥಾನದ ಆವರಣದಲ್ಲಿ ಇಂದು ನಡೆಯಲಿದೆ.

ಇಂದು ಬೆಳಿಗ್ಗೆ 6.30 ಕ್ಕೆ ಕೆ. ವಾಸಪ್ಪ ಅವರಿಂದ ಧ್ವಜಾರೋಹಣ ನಡೆಯಲಿದೆ. ಬೆಳಿಗ್ಗೆ 8 ಕ್ಕೆ ಜಾನುವಾರುಗಳ ಉಚಿತ ತಪಾಸಣಾ ಶಿಬಿರ. ಭಾಗವಹಿಸುವವರು : ಡಾ. ಶಿವಕುಮಾರ್, ಡಾ. ಸತೀಶ್ ಕೆ.ಜಿ., ಡಾ. ಹೇಮಂತ್ ಕುಮಾರ್ ಬಿ.ಕೆ., ಡಾ. ಯಶಸ್ವಿ ಬಿ. ಕಾಶೀಪುರ, ಡಾ. ಮುತ್ತುರಾಜ್ ಯಾದವ್. ಇ. ಸಭಾ ಕಾರ್ಯಕ್ರಮ : ಸಂಜೆ 6 ಗಂಟೆಗೆ. ಅಧ್ಯಕ್ಷತೆ : ಎನ್. ಎಸ್. ಪ್ರದೀಪ್. ಉಪನ್ಯಾಸ : ಕೆ.ಬಿ. ರಂಗಪ್ಪ - ವಿಷಯ : ಕೃಷಿಯಲ್ಲಿ ಯುವಕರ ಪಾತ್ರ. ಮತ್ತು ಪ್ರೊ. ಎಂ.ಡಿ. ಅಣ್ಣಯ್ಯ - ವಿಷಯ : ವಚನಗಳ ಪ್ರಸ್ತುತತೆ. ಮುಖ್ಯ ಅತಿಥಿಗಳು : ಹಾಲೇಶ್. ಟಿ, ಬೇವಿನಹಳ್ಳಿ ಶಿವಪ್ಪ, ಜಿ. ರುದ್ರಪ್ಪ, ರಾಜ್‌ಸಾಬ್.

**ದಿನಾಂಕ 31ರ ಬುಧವಾರ** ಬೆಳಿಗ್ಗೆ 6.30 ಕ್ಕೆ ವೆಂಕಟರೆಡ್ಡಿ ಅವರಿಂದ ಧ್ವಜಾರೋಹಣ ನಡೆಯಲಿದೆ. ನಂತರ ಸಮಾರೋಪ ಸಮಾರಂಭ. ಅಧ್ಯಕ್ಷತೆ : ಡಾ. ಕೆ. ಷಣ್ಮುಖ. ಮುಖ್ಯ ಅತಿಥಿಗಳು : ಡಾ. ಕೆ. ಶಿವಶಂಕರ್, ಡಾ. ಅಶೋಕ್‌ಕುಮಾರ್, ಎಂ.ಸಿ. ಗುರು, ಡಿ.ಹೆಚ್. ವಿರೂಪಾಕ್ಷಪ್ಪ, ಸುರೇಶ್, ಗೌಡರ ಚಂದ್ರಯ್ಯ, ಎಂ.ಪಿ. ಚನ್ನವೀರಪ್ಪ, ಸುರೇಶ್ ಬಿ.ಎಸ್., ಪ್ರಕಾಶ್ ಡಿ.ವಿ.

# ಈರುಳ್ಳಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ ಪ್ರಾತ್ಯಕ್ಷಿಕೆ ತರಬೇತಿ

ದಾವಣಗೆರೆ, ಮೇ 29- ಪ್ರಸ್ತುತ ಮುಂಗಾರು ಹಂಗಾಮಿನಲ್ಲಿ ಜಗಳೂರು ತಾಲ್ಲೂಕಿನಾದ್ಯಂತ ಬಿತ್ತನೆಗೆ ರೋಗ ನಿರೋಧಕ ಹಾಗೂ ಅಧಿಕ ಇಳುವರಿ ಕೊಡುವ 'ಭೀಮಾ ಸೂಪರ್' ಈರುಳ್ಳಿ ತಳಿ ಸೂಕ್ತವಾಗಿದೆ ಎಂದು ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕಾ ತಜ್ಞ ಎಂ.ಜಿ. ಬಸವನಗೌಡ ತಿಳಿಸಿದರು.



ಜಗಳೂರು

ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ ಹಾಗೂ ಬಿದರಕೆರೆ ತರಳಬಾಳು ಅಮೃತ ರೈತ ಉತ್ಪಾದಕ ಕಂಪನಿ ಲಿಮಿಟೆಡ್ ಇವರ ಸಹಯೋಗದಲ್ಲಿ ಹಮ್ಮಿಕೊಂಡ 'ಈರುಳ್ಳಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ' ಮುಂಚೂಣಿ ಪ್ರಾತ್ಯಕ್ಷಿಕೆಯ ತರಬೇತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕಳೆದ ವರ್ಷ ಅರಿಶಿನಗುಂಡಿ ಮತ್ತು ಕಟ್ಟಿಗೆಹಳ್ಳಿ ಗ್ರಾಮಗಳಲ್ಲಿ ಹಮ್ಮಿಕೊಂಡಿದ್ದ ಇದೇ ಮುಂಚೂಣಿ ಪ್ರಾತ್ಯಕ್ಷಿಕೆಯು ಅತೀ ಮಳೆಯ ನಡುವೆಯೂ ಉತ್ತಮ ಇಳುವರಿಯನ್ನು ನೀಡಿರುವುದನ್ನು ಸ್ಮರಿಸಿದ ಅವರು, ಪ್ರಸ್ತುತ ತಳಿ ನೇರಳೆ ಎಲೆ ಮಚ್ಚೆ ರೋಗಕ್ಕೆ ನಿರೋಧಕತೆ ಇದ್ದು, ನಾಟಿ ಸಂದರ್ಭದಲ್ಲಿ ಟ್ರೈಕೊಡರ್ಮಾದೊಂದಿಗೆ ಬೀಜೋಪಚಾರ ಮಾಡುವುದರಿಂದ ಬೀಜದಿಂದ ಹರಡುವ ರೋಗಗಳನ್ನು ತಡೆಯಲು ಅನುಕೂಲವಾಗುತ್ತದೆ ಎಂದು ತಿಳಿಸಿದರು.

ಬಿತ್ತನೆ ಮಾಡಿದ 45, 60 ನೇ ದಿನದಂದು ಬೆಳೆಗೆ ತರಕಾರಿ ಸ್ಪೆಷಲ್ 5 ಗ್ರಾಂ ಪ್ರತೀ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸುವುದರಿಂದ ಗಡ್ಡೆಯ ಗಾತ್ರ ಮತ್ತು ತೂಕವನ್ನು ಹೆಚ್ಚಿಸಲು ಅನುಕೂಲವಾಗುತ್ತದೆ. ಹಾಗೆಯೇ ರಸ ಹೀರುವ ಕೀಟಗಳ ನಿಯಂತ್ರಣಕ್ಕೆ ಹಳದಿ ಮತ್ತು ನೀಲಿ ಅಂಟು ಪಟ್ಟಿಗಳನ್ನು ಎಕರೆಗೆ 10 ರಂತೆ ಅಲ್ಲಲ್ಲಿ ಕಟ್ಟುವುದರಿಂದ ಕೀಟಗಳ ಹಾನಿಯ ಮಟ್ಟವನ್ನು ತಿಳಿಯಲು ಅನುಕೂಲವಾಗುತ್ತದೆ ಎಂದು ತಿಳಿಸಿದರು.

ಬೇಸಾಯ ತಜ್ಞ ಬಿ.ಓ. ಮಲ್ಲಿಕಾರ್ಜುನ ಅವರು ಪ್ರಸ್ತುತ ಮುಂಗಾರು ಹಂಗಾಮಿನಲ್ಲಿ ವಿವಿಧ ಬೆಳೆಗಳಲ್ಲಿ ಕೈಗೊಳ್ಳಬೇಕಾದ ತಂತ್ರಜ್ಞಾನಗಳ ಬಗ್ಗೆ ವಿವರವಾದ ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಬಿದರಕೆರೆ ತರಳಬಾಳು ಅಮೃತ ರೈತ ಉತ್ಪಾದಕ ಕಂಪನಿಯ ಅಧ್ಯಕ್ಷ ಮಂಜುನಾಥ್, ಉಪಾಧ್ಯಕ್ಷ ಸೋಮನಗೌಡರು, ನಿರ್ದೇಶಕ ನಾಗರಾಜ, ಜಿಲ್ಲಾ ಯೋಜನಾ ಸಂಯೋಜಕ ಎನ್.ಆರ್. ಆಕಾಶ್, ಬಸವನಗೌಡ, ಕೃಷ್ಣ ಮೂರ್ತಿ ಹಾಗೂ ಪ್ರಗತಿಪರ ರೈತರು ಭಾಗವಹಿಸಿದ್ದರು.

# ಬೆಳ್ಳೂಡಿ ಮಠಕ್ಕೆ ಶಾಸಕ ವಿಜಯೇಂದ್ರ



ಮಲೇಬೆನ್ನೂರು, ಮೇ 29- ಶಿಕಾರಿಪುರ ಕ್ಷೇತ್ರದ ನೂತನ ಶಾಸಕ ಬಿ.ವೈ. ವಿಜಯೇಂದ್ರ ಅವರು, ಭಾನುವಾರ ಸಂಜೆ ಕಾಗಿನೆಲೆ ಕನಕ ಗುರುಪೀಠದ ಬೆಳ್ಳೂಡಿ ಶಾಖಾ ಮಠಕ್ಕೆ ಆಗಮಿಸಿ, ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿ ಅವರ ಆಶೀರ್ವಾದ ಪಡೆದುಕೊಂಡರು. ಈ ವೇಳೆ ಶ್ರೀಗಳು ವಿಜಯೇಂದ್ರ ಅವರನ್ನು ಸನ್ಮಾನಿಸಿ, ಅಭಿನಂದಿಸಿದರು.

# ಬಾಪೂಜಿ ಕಾಲೇಜ್ ಆಫ್ ನರ್ಸಿಂಗ್‌ನಲ್ಲಿ ಇಂದು ದೀಪ ಬೆಳಗಿಸುವ ಕಾರ್ಯಕ್ರಮ

ನಗರದ ಬಾಪೂಜಿ ಕಾಲೇಜ್ ಆಫ್ ನರ್ಸಿಂಗ್, ಬಾಪೂಜಿ ಸ್ಕೂಲ್ ಆಫ್ ನರ್ಸಿಂಗ್ ಇವರುಗಳ ಸಂಯುಕ್ತಾಶ್ರಯದಲ್ಲಿ ಬಿ.ಎಸ್‌ಸಿ ನರ್ಸಿಂಗ್ ಮತ್ತು ಜಿಎನ್‌ಎಂ ವಿದ್ಯಾರ್ಥಿಗಳ ದೀಪ ಬೆಳಗಿಸುವ ಕಾರ್ಯಕ್ರಮ ಹಾಗೂ ಪ್ರತಿಜ್ಞಾ ವಿಧಿ ಸ್ವೀಕರಿಸುವ ಕಾರ್ಯಕ್ರಮ ಇಂದು ಬೆಳಿಗ್ಗೆ 10.30 ಕ್ಕೆ ಕಾಲೇಜಿನ ಮಲ್ಟಿ ಪರ್‌ಪಸ್ ಹಾಲ್, 2ನೇ ಮಹಡಿಯಲ್ಲಿ ಹಮ್ಮಿಕೊಳ್ಳಲಾಗಿದೆ.

ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಮತ್ತು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಮುಖ್ಯ ಪೋಷಕರಾಗಿರುತ್ತಾರೆ.

ಮುಖ್ಯ ಅತಿಥಿಗಳಾಗಿ ಡಾ. ಪ್ರಭಾ ಮಲ್ಲಿಕಾರ್ಜುನ್ ಮತ್ತು ಸಂಪಣ್ಣ ಮುತಾಲಿಕ್ ಆಗಮಿಸುವರು. ವಿಶೇಷ ಆಹ್ವಾನಿತರಾಗಿ ಡಾ. ಅಶ್ವಿನಿ ಎಸ್. ಆಗಮಿಸುವರು. ಅಧ್ಯಕ್ಷತೆಯನ್ನು ಬಾಪೂಜಿ ಕಾಲೇಜ್ ಆಫ್ ನರ್ಸಿಂಗ್‌ನ ಪ್ರಾಂಶುಪಾಲರಾದ ಹರ್ಷ ಕೆ.ಎಂ. ಹಾಗೂ ಬಾಪೂಜಿ ಸ್ಕೂಲ್ ಆಫ್ ನರ್ಸಿಂಗ್‌ನ ಪ್ರಾಂಶುಪಾಲರಾದ ಶ್ರೀಮತಿ ನರ್ಮದ ವಹಿಸುವರು.

# ರಂಗ ಶಿಕ್ಷಣ ಡಿಪ್ಲೋಮಾಕ್ಕೆ ಅರ್ಜಿ

ಸಾಣೇಹಳ್ಳಿ, ಮೇ 29- ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದಿರುವ ಇಲ್ಲಿನ ಶ್ರೀ ಶಿವಕುಮಾರ ರಂಗ ಪ್ರಯೋಗ ಶಾಲೆ ರಂಗಶಿಕ್ಷಣ ಡಿಪ್ಲೋಮಾಕ್ಕೆ ಅರ್ಜಿ ಆಹ್ವಾನಿಸಿದೆ.

ಡಾ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಮಾರ್ಗದರ್ಶನದಲ್ಲಿ ನಡೆಯುತ್ತಿರುವ ಈ ಶಾಲೆಗೆ ಪ್ರವೇಶ ಬಯಸುವವರ ಕನಿಷ್ಟ ವಿದ್ಯಾರ್ಹತೆ ಎಸ್ಸೆಸ್ಸೆಲ್ಸಿ ಆಗಿದ್ದು, ಪದವೀಧರರಿಗೆ ಆದ್ಯತೆ ನೀಡಲಾಗುವುದು.

ಭಾರತೀಯ ರಂಗಭೂಮಿ, ಪಾಶ್ಚಾತ್ಯ ರಂಗಭೂಮಿ, ಕನ್ನಡ ರಂಗಭೂಮಿ, ಸಾಹಿತ್ಯ ಪರಂಪರೆ, ಅಭಿನಯ, ಆಹಾರ್ಯ ಮತ್ತು ಶಿಕ್ಷಣದಲ್ಲಿ ರಂಗಭೂಮಿ ಕುರಿತಾದ ಸೈದ್ಧಾಂತಿಕ ಮತ್ತು ಪ್ರಾಯೋಗಿಕ ತರಗತಿಗಳು ಪ್ರಸಿದ್ಧ ರಂಗತಜ್ಞರು ಮತ್ತು ಅತಿಥಿ ಉಪನ್ಯಾಸಕರಿಂದ ನಡೆಯಲಿವೆ.

ಕಳರಿ, ಯೋಗ, ಕಥಕ್ಕಳಿ, ಯಕ್ಷಗಾನ, ಕಂಸಾಳೆ, ಹೆಜ್ಜೆಮೇಳ, ವೀರಗಾಸೆ, ಪ್ರಸಾಧನ, ಬೆಳಕಿನ ವಿನ್ಯಾಸ, ರಂಗ ವಿನ್ಯಾಸ, ವಸ್ತ್ರವಿನ್ಯಾಸ ಮುಂತಾದ ಕಾರ್ಯಾಗಾರಗಳ ಜೊತೆಗೆ ಕಾವ್ಯ, ಸಿನಿಮಾ, ಚಿತ್ರಕಲೆ, ವಚನ ಸಾಹಿತ್ಯ ಕುರಿತಾದ ಕಮ್ಮಟಗಳು ಮತ್ತು ನಾಲ್ಕರಿಂದ ಐದು ನಾಟಕಗಳ ಅಭ್ಯಾಸ ಪ್ರದರ್ಶನ ನಡೆಯಲಿವೆ.

ಆಸಕ್ತರು www.theatreschoolsanehalli.org ಈ ವೆಬ್ ವಿಳಾಸದಲ್ಲಿ ಪ್ರವೇಶ ಅರ್ಜಿಗಳನ್ನು ಡೌನ್‌ಲೋಡ್ ಮಾಡಿ ಜೂನ್ 30 ರ ಒಳಗಾಗಿ 'ಪ್ರಾಚಾರ್ಯರು, ಶ್ರೀ ಶಿವಕುಮಾರ ರಂಗಪ್ರಯೋಗಶಾಲೆ, ಸಾಣೇಹಳ್ಳಿ – 577515, ಹೊಸದುರ್ಗ ತಲ್ಲೂಕು, ಚಿತ್ರದುರ್ಗ ಜಿಲ್ಲೆ' ವಿಳಾಸಕ್ಕೆ ಸಲ್ಲಿಸಬೇಕು. ವಿವರಕ್ಕೆ ಸಂಪರ್ಕಿಸುವ ಮೊಬೈಲ್ ಸಂಖ್ಯೆ 9448398144, 8861043553, 9482942394.

# ಪೈಥಾನ್ ಪ್ರೋಗ್ರಾಮಿಂಗ್ ಕುರಿತು ಕಾರ್ಯಾಗಾರ



ದಾವಣಗೆರೆ, ಮೇ 29 - ನಗರದ ಜೈನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ವಿದ್ಯುತ್ ಮತ್ತು ವಿದ್ಯುನ್ಮಾನ ವಿಭಾಗದ ಫೋರಂ ಪೊಟೆಂಝಾ ಅಡಿಯಲ್ಲಿ ಮೂರನೇ ವರ್ಷದ ವಿದ್ಯಾರ್ಥಿಗಳಿಗೆ ದಿನಾಂಕ 24 ರಿಂದ 28 ಮೇ 2023 ರ ವರೆಗೆ ಅಬಿಯಾಂತ್ರಿಕ್ಸ್ ಸಾಫ್ಟ್‌ಲ್ಯಾಬ್‌ನ ಸಹಯೋಗದೊಂದಿಗೆ 'ಪೈಥಾನ್ ಪ್ರೋಗ್ರಾಮಿಂಗ್' ಕುರಿತು ಐದು ದಿನಗಳ ಕಾರ್ಯಾಗಾರ ನಡೆಯಿತು. ಕಾಲೇಜಿನ ಪ್ರಾಂಶುಪಾಲರಾದ ಡಾ. ಡಿ. ಬಿ. ಗಣೇಶ್ ,ಸಂಪನ್ಮೂಲ ವ್ಯಕ್ತಿಗಳಾದ ಮಲ್ಲೇಶ್ ವಿ. ಎಸ್. ಮತ್ತು ಶಿವರಾಜ್ ವಿ. ಎಸ್. ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಿದರು. ಈ ಸಂದರ್ಭದಲ್ಲಿ ವಿಭಾಗದ ಮುಖ್ಯಸ್ಥರಾದ ಪ್ರೊ. ಪ್ರೀತಾ ಪಿ. ಎಸ್ , ಕಾರ್ಯಾಗಾರದ ಆಯೋಜಕರಾದ ಪ್ರೊ. ಪ್ರದೀಪ್ ಕಣವಿ ಮತ್ತು ವಿಭಾಗದ ಎಲ್ಲಾ ಉಪನ್ಯಾಸಕರು ಉಪಸ್ಥಿತರಿದ್ದರು.

# ನಾಳೆ ಸಂದರ್ಶನ

ದಾವಣಗೆರೆ, ಮೇ 29 - ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, 'ಮಾದರಿ ವೃತ್ತಿ ಕೇಂದ್ರ'ದ ವತಿಯಿಂದ ನಾಡಿದ್ದು 31 ರ ಬುಧವಾರ ಬೆಳಗ್ಗೆ 10 ಕ್ಕೆ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೇರ ಸಂದರ್ಶನ ನಡೆಯಲಿದೆ.ವಿವರಕ್ಕೆ ಸಂಪರ್ಕಿಸಿ : 6361 550016.

# ಅಂಗನವಾಡಿ: ಕಳ್ಳತನ

ದಾವಣಗೆರೆ, ಮೇ 29- ಇಲ್ಲಿನ ಕೆಟಿಜೆ ನಗರ ಅಂಗನವಾಡಿಯೊಂದರಲ್ಲಿ ಸುಮಾರು 25 ಸಾವಿರ ರೂ. ಮೌಲ್ಯದ ವಸ್ತುಗಳು ಕಳ್ಳತನವಾಗಿರುವ ಬಗ್ಗೆ ದೂರು ದಾಖಲಾಗಿದೆ. ದಿ.22ರಂದು ಬೆಳಿಗ್ಗೆ ಬಂದು ನೋಡಿದಾಗ ಬೀಗ ಮುರಿದು ಅಲ್ಲಿದ್ದ ಫಿಲ್ಟರ್, ಜಮಖಾನ್, ಕುಕ್ಕರ್, ತಟ್ಟೆಗಳು, ಲೋಟ, ಜಗ್ಗು, ಬಾಂಡಲಿ, ಕೊಳಗ, ಸಿಲಿಂಡರ್, ಗರ್ಭಿಣಿ ಹಾಗೂ ಮಗುವಿನ ತೂಕದ ಮಿಷನ್, ಅಡುಗೆ ಎಣ್ಣೆ ಸೇರಿದಂತೆ ವಿವಿಧ ವಸ್ತುಗಳನ್ನು ಯಾರೋ ಕಳ್ಳತನ ಮಾಡಿಕೊಂಡು ಹೋಗಿದ್ದಾರೆ ಎಂದು ಅಂಗನವಾಡಿ ಕಾರ್ಯಕರ್ತೆ ಸುರೇಖ ಅವರು ದೂರು ನೀಡಿದ್ದಾರೆ.

# ವಿದ್ಯಾರ್ಥಿನಿಯರಿಗೆ ಋತುಚಕ್ರ ನೈರ್ಮಲ್ಯ ನಿರ್ವಹಣೆ ಅರಿವು ಕಾರ್ಯಕ್ರಮ



ದಾವಣಗೆರೆ, ಮೇ 29- ತಾಲ್ಲೂಕು ಶಿಶು ಅಭಿವೃದ್ದಿ ಯೋಜನೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಗರ್ಲ್ಸ್ ಹಾಸ್ಟೆಲ್ ವಿದ್ಯಾರ್ಥಿನಿಯರಿಗೆ ಋತುಚಕ್ರ ನೈರ್ಮಲ್ಯ ನಿರ್ವಹಣೆ ಕುರಿತಂತೆ ಅರಿವು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಸಹಾಯಕ ಶಿಶು ಅಭಿವೃದ್ದಿ ಯೋಜನೆ ಅಧಿಕಾರಿ ಶ್ರೀಮತಿ ಪ್ರಿಯದರ್ಶಿನಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ. ಚೈತಾಲಿ ವಿಷಯ ಕುರಿತು ಸಂಪೂರ್ಣ ಮಾಹಿತಿ ನೀಡಿದರು. ವಾರ್ಡನ್ ಕವಿತಾ ಹಾಗೂ ಮೇಲ್ವಿಚಾರಕರಾದ ಶಿವಲೀಲಾ, ಸುಮಂಗಲಾ ,ಗಂಗಮ್ಮ,ಸುಧಾ ಮತ್ತಿತರರು ಹಾಜರಿದ್ದರು.

# ವೀರಶೈವ ಲಿಂಗಾಯತ ನೌಕರರ ಪತ್ತಿನ ಸಹಕಾರ ಸಂಘದಿಂದ ಪುರಸ್ಕಾರ

ದಾವಣಗೆರೆ, ಮೇ 29 - ಜಿಲ್ಲಾ ವೀರಶೈವ ಲಿಂಗಾಯತ ನೌಕರರ ಪತ್ತಿನ ಸಹಕಾರ ಸಂಘದಿಂದ ಎಸ್ಸೆಸ್ಸೆಲ್ಸಿ ಮತ್ತು ಪಿ ಯುಸಿ ಒಳಗೊಂಡಂತೆ ಶೇಕಡ 90ಕ್ಕಿಂತ ಹೆಚ್ಚು ಅಂಕ ಪಡೆದ ಸಂಘದ ಷೇರುದಾರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರವನ್ನು ಆಯೋಜಿಸಲಾಗಿದೆ.

ಶೇರುದಾರರು ಜಿಲ್ಲಾ ವೀರಶೈವ ಲಿಂಗಾಯತ ನೌಕರರ ಪತ್ತಿನ ಸಹಕಾರ ಸಂಘದ ಕಚೇರಿಯಲ್ಲಿ ಅರ್ಜಿಯನ್ನು ಪಡೆದು ಭರ್ತಿ ಮಾಡಿ ಅರ್ಜಿಯನ್ನು ಸಲ್ಲಿಸಲು ಜೂನ್ 6 ರಂದು ಕೊನೆಯ ದಿನವಾಗಿರುತ್ತದೆ.

ಷೇರು ಹೊಂದಿಲ್ಲದ ಜಿಲ್ಲೆಯ ವೀರಶೈವ ಲಿಂಗಾಯತ ನೌಕರರು ತಮ್ಮ ಮಕ್ಕಳ ಪ್ರತಿಭಾ ಪುರಸ್ಕಾರಕ್ಕೆ ಹೊಸದಾಗಿ ದಿನಾಂಕ ಜೂನ್ 6 ಒಳಗಾಗಿ ಷೇರುದಾರರಾಗಿ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಸಲ್ಲಿಸಬಹುದು. ವಿವರಕ್ಕೆ ಸಂಪರ್ಕಿಸಬಹುದಾದ ಮೊಬೈಲ್ ಸಂಖ್ಯೆ 88921 58006, 87627 32010 944869.

# ಪರೀಕ್ಷೆಗೆ ತರಬೇತಿ

ದಾವಣಗೆರೆ, ಮೇ 29- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಬ್ಯಾಂಕ್ ಅಧಿಕಾರಿಗಳ ಮತ್ತು ಗುಮಾಸ್ತರ ಹುದ್ದೆಗಳಿಗೆ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ :0821-2515944.


**ಜಾಗತಿಕ ಲಿಂಗಾಯತ ಮಹಾಸಭಾದ ಜಿಲ್ಲಾಧ್ಯಕ್ಷ ಎಂ. ಶಿವಕುಮಾರ್‌ಗೆ ಪತ್ನಿ ವಿಯೋಗ**




ದಾವಣಗೆರೆ ನಗರದ ಬನಶಂಕರಿ ಬಡಾವಣೆ ಟೀಮ್ ಅಕಾಡೆಮಿ ಕಾಲೇಜ್ 'ಶಿವ ಕಾಂಪ್ಲೆಕ್ಸ್, ನಿಲಯದ ವಾಸಿ,
**ದಾವಣಗೆರೆ ಜಾಗತಿಕ ಲಿಂಗಾಯತ ಮಹಾಸಭಾದ ಜಿಲ್ಲಾಧ್ಯಕ್ಷ ಎಂ. ಶಿವಕುಮಾರ್**
ಅವರ ಧರ್ಮಪತ್ನಿ
**ಶ್ರೀಮತಿ ಟಿ.ಎಸ್. ಮಂಜುಳ**

ಇವರು, ದಿನಾಂಕ 29.5.2023ರ ಸೋಮವಾರ ಸಂಜೆ 5 ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಮೃತರಿಗೆ 59 ವರ್ಷ ವಯಸ್ಸಾಗಿತ್ತು. ಪತಿ, ಅತ್ತೆ, ಪುತ್ರ ಹಾಗೂ ಇಬ್ಬರು ಪುತ್ರಿಯರು, ಅಳಿಯಂದಿರು, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 30.5.2023ರ ಮಂಗಳವಾರ ಮಧ್ಯಾಹ್ನ 1 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬದವರು,**
**ಮೊ : 9448013078, 99864 53151**



**13ನೇ ಪುಣ್ಯಸ್ಮರಣೆ**



**ದಿ|| ಶ್ರೀ ಮುರಿಗೆಪ್ಪ ಕಮತರ್**
ಕೆ.ಇ.ಬಿ. ನಿವೃತ್ತ ನೌಕರರು.
ಸದಾ ನೀವು ಹಾಕಿಕೊಟ್ಟ ದಾರಿಯಲ್ಲಿ ಸಾಗುತ್ತಿರುವ
ನಿಮ್ಮ ಕುಟುಂಬ ವರ್ಗದವರು.
**ಶ್ರೀಮತಿ ನೀಲಮ್ಮ ಕಮತರ್ ಮತ್ತು ಮಕ್ಕಳು, ಅಳಿಯಂದಿರು ಹಾಗೂ ಸೊಸೆಯಂದಿರು ಮತ್ತು ಮೊಮ್ಮಕ್ಕಳು, ದಾವಣಗೆರೆ.**


# ಅಪರಿಚಿತ ಪುರುಷನ ಶವ ಪತ್ತೆ

ದಾವಣಗೆರೆ, ಮೇ 29- ನಗರದ ಬೂದಾಳು ರಸ್ತೆಯಲ್ಲಿರುವ ಶಾದಿ ಮಹಲ್ ಪಕ್ಕದಲ್ಲಿ ಮೊನ್ನೆ 35-40 ವರ್ಷ ವಯಸ್ಸಿನ ಓರ್ವ ಪುರುಷನ ಶವ ಪತ್ತೆಯಾಗಿದೆ. ಗೋದಿ ಮೈಬಣ್ಣ, ಕೋಲು ಮುಖ, ಸಾಧಾರಣ ಮೈಕಟ್ಟು ಹೊಂದಿರುತ್ತಾನೆ. ಮೃತನು ಗ್ರೇ ಬಣ್ಣದ ಟೀ ಶರ್ಟ್, ಕಡು ನೀಲಿ ಬಣ್ಣದ ಪ್ಯಾಂಟ್ ಧರಿಸಿದ್ದು, ಬಲಗೈ ಮಣಿಕಟ್ಟಿನ ಬಳಿ ಕಪ್ಪು ಬಣ್ಣದ ದಾರ ಇರುತ್ತದೆ. ಸಂಬಂಧಪಟ್ಟವರು ಗಾಂಧಿ ನಗರ ಪೊಲೀಸ್ ಠಾಣೆಗೆ ಸಂಪರ್ಕಿಸಬಹುದು. ವಿವರಗಳಿಗೆ ದೂರವಾಣಿ : 08192-253400, 09192-259337, 08192-272011, ಮೊ : 94808 03247.

# ಜಿಲ್ಲೆಯ ವಿವಿಧೆಡೆಗಳಲ್ಲಿ ಅಕ್ರಮ ಮರಳು ವಶ

ದಾವಣಗೆರೆ, ಮೇ 29-ಜಿಲ್ಲೆಯ ವಿವಿಧೆಡೆ ಅಕ್ರಮವಾಗಿ ಸಂಗ್ರಹಿಸಿಟ್ಟುಕೊಂಡಿದ್ದ ಮರಳನ್ನು ವಶಪಡಿಸಿಕೊಂಡಿರುವ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಜಗಳೂರು ತಾಲ್ಲೂಕು ಬಸವನಕೋಟೆ ಗ್ರಾಮದ ಗಣವೊಂದರಲ್ಲಿ ಅಕ್ರಮವಾಗಿ ಸಂಗ್ರಹಿಸಿಡಲಾಗಿದ್ದ ಸುಮಾರು 25 ಟ್ರ್ಯಾಕ್ಟರ್ ಲೋಡ್ ಮರಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಹೊನ್ನಾಳಿ ತಾಲ್ಲೂಕು ಬುಳ್ಳಾಪುರ ಗ್ರಾಮದಲ್ಲಿ ತಂಗಭದ್ರಾ ನದಿ ದಂಡೆಯ ಮೇಲೆ ನದಿಯಿಂದ ಯಾವುದೇ ಪರವಾನಗಿ ಪಡೆಯದೆ ತಂಡ ಸುಮಾರು 25 ಟಿಪ್ಪರ್ ಲಾರಿ ಮರಳನ್ನು ಅಕ್ರಮವಾಗ ಸಂಗ್ರಹ ಮಾಡಿಟ್ಟಿರುವುದನ್ನು ಪತ್ತೆ ಹಚ್ಚಿ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಬುಳ್ಳಾಪುರ ಗ್ರಾಮದ ಜಮೀನೊಂದರಲ್ಲಿ ಅಕ್ರಮವಾಗಿ ಸಂಗ್ರಹಿಡಲಾಗಿದ್ದ 40-50 ಟಿಪ್ಪರ್ ಲಾರಿ ಮರಳು ಹಾಗೂ ಇದೇ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಕ್ರಮವಾಗಿ ಸಂಗ್ರಹಿಸಿಟ್ಟಿದ್ದ 10-15 ಟ್ರ್ಯಾಕ್ಟರ್ ಲೋಡ್‌ಗಳನ್ನು ಮರಳನ್ನೂ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಸಾಸ್ವೆಹಳ್ಳಿ ಗ್ರಾಮದಲ್ಲೂ ಸಹ ಅಕ್ರಮವಾಗಿ ಸಂಗ್ರಹಿಸಿಟ್ಟಿದ್ದ 4-5 ಟಿಪ್ಪರ್ ಲಾರಿ ಮರಳನ್ನು ವಶಪಡಿಸಿಕೊಳ್ಳಲಾಗಿದೆ.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಪತ್ರಕರ್ತರು ಸಮಾಜ ಒಗ್ಗೂಡಿಸುವ ಸೂಜಿಯಾಗಲಿ

## ಪತ್ರಕರ್ತರ ಸಂಘದ ಸನ್ಮಾನ ಸ್ವೀಕರಿಸಿ ಮಾತನಾಡಿದ ಜಗಳೂರು ಶಾಸಕ ಬಿ.ದೇವೇಂದ್ರಪ್ಪ



ಜಗಳೂರು, ಮೇ 29- ಪತ್ರಕರ್ತರು ಬಂಗಾರದ ಕತ್ತರಿಯಾಗದೆ, ಸಮಾಜ ಒಗ್ಗೂಡಿಸುವ ಸೂಜಿಯಾಗಲಿ ಎಂದು ಶಾಸಕ ಬಿ.ದೇವೇಂದ್ರಪ್ಪ ಅಭಿಮತ ವ್ಯಕ್ತಪಡಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕಾರ್ಯನಿರತ ಪತ್ರಕರ್ತರ ಸಂಘದಿಂದ ಸನ್ಮಾನ ಸ್ವೀಕರಿಸಿ, ನಂತರ ಪತ್ರಕರ್ತರ ಭವನ ಕಟ್ಟಡದ ಕಾಮಗಾರಿ ವೀಕ್ಷಿಸಿ ಅವರು ಮಾತನಾಡಿದರು.

ತಾಲ್ಲೂಕಿನಲ್ಲಿ ಪತ್ರಕರ್ತರ ಸಂಘದ ಕ್ಷೇಮಾಭಿವೃದ್ಧಿಗೆ ಸದಾ ಸಿದ್ದನಾಗಿರುವೆ. ಕ್ಷೇತ್ರದ ಅಭಿವೃದ್ದಿಯೇ ನನ್ನ ಮಂತ್ರ. ತಮ್ಮ ಸಹಕಾರ, ಸಲಹೆ ಅಗತ್ಯ. ನಾನು ಜನ ಸೇವಕನಾಗಿ ಸೇವೆಗೈಯ್ಯುವೆ. ಅಲ್ಲದೆ ಶಾಶ್ವತ ನೀರಾವರಿ ಯೋಜನೆಗಳ ಕಾಮಗಾರಿ ಪೂರ್ಣಗೊಳಿಸಲು ಶ್ರಮಿಸುವೆ ಎಂದರು.

ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಬಹುಮತ ದೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದಲ್ಲಿ ರಾಜ್ಯದ ಆಡಳಿತ ಚುಕ್ಕಾಣಿ ಹಿಡಿದಿದೆ. ಈ ಅವಧಿಯಲ್ಲಿ ನಾನು ಶಾಸಕನಾಗಿ ಆಯ್ಕೆಯಾಗಿರುವುದು ನನ್ನ ಭಾಗ್ಯ. ಇದರಿಂದ ಕ್ಷೇತ್ರದ ಅಭಿವೃದ್ದಿ ಪರ್ವಕ್ಕೆ ನಾಂದಿಯಾಗಲಿದೆ ಎಂದು ಹೇಳಿದರು.

**ಪತ್ರಕರ್ತರ ಮನೆಗೆ ಕಳಿಸುವೆ:** ಪಟ್ಟಣದಲ್ಲಿ ಪತ್ರಕರ್ತರ ಭವನದ ಕಟ್ಟಡ ನಿರ್ಮಾಣ ಅಪೂರ್ಣಗೊಂಡಿದೆ. ನಾನು ಹೆಚ್ಚುವರಿ ಅನುದಾನ ಬಿಡುಗಡೆಗೊಳಿಸಿ ಶೀಘ್ರ ಪತ್ರಕರ್ತರ ಭವನ ಪೂರ್ಣ ಗೊಳಿಸಿ ನಿಮ್ಮ ಮನೆಗೆ ಅಂದರೆ ಭವನಕ್ಕೆ ಕಳುಹಿಸುವೆ ಎಂದು ಶಾಸಕರು ಭರವಸೆ ವ್ಯಕ್ತಪಡಿಸಿದರು.

ಪತ್ರಕರ್ತರ ಸಂಘದ ರಾಷ್ಟ್ರೀಯ ಮಂಡಳಿ ಸದಸ್ಯ ಅಣಬೂರು ಕೊಟ್ರೇಶ್, ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಉಪಾಧ್ಯಕ್ಷ ಡಿ. ಶ್ರೀನಿವಾಸ್, ಜಿಲ್ಲಾ ಸಮಿತಿ ಸದಸ್ಯ ಬಿ.ಪಿ. ಸುಭಾನ್, ತಾಲ್ಲೂಕು ಅಧ್ಯಕ್ಷ ಚಿದಾನಂದ, ಕಾರ್ಯದರ್ಶಿ ಲೋಕೇಶ್ ಸೇರಿದಂತೆ ಪದಾಧಿಕಾರಿಗಳು ಭಾಗವಹಿಸಿದ್ದರು.

## ಕಾಂಗ್ರೆಸ್ ಪಕ್ಷಕ್ಕೆ ಇತಿಹಾಸವಿದೆ ಗೆದ್ದಲು ಕಟ್ಟಿದ ಹುತ್ತವಲ್ಲ



ಜಗಳೂರು, ಮೇ 29- ಸ್ವಾತಂತ್ರ್ಯ ಪೂರ್ವದಲ್ಲಿ ಸ್ಥಾಪನೆಯಾದ ಕಾಂಗ್ರೆಸ್ ಪಕ್ಷಕ್ಕೆ ತನ್ನದೇ ಇತಿಹಾಸವಿದೆ. ಅದು ಗೆದ್ದಲು ಹುಳದ ಹುತ್ತವಲ್ಲ. ನಾನು ಸೇರಿಕೊಂಡ ಹಾವಲ್ಲ ಎಂದು ಶಾಸಕ ಬಿ. ದೇವೇಂದ್ರಪ್ಪ ಅವರು ಮಾಜಿ ಶಾಸಕ ಎಚ್.ಪಿ.ರಾಜೇಶ್ ಹೇಳಿಕೆಗೆ ತಿರುಗೇಟು ನೀಡಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಪತ್ರಕರ್ತರೊಂದಿಗೆ ಅವರು ಮಾತನಾಡಿದರು. 1885ರಲ್ಲಿ ಎ.ಓ.ಹ್ಯೂಮ್ ಅವರು ಹಾಗೂ ಅನೇಕ ಮಹಾನ್ ನಾಯಕರುಗಳು ಸ್ವಾತಂತ್ರ್ಯಕ್ಕಾಗಿ ಹೋರಾಡಲು ಪಕ್ಷ ಕಟ್ಟಿದರು. ಅದು ಇಂದು ಹೆಮ್ಮರವಾಗಿ ಬೆಳೆದು, ದೇಶದಲ್ಲಿ ತನ್ನದೇ ಆಡಳಿತದ ಛಾಪು ಮೂಡಿಸಿದೆ. ಪಕ್ಷದಿಂದ ಆಯ್ಕೆಯಾಗಿ ತಮ್ಮ ಸ್ವಾರ್ಥಕ್ಕಾಗಿ ಪಕ್ಷ ತೊರೆದ ಯಾರೊಬ್ಬರೂ ಪಕ್ಷ ದ್ರೋಹ ಚಟುವಟಿಕೆಗಳಲ್ಲಿ ತೊಡಗಬಾರದು ಎಂದು ತಿಳಿಸಿದರು.

**ಮಾಜಿ ಶಾಸಕ ಎಚ್.ಪಿ.ರಾಜೇಶ್ ಅವರು ಅಂದು ಹಾವಾಗಿದ್ದರೇ?** : 2011ರಲ್ಲಿ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿದ್ದ ವೈ.ದೇವೇಂದ್ರಪ್ಪ ಅರಸಿಕೆರೆ ಅವರು ನನ್ನ ಹೆಸರಿನವರು. ಅಂದು ಮಾಜಿ ಶಾಸಕ ಎಚ್.ಪಿ.ರಾಜೇಶ್ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಆದರೆ ನಂತರ 2013 ರಲ್ಲಿ ಕಾಂಗ್ರೆಸ್ ಪಕ್ಷದಿಂದ ಅಭ್ಯರ್ಥಿಯಾಗಿ, ಶಾಸಕರಾಗಿ ಆಯ್ಕೆಯಾದರು. ಹಾಗಾದರೆ ಅಂದು ಅವರೂ ಕೂಡ ಗೆದ್ದಲು ಕಟ್ಟಿದ ಹುತ್ತದಲ್ಲಿ ಹಾವಾಗಿದ್ದರೆ? ಎಂದು ಪ್ರಶ್ನಿಸಿದರು.

ಶಿಷ್ಟಾಚಾರದ ಹೆಸರಿನಲ್ಲಿ ಮಾಜಿ ಶಾಸಕರುಗಳಾದ ಗುರುಸಿದ್ದನಗೌಡ್ರು, ಎಸ್.ವಿ. ರಾಮಚಂದ್ರ, ಎಚ್.ಪಿ.ರಾಜೇಶ್ ಸೇರಿದಂತೆ ಯಾರೊಬ್ಬರ ಹೆಸರನ್ನೂ ತಿರಸ್ಕರಿಸುವುದಿಲ್ಲ. ಎಲ್ಲರ ಸಲಹೆಗಳನ್ನು ಸ್ವೀಕರಿಸುವೆ. ಕ್ಷೇತ್ರಕ್ಕೆ ಅವರದ್ದೇ ಆದ ಕೊಡುಗೆ ಇದೆ ಎಂದು ಪ್ರಶಂಸಿಸಿದರು. ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹಮ್ಮದ್, ಸಿ.ತಿಪ್ಪೇಸ್ವಾಮಿ, ಮಹಮದ್ ಗೌಸ್, ಕೊರಟಕೆರೆ ಗುರುಸಿದ್ದನಗೌಡ, ಗಿರೀಶ್, ತಿಮ್ಮಣ್ಣ ಮುಂತಾದವರು ಇದ್ದರು.

## ಮೈಸೂರು : ಭೀಕರ ರಸ್ತೆ ಅಪಘಾತದಲ್ಲಿ ಒಂದೇ ಕುಟುಂಬದ ಹತ್ತು ಜನರ ಸಾವು

ಮೈಸೂರು, ಮೇ 29 – ತಿ. ನರಸೀಪುರ ತಾಲ್ಲೂಕಿನ ಕುರುಬೂರು ಬಳಿ ಇನ್ನೋವಾ ಕಾರು ಹಾಗೂ ಖಾಸಗಿ ಬಸ್ ಮಧ್ಯೆ ಸಂಭವಿಸಿದ ಭೀಕರ ಅಪಘಾತದಲ್ಲಿ ಒಂದೇ ಕುಟುಂಬದ ಹತ್ತು ಜನ ಸಾವನ್ನಪ್ಪಿದ್ದಾರೆ.

ಬಳ್ಳಾರಿ ತಾಲ್ಲೂಕಿನ ಸಂಗನಕಲ್ಲ ಗ್ರಾಮದವರು ಪ್ರವಾಸಕ್ಕೆ ತೆರಳಿದಾಗ ಅಪಘಾತ ಸಂಭವಿಸಿದೆ. ಮಹದೇಶ್ವರ ಬೆಟ್ಟದಿಂದ ವಾಪಸಾಗುತ್ತಿದ್ದಾಗ ಅಪಘಾತ ಸಂಭವಿಸಿದೆ. ಕಾರು ನಜ್ಜುಗುಜ್ಜಾಗಿದೆ.

ಮೈಸೂರು - ಕೊಳ್ಳೇಗಾಲ ರಾಷ್ಟ್ರೀಯ ಹೆದ್ದಾರಿಯ ಕುರುಬೂರು ಸಮೀಪದ ಪಿಂಜರಾಪೋಲ್ ಬಳಿ ಅಪಘಾತ ನಡೆದಿದೆ. ಕಾರಿನಲ್ಲಿ ಇಬ್ಬರು ಮಕ್ಕಳು ಹಾಗೂ ಮಹಿಳೆಯರು ಸೇರಿ 13 ಮಂದಿ ಇದ್ದರು. ಮೂವರು ಗಾಯಗೊಂಡಿದ್ದಾರೆ.

ಮೈಸೂರಿನ ಕೆ. ಆರ್. ಆಸ್ಪತ್ರೆಗೆ ಭೇಟಿ ನೀಡಿದ ಬಳ್ಳಾರಿ ಗ್ರಾಮಾಂತರ ಶಾಸಕ ಹಾಗೂ ಸಚಿವ ನಾಗೇಂದ್ರ ಮಾತನಾಡಿ, ಮೃತ ಹತ್ತು ಮಂದಿ ಒಂದೇ ಕುಟುಂಬದವರು. ಲಿಂಗಾಯತ ಸಮುದಾಯದ ಇವರು ಖಾನಾವಳಿಗಳಿಗೆ ರೊಟ್ಟಿ ಮಾಡಿಕೊಡುವ ವೃತ್ತಿ ಮಾಡುತ್ತಿದ್ದರು ಎಂದು ತಿಳಿಸಿದ್ದಾರೆ.

ಚುನಾವಣೆಯಲ್ಲಿ ನನ್ನ ಪರವಾಗಿ ಈ ಕುಟುಂಬದವರು ಕೆಲಸ ಮಾಡಿದ್ದರು. ನಾನು ಈ ಕುಟುಂಬವನ್ನು ಬಹಳ ಹತ್ತಿರದಿಂದ ಬಲ್ಲೆ. ಎಲ್ಲರಿಗೂ ಅನ್ನ ಹಾಕುತ್ತಿದ್ದವರೇ ಇಂದು ದುರ್ಮರಣಕ್ಕೆ ಒಳಗಾಗಿದ್ದಾರೆ ಎಂದು ಹೇಳಿದರು.

ಸಚಿವ ಹೆಚ್.ಸಿ. ಮಹದೇವಪ್ಪ ಕೂಡ ಆಸ್ಪತ್ರೆಗೆ ಭೇಟಿ ನೀಡಿದ್ದು, ಚಿಕಿತ್ಸೆ ಪಡೆಯುತ್ತಿರುವ ಗಾಯಾಳುಗಳ ಆರೋಗ್ಯ ಸ್ಥಿತಿ ಬಗ್ಗೆ ಮಾಹಿತಿ ಪಡೆದಿದ್ದಾರೆ. ಈ ಘಟನೆ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆ ಮಾತನಾಡಿದ್ದೇನೆ. ಮುಖ್ಯಮಂತ್ರಿ 2 ಲಕ್ಷ ರೂ. ಪರಿಹಾರ ಘೋಷಣೆ ಮಾಡಿದ್ದಾರೆ. ಗಾಯಾಳುಗಳಿಗೆ 50 ಸಾವಿರ ರೂ. ಪರಿಹಾರ ನೀಡುತ್ತೇವೆ ಎಂದು ತಿಳಿಸಿದರು.

ಮೂವರಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಇಬ್ಬರ ಸ್ಥಿತಿ ಸ್ಥಿರವಾಗಿದೆ. ಒಬ್ಬರ ಸ್ಥಿತಿ ಮಾತ್ರ ಸ್ವಲ್ಪ ಕಷ್ಟಕರವಾಗಿದೆ. ಮೃತ ದೇಹಗಳ ಶವ ಪರೀಕ್ಷೆ ನಡೆಯುತ್ತಿದೆ. ಬಳಿಕ ಶವಗಳನ್ನು ಅವರ ಗ್ರಾಮಗಳಿಗೆ ಕಳುಹಿಸುವ ವ್ಯವಸ್ಥೆ ಮಾಡಲಾಗುತ್ತದೆ ಎಂದು ತಿಳಿಸಿದರು.

ಈ ನಡುವೆ, ಅಪಘಾತದಲ್ಲಿ ಮೃತಪಟ್ಟವರ ಕುಟುಂಬಕ್ಕೆ ತಲಾ 2 ಲಕ್ಷ ರೂ. ಪರಿಹಾರ ನೀಡುವುದಾಗಿ ಪ್ರಧಾನಿ ನರೇಂದ್ರ ಮೋದಿ ಘೋಷಿಸಿದ್ದಾರೆ.

ಮೈಸೂರಿನಲ್ಲಿ ನಡೆದ ಭೀಕರ ಅಪಘಾತದಿಂದ ತೀವ್ರ ದುಃಖವಾಗಿದೆ. ತಮ್ಮ ಪ್ರೀತಿ ಪಾತ್ರರನ್ನು ಕಳೆದುಕೊಂಡ ಕುಟುಂಬಸ್ಥರಿಗೆ ನನ್ನ ಸಂತಾಪ. ಘಟನೆಯಲ್ಲಿ ಗಾಯಗೊಂಡವರು ಶೀಘ್ರ ಚೇತರಿಸಿಕೊಳ್ಳಲಿ ಎಂದು ಪ್ರಾರ್ಥಿಸುತ್ತೇನೆ ಎಂದವರು ತಿಳಿಸಿದ್ದಾರೆ.

## ನಗರದಲ್ಲಿ ಇಂದು ಉತ್ತರ - ದಕ್ಷಿಣ ಕ್ಷೇತ್ರಗಳ ಕಾಂಗ್ರೆಸ್ ಸಭೆ

ದಾವಣಗೆರೆ ಉತ್ತರ ಮತ್ತು ದಕ್ಷಿಣ ವಿಧಾನಸಭಾ ಕ್ಷೇತ್ರಗಳ ಕಾಂಗ್ರೆಸ್ ಕಾರ್ಯಕರ್ತರ ಸಭೆಯನ್ನು ಇಂದು ಬೆಳಿಗ್ಗೆ 11.30ಕ್ಕೆ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಜಿಲ್ಲಾಧ್ಯಕ್ಷ ಹೆಚ್.ಬಿ.ಮಂಜಪ್ಪ ಅವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ.

ಈ ಸಭೆಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಯೂಬ್, ಕೆ.ಜಿ.ಶಿವಕುಮಾರ್, ಜಿ.ಸಿ.ನಿಂಗಪ್ಪ, ಬಿ.ಕೆ.ಪರಶುರಾಮ್, ಮೇಯರ್ ವಿನಾಯಕ್ ಪೈಲ್ವಾನ್ ಭಾಗವಹಿಸುವರೆಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ.

## ಸಂಸತ್ ಭವನದ ಉದ್ಘಾಟನೆಗೆ ತೆರಳಿದ ರಾಜ್ಯಸಭಾ ಉಪಾಧ್ಯಕ್ಷರಿಗೆ ತರಾಟೆ

ಪಾಟ್ನಾ, ಮೇ 29 - ನೂತನ ಸಂಸತ್ ಭವನದ ಉದ್ಘಾಟನೆಗೆ ತೆರಳಿದ ರಾಜ್ಯಸಭಾ ಉಪಾಧ್ಯಕ್ಷ ಹರಿವಂಶ್ ಅವರನ್ನು ಜೆಡಿ (ಯು) ವಕ್ತಾರ ನೀರಜ್ ಕುಮಾರ್ ತರಾಟೆಗೆ ತೆಗೆದುಕೊಂಡಿದ್ದಾರೆ.

ಕಠಿಣ ಪದಗಳ ಹೇಳಿಕೆ ನೀಡಿರುವ ಕುಮಾರ್, ಕಾರ್ಯಕ್ರಮದಲ್ಲಿ ರಾಜ್ಯಸಭಾಧ್ಯಕ್ಷ ಸಹ ಉಪಸ್ಥಿತರಿರಲಿಲ್ಲ. ಆದರೂ, ಉಪಸಭಾಧ್ಯಕ್ಷ ತೆರಳಿದ್ದಾರೆ ಎಂದಿದ್ದಾರೆ.

ಪತ್ರಿಕೋದ್ಯಮಕ್ಕೆ ನೀವು ನೀಡಿದ ಕೊಡುಗೆಯನ್ನು ಪರಿಗಣಿಸಿ ಜೆಡಿಯು ನಿಮ್ಮನ್ನು ರಾಜ್ಯಸಭೆಗೆ ಕಳಿಸಿತ್ತು. ಸಂಸತ್ ಇತಿಹಾಸದಲ್ಲೇ ಕರಾಳ ಅಧ್ಯಾಯ ನಡೆಯುತ್ತಿರುವಾಗ, ನೀವು ನಿಮ್ಮ ಉನ್ನತ ಕಚೇರಿಯ ಘನತೆಯ ಜೊತೆ ವ್ಯಾಪಾರ ಮಾಡಿದ್ದೀರಿ ಎಂದು ಕುಮಾರ್ ಆರೋಪಿಸಿದ್ದಾರೆ.

ಜೆಡಿಯು ಸೇರಿದಂತೆ, ಇಪ್ಪತ್ತು ಪ್ರತಿಪಕ್ಷಗಳು ಭಾನುವಾರ ನಡೆದ ನೂತನ ಸಂಸತ್ ಭವನದ ಉದ್ಘಾಟನಾ ಸಮಾರಂಭಕ್ಕೆ ಬಹಿಷ್ಕಾರ ಹಾಕಿದ್ದವು.

ಜೆಡಿಯು ಬಹಿಷ್ಕಾರಕ್ಕೆ ನಿರ್ಧರಿಸಿದ್ದರೂ ಹರಿವಂಶ್ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದಾರೆ. ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವ ಬಗ್ಗೆ ಪಕ್ಷದ ಉನ್ನತ ನಾಯಕತ್ವ ನಿರ್ಧರಿಸಲಿದೆ ಎಂದು ಕುಮಾರ್ ಹೇಳಿದ್ದಾರೆ.

ಹರಿವಂಶ್ 2018ರಿಂದ ರಾಜ್ಯಸಭೆಯ ಉಪಾಧ್ಯಕ್ಷರಾಗಿದ್ದಾರೆ. ಬಿಜೆಪಿ ಜೊತೆ ಜೆಡಿಯು ಮೈತ್ರಿಯಲ್ಲಿದ್ದಾಗ ಹರಿವಂಶ್ ಈ ಹುದ್ದೆಗೆ ಬಂದಿದ್ದರು. ನಂತರ ಜೆಡಿಯು ಬಿಜೆಪಿ ಮೈತ್ರಿ ಕಡಿದುಕೊಂಡಿತ್ತು.

## 'ಗ್ಯಾರಂಟಿ' ಕಾಂಗ್ರೆಸ್‌ನಿಂದ ದೋಖಾ

**(1ನೇ ಪುಟದಿಂದ)** ಮೇಲೆ ಟೀಕಿಸುತ್ತಿದ್ದಾರೆ ಎಂದು ಬೊಮ್ಮಾಯಿ ಹೇಳಿದರು.

ಈ ಹಿಂದೆ ಕಾಂಗ್ರೆಸ್ ಸರ್ಕಾರವನ್ನು ಜನರು ಮನೆಗೆ ಕಳಿಸಿದ್ದರು. ನಂತರ ನಮ್ಮನ್ನೂ ಮನೆಗೆ ಕಳಿಸಿದ್ದರು. ಈಗ ಕಾಂಗ್ರೆಸ್‌ನವರು ಕುಂಟು ನೆಪ ಹೇಳುವುದನ್ನು ನೋಡಿದರೆ, ಗ್ಯಾರಂಟಿಗಳು ಪೂರ್ಣ ಜಾರಿಗೆ ಬರುವ ಲಕ್ಷಣ ಇಲ್ಲ. ಕೆಲವೇ ದಿನಗಳಲ್ಲಿ ಬಣ್ಣ ಬಯಲಾಗಲಿದೆ ಎಂದವರು ತಿಳಿಸಿದರು.

## ಮತ್ತೊಂದು ಚೀತಾ ಅರಣ್ಯ ಪ್ರದೇಶಕ್ಕೆ

ಶಿಯೋಪುರ್, ಮೇ 29 – ಮಧ್ಯ ಪ್ರದೇಶದ ಕನ್ಹಾ ರಾಷ್ಟ್ರೀಯ ಉದ್ಯಾನವನದಲ್ಲಿ ಮತ್ತೊಂದು ಚಿತಾವನ್ನು ಅರಣ್ಯ ಪ್ರದೇಶಕ್ಕೆ ಬಿಡಲಾಗಿದೆ. ಇದುವರೆಗೂ 7 ಚೀತಾಗಳನ್ನು ಅರಣ್ಯಕ್ಕೆ ಬಿಡಲಾಗಿದೆ. ದಕ್ಷಿಣ ಆಫ್ರಿಕಾದಿಂದ ತರಿಸಲಾಗಿದ್ದ ಹೆಣ್ಣು ಚಿರತೆಯನ್ನು ಭಾನುವಾರ ಸಂಜೆ ಕಾಡಿನಲ್ಲಿ ಬಿಡಲಾಗಿದೆ. ಹತ್ತು ಚೀತಾಗಳು ಇನ್ನೂ ನಿಯಂತ್ರಿತ ಪ್ರದೇಶಗಳಲ್ಲಿವೆ.

## ಜಯಲಕ್ಷ್ಮಿಗೆ 'ರಂಗ ಚಿನ್ನಾರಿ' ಪ್ರಶಸ್ತಿ ಪ್ರದಾನ



ದಾವಣಗೆರೆ, ಮೇ 29 - ಕೇರಳ ರಾಜ್ಯದ ಕಾಸರಗೋಡು ಜಿಲ್ಲೆಯ ಮಂಗಲ್ಪಾಡಿಯ ಖ್ಯಾತ ಹಿರಿಯ ಯಕ್ಷಗಾನ ವಿದ್ವಾಂಸರು, ಕನ್ನಡಪರ ಸಂಘಟಕರು, ಕೇರಳದ ಗಡಿನಾಡಿನ ಶಾಖೆಯ ಅಧ್ಯಕ್ಷರಾದ ಶ್ರೀಮತಿ ಜಯಲಕ್ಷ್ಮಿ ಕಾರಂತ್ ಅವರನ್ನು ಇತ್ತೀಚೆಗೆ ಕಾಸರಗೋಡಿನ ರಂಗ ಚಿನ್ನಾರಿ ಸಾಂಸ್ಕೃತಿಕ ಸಂಸ್ಥೆಯಿಂದ ಸಂಸ್ಥೆಯ 17ನೇ ವರ್ಷದ ವಾರ್ಷಿಕೋತ್ಸವ ಸಮಾರಂಭದಲ್ಲಿ 'ರಂಗ ಚಿನ್ನಾರಿ' ರಾಜ್ಯ ಪ್ರಶಸ್ತಿಯೊಂದಿಗೆ ಪುರಸ್ಕರಿಸಿ ಸನ್ಮಾನಿಸಲಾಯಿತು ಎಂದು ಸಂಸ್ಥೆಯ ನಿರ್ದೇಶಕ ಕಾಸರಗೋಡು ಚಿನ್ನ ತಿಳಿಸಿದ್ದಾರೆ.

ಶ್ರೀ ಎಡನೀರು ಮಠದ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಮಠದ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ವಹಿಸಿಕೊಂಡಿದ್ದರು. ನೇತ್ರ ತಜ್ಞ ಡಾ|| ಅನಂತ ಕಾಮತ್ ಅಧ್ಯಕ್ಷತೆ ವಹಿಸಿಕೊಂಡಿದ್ದರು. ನ್ಯಾಯವಾದಿ ಹಾಗೂ ಶಾಸಕ ಪ್ರತಾಪ ಸಿಂಹನಾಯಕ ಅವರು ಪ್ರಶಸ್ತಿ ಪ್ರದಾನ ಮಾಡಿದರು.

ಮುಖ್ಯ ಅತಿಥಿಗಳಾಗಿ ನೃತ್ಯ ಕಲಾವಿದೆ ವಿದುಷಿ ಮಾನಸಿ ಸುಧೀರ್, ಹಿರಿಯ ಶಿಕ್ಷಕ ಮಾಧವ ಹೇರಳ, ಎಡನೀರು ಮಠದ ವ್ಯವಸ್ಥಾಪಕ ರಾಜೇಂದ್ರ ಕಲ್ಲೂರಾಯ, ಅಂತರ ರಾಷ್ಟ್ರೀಯ ರಂಗ ಕಲಾವಿದ ಗಣೇಶ್ ಕುಂಬಳೆ, ಡಾ|| ರಮಾ ಐಯ್ಯರ್, ವಿದ್ವಾನ್ ಸುಧೀರ್‌ರಾವ್, ರಂಗ ಕಲಾವಿದ ಸುಧಾಕರ್ ಸಾಲ್ಯಾನ್, ಹಿರಿಯ ಸಾಹಿತಿ ಡಾ. ನಾ.ದಾ. ಶೆಟ್ಟಿ ಮುಂತಾದವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

## ಶೈಕ್ಷಣಿಕ ವರ್ಷ ಆರಂಭ ಶಾಲಾರಂಭಕ್ಕೆ ಸಕಲ ಸಿದ್ಧತೆ

**(1ನೇ ಪುಟದಿಂದ)** ಜೂನ್ 15ರವರೆಗೆ ನೋಂದಣಿಗೆ ಅವಕಾಶವಿದ್ದು, ನೋಂದಣಿ ಕಾರ್ಯಗಳು ನಡೆಯುತ್ತಿವೆ ಎಂದು ಹೇಳಿದರು.

ರಾಜನಹಳ್ಳಿ ಸೀತಮ್ಮ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದಲ್ಲೂ ಪಠ್ಯ ಪುಸ್ತಕದ ಜೋಡಣಾ ಕಾರ್ಯ ನಡೆಯುತ್ತಿತ್ತು. ಉಪ ಪ್ರಾಂಶುಪಾಲ ಎ. ಆರ್. ಮಂಜಪ್ಪ ಅವರು, ಶಿಕ್ಷಕರ ಸಭೆ ನಡೆಸಿ, ಶಾಲಾರಂಭದ ಸಿದ್ಧತೆಗಳ ಬಗ್ಗೆ ಚರ್ಚಿಸಿದರು.

ಈ ವರ್ಷ ಪುಸ್ತಕ ಹಾಗೂ ಬಟ್ಟೆ ಶಾಲಾರಂಭಕ್ಕೂ ಮುನ್ನವೇ ಬಂದಿವೆ. ಪೋಷಕರು ಹಾಗೂ ಎಸ್‌ಡಿಎಂಸಿ ಸದಸ್ಯರಿಗೆ ಮಾಹಿತಿ ನೀಡಿದ್ದೇವೆ. 31ರಂದು ಶಾಲೆಯನ್ನು ಸಿಂಗರಿಸಿ, ಕಾರ್ಯಕ್ರಮ ನಡೆಸಿ, ಶಾಲಾರಂಭಕ್ಕೆ ಚಾಲನೆ ನೀಡಲಾಗುವುದು. ಇಂದು 50 ವಿದ್ಯಾರ್ಥಿನಿಯರು ಆಗಮಿಸಿದ್ದಾಗಿ ಅವರು ಹೇಳಿದರು.

## ಹರೀಶ್ ಹಳ್ಳಿ ಸಾವಿನ ಪ್ರಕರಣ ; ಇಬ್ಬರು ಅಮಾನತ್ತು : ಪ್ರಕರಣ ಸಿಐಡಿಗೆ ವರ್ಗ

ದಾವಣಗೆರೆ, ಮೇ 29- ಆರ್‌ಟಿಐ ಕಾರ್ಯಕರ್ತ ಹರೀಶ್ ಹಳ್ಳಿ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ, ಕರ್ತವ್ಯ ಲೋಪ ಎಸಗಿದ ಹಿನ್ನೆಲೆಯಲ್ಲಿ ಗಾಂಧಿನಗರ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಕೃಷ್ಣಪ್ಪ ಹಾಗೂ ಕಾನ್‌ಸ್ಟೇಬಲ್ ದೇವರಾಜ್ ಅವರನ್ನು ಅಮಾನತ್ತು ಮಾಡಲಾಗಿದೆ.

ಆರೋಪಿಯ ಪಕ್ಕದಲ್ಲಿ ಕುಳಿತಿದ್ದ ಪಿಎಸ್‌ಐ ಮತ್ತು ಒಬ್ಬ ಕಾನ್‌ಸ್ಟೇಬಲ್ ಅವರನ್ನು ಅಮಾನತ್ತು ಮಾಡಲಾಗಿದ್ದು, ಪ್ರಕರಣವನ್ನು ಸಿಐಡಿ ಕೈಗೆತ್ತಿಕೊಂಡಿದೆ.

ಡಿಎಸ್ಪಿ ನೇತೃತ್ವದ ಸಿಐಡಿಯ ನಾಲ್ವರು ಸದಸ್ಯರ ತಂಡ ಇಂದು ಸ್ಥಳಕ್ಕೆ ಭೇಟಿ ನೀಡಿದ್ದು, ಮುಂದಿನ ತನಿಖೆ ನಡೆಸಲಿದ್ದಾರೆ ಎಂದು ಎಸ್ಪಿ ಅರುಣ್ ತಿಳಿಸಿದ್ದಾರೆ. ನಿವೇಶನಗಳನ್ನು ತಮ್ಮ ಹೆಸರಿಗೆ ನೋಂದಣಿ ಮಾಡಿಸಿಕೊಳ್ಳಲು ನಕಲಿ ದಾಖಲೆ ಸೃಷ್ಟಿಸಿದ ಆರೋಪದಡಿ ದಾಖಲಾಗಿದ್ದ ಪ್ರಕರಣದ ವಿಚಾರಣೆಗಾಗಿ ಪೊಲೀಸರು ಹರೀಶ್ ಹಳ್ಳಿ ಅವರನ್ನು ಭಾನುವಾರ ತಡರಾತ್ರಿ ಕಾಕನೂರಿನಲ್ಲಿ ವಶಕ್ಕೆ ಪಡೆದು, ಕಾರಿನಲ್ಲಿ ದಾವಣಗೆರೆಗೆ ಕರೆದುಕೊಂಡು ಬರುತ್ತಿದ್ದರು.

ತೋಳಹುಣಸೆ ಬಳಿ ಬಂದಾಗ ಹರೀಶ್ ಅವರು ತಪ್ಪಿಸಿಕೊಂಡು ಮೇಲ್ಸೇತುವೆಯಿಂದ ಜಿಗಿದು ಸರ್ವೀಸ್ ರಸ್ತೆಗೆ ಬಿದ್ದಿದ್ದರಿಂದ ಗಾಯಗೊಂಡು ಮೃತಪಟ್ಟಿದ್ದರು ಎಂದು ಪೊಲೀಸರು ಮಾಹಿತಿ ನೀಡಿದ್ದರು. ತಮ್ಮ ಪತಿಯನ್ನು ಪೊಲೀಸರೇ ಕೊಲೆ ಮಾಡಿದ್ದಾರೆ ಎಂದು ಹರೀಶ್ ಅವರ ಪತ್ನಿ ಕೆ.ಆರ್. ಲತಾ ದೂರು ನೀಡಿದ್ದರು.

## ಟಿಪ್ಪು ಬಂದೂಕು ರಫ್ತಿನ ಮೇಲೆ ನಿಷೇಧ

ಲಂಡನ್, ಮೇ 29 – ಮೈಸೂರಿನ ರಾಜ ಟಿಪ್ಪು ಸುಲ್ತಾನ್‌ಗಾಗಿ ರೂಪಿಸಲಾಗಿದ್ದ ಬಂದೂಕಿನ ರಫ್ತಿನ ಮೇಲೆ ಬ್ರಿಟನ್ ನಿಷೇಧ ಹೇರಿದೆ. ಬ್ರಿಟನ್‌ನ ಸಂಸ್ಥೆಯೊಂದು ಬಂದೂಕು ಅಧ್ಯಯನ ಮಾಡಲು ಅವಕಾಶ ನೀಡುವ ಸಲುವಾಗಿ ಈ ಕ್ರಮ ತೆಗೆದುಕೊಳ್ಳಲಾಗಿದೆ.

1794ರ ವೇಳೆ ಈ ಬಂದೂಕನ್ನು ಪಕ್ಷಿಗಳ ಬೇಟೆಯಾಡಲಿಕ್ಕೆ ಉತ್ಪಾದಿಸಲಾಗಿತ್ತು. ಅಸಾದ್ ಖಾನ್ ಮೊಹಮ್ಮದ್ ಅವರು ಈ ಬಂದೂಕು ರೂಪಿಸಿದ್ದರು. ಈ ಬಂದೂಕನ್ನು ಟಿಪ್ಪು ಸುಲ್ತಾನ್ ಜನರಲ್ ಕಾರ್ನ್‌ವಾಲಿಸ್‌ಗೆ ಕೊಡುಗೆಯಾಗಿ ನೀಡಿದ್ದರು ಎನ್ನಲಾಗಿದೆ. ಆಕರ್ಷಕವಾಗಿರುವ ಹಾಗೂ ತಾಂತ್ರಿಕವಾಗಿ ಮುಂದುವರೆದ ಈ ಬಂದೂಕು ಬ್ರಿಟನ್ ಮತ್ತು ಭಾರತದ ನಡುವಿನ ಇತಿಹಾಸದ ಕೊಂಡಿಯೂ ಆಗಿದೆ. ಈ ಹಿನ್ನೆಲೆಯಲ್ಲಿ ಬಂದೂಕಿನ ಅಧ್ಯಯನಕ್ಕೆ ಬ್ರಿಟನ್ ಅವಕಾಶ ಮಾಡಿಕೊಡಲು ಮುಂದಾಗಿದೆ. ಈ ಸಿಂಗಲ್ ಬ್ಯಾರಲ್ ಗನ್ ಮೂಲಕ ರೀಲೋಡ್ ಮಾಡದೇ ಎರಡು ಗುಂಡು ಹಾರಿಸಲು ಅವಕಾಶ ಇತ್ತು. ಟಿಪ್ಪು ಕಾಲದಲ್ಲಿ ಉತ್ಪಾದಿಸಲಾದ ಹಲವಾರು ಶಸ್ತ್ರಗಳು ಆಕರ್ಷವಾಗಿರುವ ಜೊತೆಗೆ ಮಾರಣಾಂತಿಕವೂ ಆಗಿರುತ್ತಿದ್ದವು ಎಂದು ಬ್ರಿಟನ್ ಅಧಿಕಾರಿಗಳು ಹೇಳಿದ್ದಾರೆ.

## ನಿರುದ್ಯೋಗ ಪ್ರಮಾಣ ಶೇ.6.8ಕ್ಕೆ ಇಳಿಕೆ

ನವದೆಹಲಿ, ಮೇ 29 – ನಗರ ಪ್ರದೇಶಗಳಲ್ಲಿ ನಿರುದ್ಯೋಗ ದರ ಶೇ.6.8ಕ್ಕೆ ಇಳಿಕೆಯಾಗಿದೆ ಎಂದು ರಾಷ್ಟ್ರೀಯ ಮಾದರಿ ಸಮೀಕ್ಷೆಯ ವರದಿ ತಿಳಿಸಿದೆ. ಕಳೆದ ವರ್ಷ ಜನವರಿ - ಮಾರ್ಚ್ ಅವಧಿಯಲ್ಲಿ ನಿರುದ್ಯೋಗ ದರ ಶೇ.8.2ರಷ್ಟಿತ್ತು.

ಕೊರೊನಾ ಪರಿಣಾಮವೇ ಇದಕ್ಕೆ ಕಾರಣ ಎಂದು ವರದಿಯಲ್ಲಿ ತಿಳಿಸಲಾಗಿದೆ.

## ಕೃಷಿ ಇಲಾಖೆ ಅಧೀಕ್ಷಕ ಶಿವಶಂಕರ್‌ಗೆ ಬೀಳ್ಕೊಡುಗೆ



ದಾವಣಗೆರೆ, ಮೇ 29- ಕೃಷಿ ಇಲಾಖೆಯಲ್ಲಿ 41 ವರ್ಷಗಳಿಂದ ಸೇವೆ ಸಲ್ಲಿಸಿದ ಕೆ.ಶಿವಶಂಕರ್ ಅವರು ಇದೀಗ ನಿವೃತ್ತಿ ಹೊಂದಿದ್ದಾರೆ. ಕೃಷಿ ಇಲಾಖೆಯಲ್ಲಿ ಅಧಿಕಾರಿಗಳು/ನೌಕರರು ಏರ್ಪಡಿಸಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಕೆ. ಶಿವಶಂಕರ್ ಅವರನ್ನು ಸನ್ಮಾನಿಸಲಾಯಿತು.

ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ್ ಚಿಂತಾಲ್, ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಪಾಲಾಕ್ಷಿ ಮಾತನಾಡಿ, ಶಿವಶಂಕರ್ ಅವರ ಸೇವೆಯನ್ನು ಶ್ಲಾಘಿಸಿದರು.

ಜಿಲ್ಲಾ ಸರ್ಕಾರಿ ನೌಕರರ ಸಂಘದ ಮಾಜಿ ಜಿಲ್ಲಾಧ್ಯಕ್ಷ ಎ.ಆರ್. ಉಜ್ಜಿನಪ್ಪ, ಬಿ.ಎಸ್.ಬಸವರಾಜಪ್ಪ, ಉಪ ಕೃಷಿ ನಿರ್ದೇಶಕ ಆರ್. ತಿಪ್ಪೇಸ್ವಾಮಿ, ಜಂಟಿ ಕೃಷಿ ನಿರ್ದೇಶಕರ ಕಚೇರಿಯ ಆಡಳಿತಾಧಿಕಾರಿ ಎನ್.ಎಲ್. ವೀಣಾ, ಜಿ.ಪಂ. ಕಚೇರಿಯ ಸಹಾಯಕ ಕಾರ್ಯದರ್ಶಿ ಬಸವರಾಜ್, ಉಪನಿರ್ದೇಶಕರ ಕಛೇರಿಯ ಸಹಾಯಕ ಆಡಳಿತಾಧಿಕಾರಿ ಎಂ.ಎಂ.ಹೀರೆಮಠ್, ಹರಿಹರ ತಾಲ್ಲೂಕು ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ರೇವಣಸಿದ್ದಪ್ಪ, ಅಂಗಡಿ ಪಂಚಮಸಾಲಿ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಶ್ರೀಧರ್ ಮತ್ತು ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಜಿಲ್ಲಾ ಸರ್ಕಾರಿ ನೌಕರರ ಸಂಘದ ಖಜಾಂಚಿ ಹಾಗೂ ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಅಧೀಕ್ಷಕ ಬಿ.ಆರ್.ತಿಪ್ಪೇಸ್ವಾಮಿ ಮಾತನಾಡಿದರು. ನಂದಿನಿ ದೇವರಗುಡಿ ಪ್ರಾರ್ಥಿಸಿದರು. ನಾಗೇಶ್ ವಂದಿಸಿದರು.

## ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ **ಶ್ರೀ ಉದಯ್ ಶಿವಕುಮಾರ್ ದಿ|| ರಾಜಣ್ಣ** 52 ವರ್ಷ, ವಾಸ ಬನಶಂಕರಿ ಬಡಾವಣೆ, ಮನೆ ನಂ. 1924/196 ಎನ್.ಹೆಚ್. 4, ಹತ್ತಿರ ದಾವಣಗೆರೆ ಜಿಲ್ಲೆ ನಿವಾಸಿಯಾದ ಇವರು ನೀಡಿದ ಮಾಹಿತಿಯ ಮೇರೆಗೆ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ,

ಈ ಕೆಳಕಂಡ ಷೆಡೂಲ್ ಸ್ವತ್ತಿನ ಕುರಿತು ಪ್ರತಿವಾದಿಗಳಾದ **ನಾಗಮ್ಮ, ನಿಂಗರಾಜು, ಬಸವರಾಜು.ಆರ್ ಲಲಿತಮ್ಮ, ಹನುಮಂತಪ್ಪ, ನಾರಾಯಣಸ್ವಾಮಿ. ಎಂ.ಜಿ.ಎಸ್** ಇವರುಗಳ ವಿರುದ್ದ ದಾವಣಗೆರೆಯ ಒಂದನೇ ಹಿರಿಯ ಸಿವಿಲ್ ನ್ಯಾಯಲಯದಲ್ಲಿ ಅಸಲು ದಾವೆ ನಂ. 177/23 ಅನ್ನು ಸಲ್ಲಿಸಿದ್ದು, ಈ ದಾವೆಯಲ್ಲಿ ಮಾನ್ಯ ನ್ಯಾಯಲಯವು ಷೆಡ್ಯೂಲ್ ಸ್ವತ್ತಿಗೆ ಸಂಬಂದಿಸಿದಂತೆ ಯಾವುದೇ ಪರಭಾರೆ ಅಡಮಾನ ವಗೈರೆ ಮಾಡದಂತೆ ಏಕಪಕ್ಷಿಯ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಮಾಡಿರುತ್ತದೆ. ತದನಂತರ ಮೇಲ್ಕಾಣಿಸಿದ ಪ್ರತಿವಾದಿಗಳಾದ ನಾಗಮ್ಮ ಮತ್ತು ಇತರರು ತರಾತುರಿಯಲ್ಲಿ ಸಾರ್ವಜನಿಕರಿಗೆ ಸುಳ್ಳು ಮಾಹಿತಿಗಳನ್ನು ನೀಡಿ ಸದರಿ ಷೆಡೂಲ್ ಸ್ವತ್ತುಗಳನ್ನು ಮಾರಾಟ ಮಾಡಲು ಅಥವಾ ಯಾವುದೇ ರೀತಿಯ ಪರಬಾರೆ ಮಾಡಲು ಹೊರಟಿರುತ್ತಾರೆ ಇವರುಗಳಿಗೆ ಈ ಷೆಡೂಲ್ ಸ್ವತ್ತಿನಲ್ಲಿ ಯಾವುದೇ ಹಕ್ಕು ಬಾದ್ಯತೆಗಳು ಇರುವುದಿಲ್ಲ ಅದ್ದರಿಂದ ಸಾರ್ವಜನಿಕರು ಸದರಿ ಷೆಡ್ಯೂಲ್ ಸ್ವತ್ತುಗಳೊಂದಿಗೆ ಯಾವುದೇ ರೀತಿಯ ಕ್ರಯಪತ್ರವನ್ನಾಗಲೀ, ಪರಭಾರೆ ಪತ್ರವನ್ನಾಗಲೀ ಮಾಡಿಕೋಳ್ಳದಂತೆ ಮನವಿ ಮಾಡಿಕೋಳ್ಳುತ್ತನೆ ಒಂದು ವೇಳೆ ಸಾರ್ವಜನಿಕರು ಸದರಿ ಷೆಡೂಲ್ ಸ್ವತ್ತಿಗೆ ಸಂಬಂದಿಸಿದಂತೆ ವ್ಯವಹರಿಸಿದ್ದೇ ಆದಲ್ಲಿ ಅದರಿಂದ ಉಂಟಾಗುವ ಕಷ್ಟನಷ್ಟಗಳಿಗೆ ಹಾಗೂ ಅವರೇ ಹೊಣೆಗಾರರಾಗಿರುತ್ತಾರೆ ಎಂದು ತಿಳಿಯಿರಿ ಇದಕ್ಕೆ ಸಂಬಂದಿಸಿದ ಷೆಡ್ಯೂಲ್ ಸ್ವತ್ತುಗಳು ಈ ಕೆಳಗಿನಂತೆ ಹೇಳಲಾಗಿದೆ.

### ಷೆಡ್ಯೂಲ್ ಬಿ

ದಾವಣಗೆರೆ ಸಬ್ ರಿಜಿಸ್ಟ್ರಾರ್‌ರವರ ಆಫೀಸ್ ಅಧಿಕಾರಕ್ಕೆ ಒಳಪಟ್ಟ, ದಾವಣಗೆರೆ ತಾಲೂಕು, ಕುಬಸ ಹೋಬಳಿ, ಕುಂದುವಾಡ ಗ್ರಾಮದ ರಿ ಸರ್ವೆ ನಂ. 256/1 ಖಾತೆ ನಂ.4, ಒಟ್ಟು ವಿಸ್ತೀರ್ಣ ಎಕರೆ 3, ಗುಂಟೆ 02 ವುಳ್ಳ ಜಮೀನು ಪೈಕಿ ಪೂರ್ವ ಭಾಗದ ವಿಸ್ತೀರ್ಣ ಎಕರೆ ಎರಡು ಗುಂಟೆ ಇಲ್ಲ (2-00) ಅಕಾರ ರೂ. 4-00 ವುಳ್ಳ ತರಿ ಜಮೀನು ಇದಕ್ಕೆ ಚಕ್ಕುಬಂದಿ : **ಪೂರ್ವಕ್ಕೆ** : ಹೆಂಚಿನಮನೆ ರುದ್ರಪ್ಪನವರ ಜಮೀನು, **ಪಶ್ಚಿಮ** : ಇದೇ ಸರ್ವೆ ನಂಬರು ಪೈಕಿ ಉಳಿದ ಜಮೀನು, **ಉತ್ತರಕ್ಕೆ:** ಶ್ರೀ ನಾಗಮ್ಮ ಮತ್ತು ಭೀಮಪ್ಪ ಇವರುಗಳ ಜಮೀನು, **ದಕ್ಷಿಣಕ್ಕೆ** : ವಾಮದೇವಪ್ಪನವರ ಜಮೀನು. ಈ ಮಧ್ಯದ ಜಮೀನು ಈ ಕ್ರಯದ ಕರಾರು ಪತ್ರಕ್ಕೆ ಒಳಪಟ್ಟಿರುತ್ತದೆ.

ನನ್ನ ಕಕ್ಷಿದಾರರಾದ **ಶ್ರೀ ಉದಯ್ ಶಿವಕುಮಾರ್ ದಿ|| ರಾಜಣ್ಣ** 52 ವರ್ಷ, ವಾಸ ಬನಶಂಕರಿ ಬಡಾವಣೆ, ಮನೆ ನಂ.1924/196 ಎನ್.ಹೆಚ್. 4, ಹತ್ತಿರ ದಾವಣಗೆರೆ ಜಿಲ್ಲೆ ನಿವಾಸಿಯಾದ ಇವರು ನೀಡಿದ ಮಾಹಿತಿಯ ಮೇರೆಗೆ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ,

ಈ ಕೆಳಕಂಡ ಷೆಡೂಲ್ ಸ್ವತ್ತಿನ ಕುರಿತು ಪ್ರತಿವಾದಿಗಳಾದ **ಲಕ್ಕಮ್ಮ ಪರಶುರಾಮ್, ನಾಗರಾಜ, ಮಂಜುನಾಥ್, ಇಂದ್ರಮ್ಮ ಪ್ರದೀಪ್, ಮಧುಕುಮಾರ್,** ಇವರು ನೊಂದಾಯಿತ ಕ್ರಯದ ಕರಾರು ದಿನಾಂಕ 06.08.2015 ರಂದು ಬರೆದುಕೊಟ್ಟಿದ್ದು ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತಿಗೆ ಸಂಬಂದಿಸಿದಂತೆ ನಮ್ಮ ಕಕ್ಷಿದಾರರು ಲಕ್ಕಮ್ಮ ಮತ್ತು ಇತರರುಗಳ ವಿರುದ್ದ ದಾವಣಗೆರೆಯ ಒಂದನೇ ಹಿರಿಯ ಸಿವಿಲ್ ನ್ಯಾಯಲಯದಲ್ಲಿ ಅಸಲು ದಾವೆ ನಂ. 175/2023 ಅನ್ನು ಸಲ್ಲಿಸಿದ್ದು, ತದನಂತರ ಮೇಲ್ಕಾಣಿಸಿದ ಪ್ರತಿವಾದಿಗಳಾದ ಲಕ್ಕಮ್ಮ ಮತ್ತು ಇತರರು ತರಾತುರಿಯಲ್ಲಿ ಸಾರ್ವಜನಿಕರಿಗೆ ಸುಳ್ಳು ಮಾಹಿತಿಗಳನ್ನು ನೀಡಿ ಸದರಿ ಷೆಡೂಲ್ ಸ್ವತ್ತುಗಳನ್ನು ಮಾರಾಟ ಮಾಡಲು ಅಥವಾ ಯಾವುದೇ ರೀತಿಯ ಪರಭಾರೆ ಮಾಡಲು ಹೊರಟಿರುತ್ತಾರೆ ಇವರುಗಳಿಗೆ ಈ ಷೆಡೂಲ್ ಸ್ವತ್ತಿನಲ್ಲಿ ಯಾವುದೇ ಹಕ್ಕು ಬಾದ್ಯತೆಗಳು ಇರುವುದಿಲ್ಲ ಅದ್ದರಿಂದ ಸಾರ್ವಜನಿಕರು ಸದರಿ ಷೆಡ್ಯೂಲ್ ಸ್ವತ್ತುಗಳೊಂದಿಗೆ ಯಾವುದೇ ರೀತಿಯ ಕ್ರಯಪತ್ರವನ್ನಾಗಲೀ, ಪರಭಾರೆ ಪತ್ರವನ್ನಾಗಲೀ ಮಾಡಿಕೋಳ್ಳದಂತೆ ಮನವಿ ಮಾಡಿಕೋಳ್ಳುತ್ತನೆ ಒಂದು ವೇಳೆ ಸಾರ್ವಜನಿಕರು ಸದರಿ ಷೆಡೂಲ್ ಸ್ವತ್ತಿಗೆ ಸಂಬಂದಿಸಿದಂತೆ ವ್ಯವಹರಿಸಿದ್ದೇ ಆದಲ್ಲಿ ಅದರಿಂದ ಉಂಟಾಗುವ ಕಷ್ಟನಷ್ಟಗಳಿಗೆ ಹಾಗೂ ಅವರೇ ಹೊಣೆಗಾರರಾಗಿರುತ್ತಾರೆ ಎಂದು ತಿಳಿಯಿರಿ ಇದಕ್ಕೆ ಸಂಬಂದಿಸಿದ ಷೆಡ್ಯೂಲ್ ಸ್ವತ್ತುಗಳು ಈ ಕೆಳಗಿನಂತೆ ಹೇಳಲಾಗಿದೆ.

### ಷೆಡ್ಯೂಲ್

ದಾವಣಗೆರೆ ತಾಲ್ಲೂಕು ಸಬ್ ರಿಜಿಸ್ಟ್ರಾರ್‌ರವರ ಕಚೇರಿ ವ್ಯಾಪ್ತಿಗೆ ಒಳಪಟ್ಟ, ದಾವಣಗೆರೆ ತಾಲೂಕು, ಕುಬಸ ಹೋಬಳಿ, ಕುಂದುವಾಡ ಗ್ರಾಮದ ರಿ ಸರ್ವೆ ನಂ. 257/1, ಖಾತೆ ನಂ.3, ಒಟ್ಟು ವಿಸ್ತೀರ್ಣ ಎಕರೆ 1, ಗುಂಟೆ 36 ವುಳ್ಳ ಜಮೀನಿನ ಅಕಾರ ರೂ. 1-90 ವುಳ್ಳ ತರಿ ಜಮೀನು ಇದಕ್ಕೆ ಚಕ್ಕುಬಂದಿ : **ಪೂರ್ವಕ್ಕೆ** : ಎನ್ ಹೆಚ್ 4 ಬೈಪಾಸ್ ರಸ್ತೆ, **ಪಶ್ಚಿಮ** : ನಾಗಮ್ಮ ಮತ್ತು ಇತರೆಯವರಿಂದ ನಿಮಗೆ ಅಗ್ರಿಮೆಂಟ್ ಆಗಿರುವ ಸ, ನಂ 257/3, **ಉತ್ತರಕ್ಕೆ:** ಮಲ್ಲಪ್ಪ ಮೇಷ್ಟ್ರು ಜಮೀನು, **ದಕ್ಷಿಣಕ್ಕೆ** : ಶ್ರೀಮತಿ ನಾಗಮ್ಮ ಸುಂದರಪ್ಪ ಇವರುಗಳ ಜಮೀನು. ಈ ಮಧ್ಯದ ಜಮೀನು ಈ ಕ್ರಯದ ಕರಾರು ಪತ್ರಕ್ಕೆ ಒಳಪಟ್ಟಿರುತ್ತದೆ.

ನನ್ನ ಕಕ್ಷಿದಾರರಾದ **ಶ್ರೀ ಉದಯ್ ಶಿವಕುಮಾರ್ ದಿ|| ರಾಜಣ್ಣ** 52 ವರ್ಷ, ವಾಸ ಬನಶಂಕರಿ ಬಡಾವಣೆ, ಮನೆ ನಂ.1924/196 ಎನ್.ಹೆಚ್. 4, ಹತ್ತಿರ ದಾವಣಗೆರೆ ಜಿಲ್ಲೆ ನಿವಾಸಿಯಾದ ಇವರು ನೀಡಿದ ಮಾಹಿತಿಯ ಮೇರೆಗೆ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ,

ಈ ಕೆಳಕಂಡ ಷೆಡೂಲ್ ಸ್ವತ್ತಿನ ಕುರಿತು ಪ್ರತಿವಾದಿಗಳಾದ **ನಾಗಮ್ಮ ಮಹೇಶ್ ಕೆ. ಬಿ, ಜಯಮ್ಮ ಪ್ರಸನ್ನಕುಮಾರ್, ಮಂಜಮ್ಮ ಎ ಡಿ, ರೇಣುಕಮ್ಮ ಮಹಾಂತೇಶ್ ಕೆ ಟಿ, ಹಾಲಪ್ಪ ಮಂಜಪ್ಪ ಕೆ, ಪ್ರವೀಣ್‌ಕುಮಾರ್, ಗೀರೀಶ್, ರಮೇಶ್ ಕೃಷ್ಣಮೂರ್ತಿ, ಎಚ್. ನಾಗರಾಜ್, ಅವಿನಾಶ್, ಜ್ಯೋತಿ, ಅಂಜಲಿ, ಕಾರ್ತಿಕ್,** ಇವರುಗಳು ನೊಂದಾಯಿತ ಕ್ರಯದ ಕರಾರು ದಿನಾಂಕ 04.08.2015 ರಂದು ಬರೆದುಕೋಟ್ಟಿದ್ದು ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತಿಗೆ ಸಂಬಂದಿಸಿದಂತೆ ನಮ್ಮ ಕಕ್ಷಿದಾರರು ಲಕ್ಕಮ್ಮ ಮತ್ತು ಇತರರುಗಳ ವಿರುದ್ದ ದಾವಣಗೆರೆಯ ಒಂದನೇ ಹಿರಿಯ ಸಿವಿಲ್ ನ್ಯಾಯಲಯದಲ್ಲಿ ಅಸಲು ದಾವೆ ನಂ. 176/2023 ಅನ್ನು ಸಲ್ಲಿಸಿದ್ದು, ತದನಂತರ ಮೇಲ್ಕಾಣಿಸಿದ ಪ್ರತಿವಾದಿಗಳಾದ ಲಕ್ಕಮ್ಮ ಮತ್ತು ಇತರರು ತರಾತುರಿಯಲ್ಲಿ ಸಾರ್ವಜನಿಕರಿಗೆ ಸುಳ್ಳು ಮಾಹಿತಿಗಳನ್ನು ನೀಡಿ ಸದರಿ ಷೆಡ್ಯೂಲ್ ಸ್ವತ್ತುಗಳನ್ನು ಮಾರಾಟ ಮಾಡಲು ಅಥವಾ ಯಾವುದೇ ರೀತಿಯ ಪರಭಾರೆ ಮಾಡಲು ಹೊರಟಿರುತ್ತಾರೆ ಇವರುಗಳಿಗೆ ಈ ಷೆಡೂಲ್ ಸ್ವತ್ತಿನಲ್ಲಿ ಯಾವುದೇ ಹಕ್ಕು ಬಾಧ್ಯತೆಗಳು ಇರುವುದಿಲ್ಲ ಅದ್ದರಿಂದ ಸಾರ್ವಜನಿಕರು ಸದರಿ ಷೆಡೂಲ್ ಸ್ವತ್ತುಗಳೊಂದಿಗೆ ಯಾವುದೇ ರೀತಿಯ ಕ್ರಯಪತ್ರವನ್ನಾಗಲೀ, ಪರಭಾರೆ ಪತ್ರವನ್ನಾಗಲೀ ಮಾಡಿಕೋಳ್ಳದಂತೆ ಮನವಿ ಮಾಡಿಕೋಳ್ಳುತ್ತನೆ ಒಂದು ವೇಳೆ ಸಾರ್ವಜನಿಕರು ಸದರಿ ಷೆಡೂಲ್ ಸ್ವತ್ತಿಗೆ ಸಂಬಂಧಿಸಿದಂತೆ ವ್ಯವಹರಿಸಿದ್ದೇ ಆದಲ್ಲಿ ಅದರಿಂದ ಉಂಟಾಗುವ ಕಷ್ಟನಷ್ಟಗಳಿಗೆ ಹಾಗೂ ಅವರೇ ಹೊಣೆಗಾರರಾಗಿರುತ್ತಾರೆ ಎಂದು ತಿಳಿಯಿರಿ ಇದಕ್ಕೆ ಸಂಬಂಧಿಸಿದ ಷೆಡ್ಯೂಲ್ ಸ್ವತ್ತುಗಳು ಈ ಕೆಳಗಿನಂತೆ ಹೇಳಲಾಗಿದೆ.

### ಷೆಡ್ಯೂಲ್

ದಾವಣಗೆರೆ ತಾಲ್ಲೂಕು ಸಬ್ ರಿಜಿಸ್ಟ್ರಾರ್‌ರವರ ಕಚೇರಿ ವ್ಯಾಪ್ತಿಗೆ ಒಳಪಟ್ಟ, ದಾವಣಗೆರೆ ತಾಲೂಕು, ಕುಬಸ ಹೋಬಳಿ, ಕುಂದುವಾಡ ಗ್ರಾಮದ ರಿ ಸರ್ವೆ ನಂ. 257/3, ಒಟ್ಟು ವಿಸ್ತೀರ್ಣ ಎಕರೆ 2, ಗುಂಟೆ 63 ವುಳ್ಳದ್ದರ ಪೈಕಿ ಪೂರ್ವ ಭಾಗದ ಕಡೆಗೆ ಬರತಕ್ಕ ವಿಸ್ತೀರ್ಣ ಎಕರೆ – ಎರಡು, ತುಂಟೆ – ಇಲ್ಲ (2-00) ವುಳ್ಳ ತರಿ ಜಮೀನು ಇದಕ್ಕೆ ಚಕ್ಕುಬಂದಿ : **ಪೂರ್ವಕ್ಕೆ** : ಶ್ರೀಮತಿ ಲಕ್ಕಮ್ಮ ಇಂದ್ರಮ್ಮ ಇವರುಗಳ ಜಮೀನು, **ಪಶ್ಚಿಮ** : ಇದೇ ಸರ್ವೆ ನಂ ಪೈಕಿ ಉಳಿದ 0-31 ಗಂಟೆ ಜಮೀನು, **ಉತ್ತರಕ್ಕೆ:** ಮಲ್ಲಪ್ಪ ಮೇಷ್ಟ್ರು ಇವರ ಸಹೋದರರ ಜಮೀನು, **ದಕ್ಷಿಣಕ್ಕೆ** : ಶ್ರೀಮತಿ ನಾಗಮ್ಮ, ಲಲಿತಮ್ಮ ಇವರುಗಳ ಜಮೀನು. ಈ ಮಧ್ಯದ ಜಮೀನು ಈ ಕ್ರಯದ ಕರಾರು ಪತ್ರಕ್ಕೆ ಒಳಪಟ್ಟಿರುತ್ತದೆ.

**ಎಸ್. ಎಸ್. ಸಲೀಂ, ಕಕ್ಷಿದಾರರ ಪರ ವಕೀಲರು , 1785 /3, 2ನೇ ಮೆನ್ , 2ನೇ ಕ್ರಾಸ್, ವಿನೋಬನಗರ, ದಾವಣಗೆರೆ , ಮೊ : ನಂ. 9448178598**

## ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮಗಳು



**ಮಲೇಬೆನ್ನೂರು**

ಮಲೇಬೆನ್ನೂರು, ಮೇ 29 - ಪಟ್ಟಣದ ವಿವಿಧ ಶಾಲೆಗಳಲ್ಲಿ ಸೋಮವಾರ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮಗಳು ಸಂಭ್ರಮದಿಂದ ಜರುಗಿದವು.

ಇಲ್ಲಿನ ಶ್ರೀ ಬೀರಲಿಂಗೇಶ್ವರ ಹಿರಿಯ ಪ್ರಾಥಮಿಕ ಮತ್ತು ಬಾಲಕರ ಹಾಗೂ ಬಾಲಕಿಯರ ಪ್ರೌಢಶಾಲೆಗಳಲ್ಲಿ ಶಾಲಾ ಪ್ರಾರಂಭೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ಹಾಗೂ ಸಿಹಿ ವಿತರಿಸಲಾಯಿತು.

ವಿದ್ಯಾಸಂಸ್ಥೆಯ ಕಾರ್ಯದರ್ಶಿ ಬಿ. ಪಿ. ಕರಿಯಪ್ಪ ಹಾಗೂ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಡಿಕೆ ಕರಿಬಸಪ್ಪ, ಬಾಲಕರ ಪ್ರೌಢಶಾಲೆ ಮುಖ್ಯ ಶಿಕ್ಷಕ ಸಿ ಜಯಣ್ಣ, ಬಾಲಕಿಯರ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಮಂಜುನಾಥ್ ಹಾಗೂ ಸಹ ಶಿಕ್ಷಕರು, ಪೋಷಕರು ಮತ್ತು ವಿದ್ಯಾರ್ಥಿಗಳು ಈ ವೇಳೆ ಹಾಜರಿದ್ದರು.

# ಕೇಂದ್ರದ ಯೋಜನೆಗಳಲ್ಲಿ ರಾಜಕಾರಣ ಮಾಡಿದರೆ ರಾಜ್ಯಕ್ಕೆ ನಷ್ಟ

ಬೆಂಗಳೂರು, ಮೇ 29 - ಕೇಂದ್ರದ ಯೋಜನೆಗಳನ್ನು ರಾಜ್ಯದ ಜನರಿಗೆ ತಲುಪಿಸುವಲ್ಲಿ ರಾಜಕಾರಣ ಮಾಡಿದರೆ, ರಾಜ್ಯಕ್ಕೆ ನಷ್ಟವಾಗಲಿದೆ ಎಂದು ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಹೇಳಿದರು.

ಕೇಂದ್ರ ಸರ್ಕಾರ ಒಂಬತ್ತು ವರ್ಷ ಪೂರೈಸಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ 9 ವರ್ಷ ಪೂರ್ಣಗೊಳಿಸಿದೆ. ಒಂಭತ್ತು ವರ್ಷದಲ್ಲಿ ಸಾಕಷ್ಟು ಬದಲಾಗಿದೆ. ಪ್ರತಿಯೊಬ್ಬ ನಾಗರಿಕನ ಬದುಕಿನಲ್ಲಿ ಆರ್ಥಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಉನ್ನತೀಕರಣ ಆಗಿರುವುದನ್ನು ನಾವು ನೋಡಿದ್ದೇವೆ ಎಂದರು.

ಪ್ರಧಾನಿ ಮೋದಿ ಅಧಿಕಾರ ತೆಗೆದುಕೊಂಡಾಗ ಆರ್ಥಿಕ ಪರಿಸ್ಥಿತಿ ಸರಿಯಾಗಿರಲಿಲ್ಲ. ಭಾರತದ ವಿಶ್ವಾಸಾರ್ಹತೆ ಕುಸಿತ ಕಂಡಿತ್ತು. ಇಂತಹ ಸಂದರ್ಭದಲ್ಲಿ ಮೋದಿಯವರು ತಾವು ಗುಜರಾತಿನ ಮುಖ್ಯಮಂತ್ರಿಯಾಗಿ ಪಡೆದಿದ್ದ ಅನುಭವ ಹಾಗೂ ಇಡೀ ದೇಶ ಅರಿತಿದ್ದರಿಂದ ದೇಶದ ಆಂತರಿಕ ಮತ್ತು ಬಾಹ್ಯ ಸುರಕ್ಷತೆಗೆ ಒತ್ತು ಕೊಟ್ಟಿದ್ದಾರೆ ಎಂದು ಹೇಳಿದರು.

ಯುಪಿಎ ಅವಧಿಯಲ್ಲಿ ಭಯೋತ್ಪಾದಕ ಚಟುವಟಿಕೆ ಹೆಚ್ಚಾಗಿತ್ತು. ರಾಷ್ಟ್ರದ ಸುರಕ್ಷತೆ ಮತ್ತು ಏಕತೆ, ಅಖಂಡತೆಯನ್ನು ಕಾಪಾಡುವ ಕೆಲಸ ಮಾಡಿದರು. ಆರ್ಟಿಕಲ್ 370 ರದ್ದು ಮಾಡುವ ಮೂಲಕ ದೇಶದ ಏಕತೆ ಕಾಪಾಡಿದರು. ಪ್ರಧಾನಿಯಾದ ಮೇಲೆ ಮೋದಿಯವರು ಎಲ್ಲ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಜಿ.ಎಸ್.ಟಿ ಜಾರಿಗೆ ತಂದರು. ಇದರಿಂದ ದೇಶ ಹಾಗೂ ರಾಜ್ಯಗಳ ಆರ್ಥಿಕ ಪ್ರಗತಿ ಹೆಚ್ಚಾಯಿತು. ಮೊದಲ ಐದು ರಾಜ್ಯಗಳಿಗೆ 14% ಗ್ಯಾರೆಂಟಿ ಫಂಡ್ ಬರುವಂತೆ ಮಾಡಿದರು ಎಂದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ನೀತಿ ಆಯೋಗ ಜಾರಿಗೆ ತಂದು, ರಾಜ್ಯಗಳಿಗೆ 40 ರಷ್ಟು ನಿಧಿ ವಿನಿಯೋಗ ಮಾಡಿದರು. ಶಿಕ್ಷಣ



ಪದ್ಧತಿಯಲ್ಲಿ ಆಮೂಲಾಗ್ರ ಬದಲಾವಣೆ ತರಲು ಎನ್‌ಇಪಿ ಜಾರಿಗೆ ತಂದಿದ್ದಾರೆ. ಕರ್ನಾಟಕ ಎನ್‌ಇಪಿ ಜಾರಿಗೆ ತಂದಿರುವ ಮೊದಲ ರಾಜ್ಯವಾಗಿದೆ. ಮೂಲ ಸೌಕರ್ಯ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಿದ್ದಾರೆ ಎಂದು ತಿಳಿಸಿದರು.

ಕಳೆದ ಎಪ್ಪತ್ತು ವರ್ಷಗಳಲ್ಲಿ ನಾಲ್ಕೂವರೆ ಸಾವಿರ ಕಿ.ಮೀ. ರಸ್ತೆ ನಿರ್ಮಾಣ ಮಾಡಲಾಗಿತ್ತು. ಕಳೆದ ಒಂಬತ್ತು ವರ್ಷದಲ್ಲಿ 5 ಸಾವಿರ ಕಿ.ಮೀ. ರಸ್ತೆ ನಿರ್ಮಾಣ ಮಾಡಲಾಗಿದೆ. ಬೆಂಗಳೂರು ಸಬ್ ಅರ್ಬನ್ ರೈಲು ಯೋಜನೆಗೆ ವಿಶೇಷ ಅನುದಾನ ನೀಡಿದ್ದಾರೆ. ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರ ಸರ್ಕಾರ 5 ಸಾವಿರ ಕೋಟಿ ನೀಡಿದೆ. ಮೆಟ್ರೋ ಯೋಜನೆಗೆ ಐದು ಸಾವಿರ ಕೋಟಿ ನೀಡಿದೆ. ನಾಲ್ಕು ಮೆಡಿಕಲ್ ಕಾಲೇಜು, ಐಐಟಿ, ಕರಾವಳಿ ಅಭಿವೃದ್ಧಿಗೆ 1250 ಕೋಟಿ ನೀಡಿದ್ದಾರೆ. ಕರಾವಳಿಯಲ್ಲಿ ಸಿಆರ್‌ಝಡ್ ಗೆ ಅನುಮತಿ ನೀಡಿದ್ದಾರೆ. ಕಲಬುರ್ಗಿಯಲ್ಲಿ 1 ಲಕ್ಷ ಉದ್ಯೋಗ ನೀಡುವ ಜವಳಿ ಪಾರ್ಕ್‌ಗೆ ಅನುಮತಿ ನೀಡಿದ್ದಾರೆ ಎಂದು ಹೇಳಿದರು.

ಕೇಂದ್ರ ಸರ್ಕಾರದ ಎಲ್ಲ ಯೋಜನೆಗಳನ್ನು ರಾಜ್ಯ ಸರ್ಕಾರ ರಾಜ್ಯದ ಜನತೆಗೆ ತಲುಪಿಸುವ ಕೆಲಸ ಮಾಡಬೇಕು. ಇದರಲ್ಲಿ ರಾಜಕಾರಣ ಮಾಡಿದರೆ, ರಾಜ್ಯಕ್ಕೆ ನಷ್ಟವಾಗಲಿದೆ. ಕಿಸಾನ್ ಸಮ್ಮಾನ್ ಯೋಜನೆ ಅಡಿಯಲ್ಲಿ ಸುಮಾರು 54 ಲಕ್ಷ ರೈತರಿಗೆ ಸುಮಾರು 16000 ಕೋಟಿ ರೂ. ನೇರವಾಗಿ ರೈತರಿಗೆ ತಲುಪಿದೆ. ಪ್ರಧಾನ ಮಂತ್ರಿ ಆವಾಸ್ ಯೋಜನೆ ಅಡಿಯಲ್ಲಿ ಎಲ್ಲರಿಗೂ ಸೂರು ಕಲ್ಪಿಸುವ ಕೆಲಸ ಮಾಡಲಾಗಿದೆ ಎಂದರು.

ಮುದ್ರಾ ಯೋಜನೆ ಅಡಿಯಲ್ಲಿ 60 ಲಕ್ಷ ಉದ್ಯಮಿಗಳಿಗೆ ಅನುಕೂಲವಾಗಿದೆ. ರೈತರಿಗೆ ಅತ್ಯಂತ ಪ್ರಮುಖವಾಗಿ ಎಮ್‌ಎಸ್‌ಪಿ ನೀಡುವ ಮೂಲಕ ರೈತರ ನೆರವಿಗೆ ನಿಂತಿದ್ದಾರೆ.

ಭಾರತ ಆರ್ಥಿಕವಾಗಿ ಸಾಕಷ್ಟು ಸಮರ್ಥವಾಗಿದ್ದು, ಐದು ಟ್ರಿಲಿಯನ್ ಆರ್ಥಿಕತೆ ಮಾಡುವ ಗುರಿಗೆ ಕರ್ನಾಟಕವೂ ಕೂಡ ಒಂದು ಟ್ರಿಲಿಯನ್ ಆರ್ಥಿಕ ಶಕ್ತಿ ಮುಟ್ಟಲಿದೆ ಎಂದು ತಿಳಿಸಿದರು.

ಪ್ರಧಾನಿಯವರು ತಾವೇ ಆರಂಭಿಸುವ ಯೋಜನೆಗಳನ್ನು ತಾವೇ ಉದ್ಘಾಟನೆ ಮಾಡಿದ್ದಾರೆ. ಈಶಾನ್ಯ ರಾಜ್ಯಗಳ ಯೋಜನೆಗಳು, ಕಾಶ್ಮೀರ ಟನೆಲ್‌ಗಳು, ಹೆಚ್‌ಎಎಲ್ ವಿಮಾನ ನಿರ್ಮಾಣ ಮಾಡುವ ಕೆಲಸ ಮಾಡಿದೆ. ಹೀಗಾಗಿ ಮೋದಿ ನೇತೃತ್ವದ ಸರ್ಕಾರ ಭಾರತವನ್ನು ವಿಶ್ವ ಮಾನ್ಯ ಮಾಡುವ ನಿಟ್ಟಿನಲ್ಲಿ ಅವರ ಆಡಳಿತ ಮುಂದುವರೆಯಬೇಕು ಎಂದರು.

# ಮಣ್ಣಿಗೆ ನ್ಯಾನೋ ಕ್ಲೇ, ಮೊಟ್ಟೆಯ ಕ್ಯಾಲ್ಸಿಯಂ ಗುಳಿಗೆ

(1ನೇ ಪುಟದಿಂದ) ಫಲವತ್ತಾಗುತ್ತದೆ ಎಂದವರು ಹೇಳಿದ್ದಾರೆ. ಡಾ. ಜಿ. ಮಾನವೇಂದ್ರ ಅವರು ಯೋಜನೆಯ ಇನ್ನೊಬ್ಬ ಮಾರ್ಗದರ್ಶಕರಾಗಿದ್ದು, ವಿದ್ಯಾರ್ಥಿಗಳಾದ ವಿಜಯ್ ಕಟ್ಟಿ, ಎಸ್. ಧನುಶ್, ಕೆ.ಜಿ. ಪೃಥ್ವಿ ಹಾಗೂ ಎಂ. ಸುಮೇಧ್ ಅವರು ಯೋಜನೆಯಲ್ಲಿ ಭಾಗಿಯಾಗಿದ್ದಾರೆ.

ಡಾ. ಡಿ.ಜಿ. ಪ್ರವೀಣ್ ಅವರ ಮಾರ್ಗದರ್ಶನದಲ್ಲಿ ಬಿ. ಕಾವ್ಯ, ಕೆ.ಎಂ. ಶೃತಿ, ಶುಭಂ, ಬಿಂದು, ನಯನ, ಪವಿತ್ರ ಹಾಗೂ ಪೂಜಾ ಅವರು ಬ್ಯಾಡಗಿ ಮೆಣಸಿನಕಾಯಿಯಿಂದ ಸೂಪರ್ ಕ್ರಿಟಿಕಲ್ ಫ್ಲುಯಿಡ್ ರೂಪಿಸುವ ವಿಧಾನವನ್ನು ಪ್ರದರ್ಶಿಸಿದ್ದರು. ಈಗಾಗಲೇ ಮೆಣಸಿನ ಸಾರವನ್ನು ಹೊರ ತೆಗೆಯುವ ಹಲವು ವಿಧಗಳಿವೆ. ಗಾಢ ದ್ರವದ ರೂಪದಲ್ಲಿ ಸಾರವನ್ನು ತೆಗೆಯುವುದು ಕಡಿಮೆ ವೆಚ್ಚದ್ದು ಹಾಗೂ ಹೆಚ್ಚು ಉಪಯುಕ್ತ ಎಂದವರು ಪ್ರತಿಪಾದಿಸಿದ್ದಾರೆ.

ಕೆ.ಜೆ. ಶಶಿಕಲಾ ಅವರ ನೇತೃತ್ವದಲ್ಲಿ ಇಂಜಿನಿಯರಿಂಗ್ ವಿದ್ಯಾರ್ಥಿಗಳು ಮೊಟ್ಟೆ ಚಿಪ್ಪಿನಿಂದ ಕ್ಯಾಲ್ಸಿಯಂ ಗುಳಿಗೆಗಳನ್ನು ಕಡಿಮೆ ವೆಚ್ಚದಲ್ಲಿ ರೂಪಿಸಬಹುದು ಎಂಬ ಪ್ರಾತ್ಯಕ್ಷಿಕೆ ರೂಪಿಸಿದ್ದಾರೆ. ಇದರಿಂದ ಮೊಟ್ಟೆ ತ್ಯಾಜ್ಯದ ನಿವಾರಣೆಯಾಗುವ ಜೊತೆಗೆ ಪೌಷ್ಠಿಕಾಂಶದ ಮರು ಬಳಕೆಯಾಗುತ್ತದೆ. ಇದು ಕಡಿಮೆ ವೆಚ್ಚದ್ದು ಎಂದವರು ಹೇಳಿದ್ದಾರೆ.

ಪ್ರಸಕ್ತ ಮೊಟ್ಟೆಯ ಚಿಪ್ಪಿನಿಂದ ಕ್ಯಾಲ್ಸಿಯಂ ಗುಳಿಗೆ ಮಾಡುವ ಪದ್ಧತಿ ಪ್ರಚಲಿತವಾಗಿಲ್ಲ. ಅತಿ ಕಡಿಮೆ ದರದಲ್ಲಿ ಮೊಟ್ಟೆ ಚಿಪ್ಪಿನಿಂದ ಕ್ಯಾಲ್ಸಿಯಂ ಗುಳಿಗೆ ತಯಾರಿಸಬಹುದು ಎಂದು ವಿದ್ಯಾರ್ಥಿಗಳಾದ ಬಿ.ಕೆ. ಪ್ರಜ್ವಲ್, ಪ್ರಜ್ವಲ್ ಪಾಟೀಲ್, ಅಮೃತ ವರ್ಷಿಣಿ, ಕೀರ್ತನ ತಿಳಿಸಿದ್ದಾರೆ.

ಡಾ. ಕೆ. ಗಣೇಶ್ ಅವರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳಾದ ನವೀನ್ ಕಲಾಲ್, ನವೀನ್ ರಾವಲ್, ಮಂಜುನಾಥ್ ಹಾಗೂ ಹಂಸವೇಣಿ ಅವರು ಹೊಲಗಳ ಮಾಹಿತಿ ಪಡೆಯುವ ಯಂತ್ರವನ್ನು ರೂಪಿಸಿದ್ದಾರೆ. ಮೊಬೈಲ್ ಇಲ್ಲವೇ ಇಂಟರ್‌ನೆಟ್ ಇಲ್ಲದೆಯೇ ಲೋರಾ ಎಂಬ ತಂತ್ರಜ್ಞಾನ ಆಧರಿತ ಸಂವಹನ ಯಂತ್ರ ರೂಪಿಸಿರುವುದಾಗಿ ಇವರು ತಿಳಿಸಿದ್ದಾರೆ.

ಐದು ಕಿಲೋಮೀಟರ್ ದೂರದಲ್ಲಿದ್ದರೂ ರೈತರಿಗೆ ಬೆಳೆಗಳ ಸ್ಥಿತಿಗತಿ, ತೇವಾಂಶ, ಉಷ್ಣಾಂಶ, ನೀರಿನ ಅಗತ್ಯ ಮುಂತಾದ ಮಾಹಿತಿ ಸಿಗುತ್ತದೆ. 4 ಸಾವಿರ ರೂ. ವೆಚ್ಚದಲ್ಲಿ ಮಾದರಿ ಉಪಕರಣ ರೂಪಿಸಿರುವುದಾಗಿ ಅವರು ಹೇಳಿದ್ದಾರೆ.

ಕಿತ್ತಳೆ ಸಿಪ್ಪೆಯಿಂದ ಪೆಕ್ಟಿನ್ ಉತ್ಪಾದನೆ, ಹಣ್ಣು ಮಾಗಿರುವುದನ್ನು ಪತ್ತೆ ಮಾಡುವ ಉಪಕರಣ, ಆರೋಗ್ಯ ಸೇವೆಗಳ ದಾಖಲೆಗಳ ನಿರ್ವಹಣೆಗೆ ಬ್ಲಾಕ್‌ಚೈನ್ ಬಳಕೆ, ಜಾನುವಾರುಗಳ ಪತ್ತೆ ಉಪಕರಣ... ಹೀಗೆ ಹತ್ತು ಹಲವು ವಲಯಗಳಿಗೆ ನೆರವಾಗುವ ಪ್ರಾತ್ಯಕ್ಷಿಕೆಗಳನ್ನು ಇಂಜಿನಿಯರಿಂಗ್ ವಿದ್ಯಾರ್ಥಿಗಳು ರೂಪಿಸಿದ್ದರು.

### ಪ್ರಾತ್ಯಕ್ಷಿಕೆಗಳು ಉತ್ಪನ್ನಗಳಾಗಲಿ...

ವಿದ್ಯಾರ್ಥಿಗಳು ಉತ್ತಮ ಪ್ರಾತ್ಯಕ್ಷಿಕೆಗಳನ್ನು ರೂಪಿಸಿದ್ದಾರೆ. ಇವುಗಳು ಉತ್ಪನ್ನಗಳಾಗಿ ಮಾರುಕಟ್ಟೆಗೆ ಬರಬೇಕಿದೆ ಎಂದು ಉದ್ಯಮಿ ಹಾಗೂ ದಿ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಫೌಂಡ್ರಿಮೆನ್ ಉಪಾಧ್ಯಕ್ಷ ಡಿ.ಎಸ್. ಚಂದ್ರಶೇಖರ್ ತಿಳಿಸಿದರು.

ನಿರ್ಮಾಣ - 3.0 ಉದ್ಘಾಟಿಸಿ ಮಾತನಾಡಿದ ಅವರು, ಬದಲಾದ ಕಾಲಮಾನಕ್ಕೆ ಅನುಗುಣವಾಗಿ ವಿದ್ಯಾರ್ಥಿಗಳು ಪ್ರಾತ್ಯಕ್ಷಿಕೆ ರೂಪಿಸಿದ್ದಾರೆ. ರೈತರಿಗೆ ಅನುಕೂಲವಾಗುವ ಡಿಜಿಟಲ್ ಪರಿಹಾರಗಳನ್ನು ರೂಪಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಬಿಐಇಟಿ ಪ್ರಾಂಶುಪಾಲ ಡಾ. ಹೆಚ್.ಬಿ. ಅರವಿಂದ್, ಸಂಶೋಧನೆಗಳಿಗಾಗಿ ಹಲವು ಇಂಜಿನಿಯರಿಂಗ್ ವಿಭಾಗಗಳ ಸಹಭಾಗಿತ್ವ ಅಗತ್ಯವಾಗಿದೆ. ಹೀಗಾಗಿ ಜಂಟಿ ಸಹಭಾಗಿತ್ವಕ್ಕೆ ಒತ್ತು ನೀಡಲಾಗುತ್ತಿದೆ ಎಂದರು.

ಕಾರ್ಯಕ್ರಮದ ಸಂಚಾಲಕ ಎ.ಜಿ. ಶಂಕರ ಮೂರ್ತಿ ಮಾತನಾಡಿ, ಅನ್ವೇಷಣೆಗಳಿಗೆ ಉತ್ತೇಜನ ನೀಡಲು ಮೂರನೇ ವರ್ಷ ಪ್ರಾತ್ಯಕ್ಷಿಕೆಗಳನ್ನು ಪ್ರದರ್ಶಿಸಲಾಗುತ್ತಿದೆ. ಉತ್ತಮ ಪ್ರಾತ್ಯಕ್ಷಿಕೆಗಳಿಗೆ ಪೇಟೆಂಟ್ ಪಡೆಯುವ ಪ್ರಯತ್ನ ನಡೆಸಲಾಗುವುದು ಎಂದರು.

# ಹರಿಹರ : ಅಂಜುಮನ್ ಸಂಸ್ಥೆಯ ಸದಸ್ಯತ್ವಕ್ಕೆ ಅರ್ಜಿ

ಹರಿಹರ, ಮೇ 29 - ಹರಿಹರದ ಅಂಜುಮನ್ ಎ ಇಸ್ಲಾಮ್ ಸಂಸ್ಥೆಯ ಸಾಮಾನ್ಯ ಸಮಿತಿ ಸದಸ್ಯತ್ವಕ್ಕೆ ಅರ್ಜಿ ವಿತರಣೆ ಹಾಗೂ ಸ್ವೀಕಾರ ಪ್ರಕ್ರಿಯೆ ಮೇ 29ರಿಂದ ಆರಂಭಿಸಲಾಗಿದೆ ಎಂದು ಜಿಲ್ಲಾ ವಕ್ಫ್ ಅಧಿಕಾರಿ ಹಾಗೂ ಸಂಸ್ಥೆಯ ಹಂಗಾಮಿ ಸಮಿತಿಯ ಆಡಳಿತಾಧಿಕಾರಿ ಸೈಯದ್ ಮುಅಜಮ್ ಪಾಶಾ ಹೇಳಿದರು.



ನಗರದ ಅಂಜುಮನ್ ಸಂಸ್ಥೆ ಕಚೇರಿಯಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅರ್ಜಿ ವಿತರಣೆ ಮೇ 29ರಿಂದ ಜೂ.26ರವರೆಗೆ ಹಾಗೂ ಅರ್ಜಿ ಸ್ವೀಕಾರ ಮೇ 29ರಿಂದ ಜೂ.27ರೊಳಗೆ ನಡೆಯಲಿದೆ ಎಂದರು.

ಸದಸ್ಯರ ಕರಡು ಪ್ರತಿಯನ್ನು ಜು.15 ರಂದು ಪ್ರಕಟಿಸಲಾಗುವುದು. ಜು.17ರಿಂದ ಜು.21 ರವರೆಗೆ ಕರಡು ಪ್ರತಿಯ ಕುರಿತು ಲಿಖಿತ ತರಕಾರು, ಸಲಹೆ ನೀಡಬಹುದು. ಜು.24ರ ಬೆಳಿಗ್ಗೆ 11ಕ್ಕೆ ಕರಡು ಪ್ರತಿಯ ಕುರಿತು ಅಲಿಖಿತ ತಕರಾರು ಹೇಳಿಕೊಳ್ಳಬಹುದು. ಜು.31 ರಂದು ಸಾಮಾನ್ಯ ಸಮಿತಿ ಸದಸ್ಯರ ಅಂತಿಮ ಪಟ್ಟಿ ಪ್ರಕಟಿಸಲಾಗುವುದು ಎಂದರು.

ಈ ಹಿಂದಿನ ಸಾಮಾನ್ಯ ಸಮಿತಿಯಲ್ಲಿ 7 ಸಾವಿರ ಸದಸ್ಯರಿದ್ದರು. ಈ ಸದಸ್ಯರಿಂದ ಆಯ್ಕೆಗೊಂಡ ಆಡಳಿತ ಮಂಡಳಿ ಸಮಿತಿ 3 ವರ್ಷ ಅವಧಿ ಪೂರ್ಣಗೊಳಿಸಿದ ಹಿನ್ನೆಲೆಯಲ್ಲಿ, ಹೊಸ ಸದಸ್ಯತ್ವಕ್ಕೆ ಆಹ್ವಾನ ಮಾಡಲಾಗಿದೆ. ನಂತರದಲ್ಲಿ ಹೊಸ ಆಡಳಿತ ಮಂಡಳಿಗೆ ಚುನಾವಣೆ ನಡೆಸಲಾಗುತ್ತದೆ ಎಂದರು.

ಹಿಂದಿನ ಆಡಳಿತ ಮಂಡಳಿಯ ಸಮಿತಿಯ ಅವಧಿಯಲ್ಲಿನ ಲೆಕ್ಕ-ಪತ್ರ ಸಲ್ಲಿಕೆಯಲ್ಲಿ ಆಗಿರುವ ಲೋಪ-ದೋಷಗಳ ಬಗ್ಗೆ ಆಡಿಟ್ ತಕರಾರು ವ್ಯಕ್ತವಾಗಿದ್ದು, ಸಂಬಂಧಿತರ ವಿರುದ್ಧ ನೋಟಿಸ್ ಜಾರಿ ಮಾಡಲಾಗಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಸ್ಥೆಯ ಹಂಗಾಮಿ ಸಮಿತಿಯ ಸದಸ್ಯರಾದ ಸೈಯದ್ ಮುನೀರ್ ಅಹ್ಮದ್ ಸಾಬ್, ಆಸಿಫ್ ಜುನ್ನೆದಿ, ಸೈಯದ್ ಇಮ್ತಿಯಾಜ್ ಕರೆಕಟ್ಟೆ, ರಸೂಲ್ ಖುರೇಶಿ, ಜಿಲ್ಲಾ ವಕ್ಫ್ ನಿರೀಕ್ಷಕ ಜಾಕಿರ್ ಹುಸೇನ್ ಇದ್ದರು.

# ರೋಲ್ಸ್ ರಾಯ್ಸ್ ವಿರುದ್ಧ ಪ್ರಕರಣ

(1ನೇ ಪುಟದಿಂದ) ಮಧ್ಯವರ್ತಿಗಳು ಭಾಗಿಯಾದ ಹಾಗೂ ಕಮೀಷನ್ ಪಾವತಿಯಾದ ಬಗ್ಗೆ 2017ರಲ್ಲಿ ಬ್ರಿಟನ್ ನ್ಯಾಯಾಲಯ ಹೊರಡಿಸಿದ ಆದೇಶದಲ್ಲಿ ಉಲ್ಲೇಖಿಸಲಾಗಿತ್ತು.

2003-12ರ ಅವಧಿಯಲ್ಲಿ ಆರೋಪಿಗಳು ಅನಾಮಿಕ ಸಾರ್ವಜನಿಕ ನೌಕರರ ಜೊತೆ ಸೇರಿ ಸಂಚು ನಡೆಸಿದ್ದರು. ಅಧಿಕಾರಿಗಳು ಲಂಚ ಪಡೆದು ತಮ್ಮ ಸ್ಥಾನ ದುರುಪಯೋಗ ಪಡಿಸಿಕೊಂಡು ರೋಲ್ಸ್ ರಾಯ್ಸ್ ವಿಮಾನದ ಖರೀದಿಗೆ ಒಪ್ಪಿಗೆ ಕೊಡಿಸಿದ್ದರು ಎಂದು ಆರೋಪಿಸಲಾಗಿದೆ.

ಮಧ್ಯವರ್ತಿಗಳಿಗೆ ಯಾವುದೇ ಹಣ ನೀಡಬಾರದು ಎಂದು ರೋಲ್ಸ್ ರಾಯ್ಸ್ ಜೊತೆ ಮಾಡಿಕೊಂಡ ಒಪ್ಪಂದದಲ್ಲಿ ಉಲ್ಲೇಖಿಸಲಾಗಿತ್ತು. ಆದರೂ, ಇದನ್ನು ಮೀರಿ ಹಣ ಪಾವತಿಸಲಾಗಿದೆ ಎಂದು ಸಿ.ಬಿ.ಐ. ಆರೋಪಿಸಿದೆ.

ಸೆಪ್ಟೆಂಬರ್ 3, 2003ರಲ್ಲಿ 66 ತರಬೇತಿ ವಿಮಾನಗಳ ಖರೀದಿಗೆ ಕೇಂದ್ರ ಸಂಪುಟದ ರಕ್ಷಣಾ ಸಮಿತಿ ಒಪ್ಪಿಗೆ ನೀಡಿತ್ತು. 24 ವಿಮಾನಗಳನ್ನು ಸಿದ್ಧ ಸ್ವರೂಪದಲ್ಲಿ ಆಮದು ಮಾಡಿಕೊಳ್ಳಲು ಹಾಗೂ 42 ವಿಮಾನಗಳನ್ನು ಸರ್ಕಾರಿ ಸ್ವಾಮ್ಯದ ಹೆಚ್.ಎ.ಎಲ್. ನಲ್ಲಿ ಉತ್ಪಾದಿಸಲು ನಿರ್ಧರಿಸಲಾಗಿತ್ತು. ಇದರ ಒಟ್ಟು ಮೊತ್ತ 5,653.44 ಕೋಟಿ ರೂ. ಎಂದು ಅಂದಾಜಿಸಲಾಗಿತ್ತು.

2008ರ ಆಗಸ್ಟ್‌ನಿಂದ ಮೇ 2012ರ ನಡುವೆ ಹೆಚ್.ಎ.ಎಲ್. 42 ವಿಮಾನಗಳನ್ನು ವಾಯುಪಡೆಗೆ ಪೂರೈಸಿತ್ತು.

2012ರಲ್ಲಿ ರೋಲ್ಸ್ ರಾಯ್ಸ್ ಕಾರ್ಯಾಚರಣೆಯಲ್ಲಿ ಭ್ರಷ್ಟಾಚಾರ ನಡೆದಿರುವ ಆರೋಪಗಳು ಮಾಧ್ಯಮಗಳಲ್ಲಿ ಕೇಳಿ ಬಂದಿದ್ದವು. ಈ ಬಗ್ಗೆ ಬ್ರಿಟನ್‌ನಲ್ಲಿ ತನಿಖೆ ಆರಂಭಿಸಲಾಗಿತ್ತು.

ನಂತರ ಕಂಪನಿ ಹೇಳಿಕೆಯೊಂದನ್ನು ಬಿಡುಗಡೆ ಮಾಡಿ ಇಂಡೋನೇಷಿಯ, ಮಲೇಷಿಯ ಹಾಗೂ ಭಾರತದಲ್ಲಿ ಭ್ರಷ್ಟಾಚಾರದಿಂದ ಹಣ ಪಾವತಿಸಿದ ಬಗ್ಗೆ ತಿಳಿಸಿತ್ತು. ಈ ಬಗ್ಗೆ ಕಂಪನಿ ಹಾಗೂ ಬ್ರಿಟನ್‌ನ ಗಂಭೀರ ಅಪರಾಧಗಳ ತನಿಖಾ ಕಚೇರಿ ನಡುವೆ ವಿಚಾರಣೆ ಮುಂದೂಡಿಕೆಯ ಒಪ್ಪಂದ ಮಾಡಿಕೊಳ್ಳಲಾಗಿತ್ತು.

ಮಧ್ಯವರ್ತಿಗಳಿಗೆ ಹಣ ನೀಡಿದ ಬಗ್ಗೆ ಹಾಗೂ ತೆರಿಗೆ ವ್ಯವಹಾರಗಳ ಬಗ್ಗೆ ಭಾರತದ ಅಧಿಕಾರಿಗಳು ತನಿಖೆ ನಡೆಸುವುದನ್ನು ತಡೆಯಲು ರೋಲ್ಸ್ ರಾಯ್ಸ್ ಲಂಚ ನೀಡಿತ್ತು ಎಂದು ಸಿ.ಬಿ.ಐ. ಆರೋಪ ಪಟ್ಟಿಯಲ್ಲಿ ತಿಳಿಸಲಾಗಿದೆ.

## ನೂತನ ಶಿಕ್ಷಣ ನೀತಿ ಬಗ್ಗೆ ತೀರ್ಮಾನ

(1ನೇ ಪುಟದಿಂದ) ಮತ್ತು ಸಾಹಿತಿಗಳಿಗೆ ಬೆದರಿಕೆ ಹಾಕುವವರ ವಿರುದ್ಧ ಕಠಿಣ ಕಾನೂನು ಕ್ರಮಕ್ಕೆ ಈಗಾಗಲೇ ರಾಜ್ಯ ಪೊಲೀಸ್ ಮಹಾ ನಿರ್ದೇಶಕರಿಗೆ ಖಡಕ್ ಸೂಚನೆ ನೀಡಿದ್ದೇನೆ ಎಂದೂ ಅವರು ಹೇಳಿದ್ದಾರೆ.

ಸಾಹಿತಿ ಬರಹಗಾರರು ನೀಡಿರುವ ಮನವಿ ಪತ್ರದಲ್ಲಿನ ಸಂಗತಿಗಳನ್ನು ಗಂಭೀರವಾಗಿ ಪರಿಗಣಿಸಿದ್ದೇನೆ. ಅಗತ್ಯಕ್ಕೆ ತಕ್ಕಂತೆ ನಮ್ಮ ಸರ್ಕಾರ ಕ್ರಮ ಕೈಗೊಳ್ಳಲಿದೆ. ಕಾನೂನು ಕೈಗೆತ್ತಿಕೊಂಡು ಕೋಮು ಪುಂಡಾಟ ನಡೆಸುವವರಿಗೆ ತಕ್ಕ ಕಾನೂನು ಶಾಸ್ತಿ ಆಗುತ್ತದೆ. ಪೊಲೀಸರ ನೈತಿಕ ಬಲ ಕುಗ್ಗಿಸುವ ಅನೈತಿಕ ಪೊಲೀಸ್‌ಗಿರಿಗೆ ಅವಕಾಶ ಇಲ್ಲ. ಇದನ್ನು ಯಾವುದೇ ಕಾರಣಕ್ಕೂ ಸಹಿಸಲ್ಲ ಎಂದು ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ.

## ಜೂ.1ರಿಂದಲೇ ಗ್ಯಾರಂಟಿಗಳ ಅನುಷ್ಠಾನ

(1ನೇ ಪುಟದಿಂದ) ಮತ್ತೆ 15 ಸಾವಿರ ಕೋಟಿ ರೂ. ಹೆಚ್ಚಿಸಲು ಕ್ರಮ ತೆಗೆದುಕೊಳ್ಳುವುದಾಗಿಯೂ ಅವರು ಹೇಳಿದ್ದಾರೆ. ಬಡ ಮತ್ತು ಮಧ್ಯಮ ವರ್ಗದ ಜನತೆಗೆ ನಮ್ಮ ಯೋಜನೆಗಳು ಅವರ ಮನೆ ಬಾಗಿಲಿಗೆ ಮುಟ್ಟಬೇಕು ಎಂದಿದ್ದಾರೆ. ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು 17 ದಿನ ಕಳೆದರೂ ಗ್ಯಾರಂಟಿಗಳನ್ನು ಅನುಷ್ಠಾನ ಮಾಡುತ್ತಿಲ್ಲ ಎಂದು ಬಿಜೆಪಿ ಮತ್ತು ಜೆಡಿಎಸ್‌ಗಳು ತೀವ್ರ ಟೀಕೆ ಮತ್ತು ಪ್ರಹಾರ ಮಾಡುತ್ತಿವೆ.

ಗ್ಯಾರಂಟಿಗಳನ್ನು ತಕ್ಷಣವೇ ಅನುಷ್ಠಾನಗೊಳಿಸಿ ಲೋಕ ಸಭಾ ಚುನಾವಣೆಯಲ್ಲಿ 20 ಸ್ಥಾನ ಗಳಿಸಲು ಪಣ ತೊಟ್ಟಿರುವ ಕಾಂಗ್ರೆಸ್, ಇವುಗಳನ್ನು ಚಾಚೂ ತಪ್ಪದೇ ಅನುಷ್ಠಾನಗೊಳಿಸಿ ಮತ ಬೇಟೆಗೆ ಸಿದ್ಧವಾಗುತ್ತಿದೆ ಎಂದು ಮೂಲಗಳು ಹೇಳಿವೆ.

# ಕಾಳಾಪುರ ಗ್ರಾಮದ ಮಕ್ಕಳಿಗೆ ಉಚಿತ ಶಿಕ್ಷಣ

(1ನೇ ಪುಟದಿಂದ) ಹೆಸರನ್ನು ಕೊಟ್ಟೂರಿನ ಹುಣಸೇಕಟ್ಟೆ ಕ್ರಾಸ್‌ನಲ್ಲಿರುವ ತರಳಬಾಳು ಶಾಲೆ ಮುಖ್ಯೋಪಾಧ್ಯಾಯರನ್ನು ಖುದ್ದಾಗಿ ಕಂಡು, ದಿನಾಂಕ 15-6-2023ರ ಒಳಗಾಗಿ ಅರ್ಜಿ ಸಲ್ಲಿಸುವಂತೆ ಸಂಸ್ಥೆಯ ಆಡಳಿತಾಧಿಕಾರಿಗಳು ತಿಳಿಸಿದ್ದಾರೆ.


**ವಾಸದ ಮನೆ ಭೋಗ್ಯಕ್ಕೆ ಇದೆ**
ದಾವಣಗೆರೆ ಸಿಟಿ ಎಸ್.ಎಸ್ ಬಡಾವಣೆ 'ಎ' ಬ್ಲಾಕ್ ನೇತಾಜಿ ಸುಭಾಷ್‌ಚಂದ್ರ ಬೋಸ್ ಇಂಡೋರ್ ಸ್ಟೇಡಿಯಂ ಹತ್ತಿರ, ಎಸ್. ಸ್ಕ್ವೆಯರ್ ಡ್ಯೂ ಫ್ಲವರ್ ಅಪಾರ್ಟ್‌ಮೆಂಟ್‌ನಲ್ಲಿ ವಾಸ್ತು ಪ್ರಕಾರ ಅಳವಡಿಸಿರುವ ಲಿಫ್ಟ್, ನೀರು, ಹಾಗೂ ಎಲ್ಲಾ ಸೌಕರ್ಯವಿರುವ ವಾಸದ ಮನೆ ಭೋಗ್ಯಕ್ಕಿದೆ. ಬಿ.ಎಸ್. ಸಂತೋಷ್
96322 67555

**ಸೈಟ್ ಮಾರಾಟಕ್ಕೆ**
S. S. ಹಾಸ್ಪಿಟಲ್ ಹಿಂದೆ 30X38 (ಕಾರ್ನರ್) ಉತ್ತರ-ಪಶ್ಚಿಮ 30X40 ಉತ್ತರ
ಕಿರಣ್ ಭೂಸನೂರ್(ಏಜೆಂಟ್)
98440 63409, 97315 63409

**ಮನೆಯಲ್ಲಿ ನೀರಿನ ಲೀಕೇಜ್**
ಯಾವುದೇ ರೀತಿಯ ಮನೆಯ ಒಳಗಡೆ ಮತ್ತು ಹೊರಗಡೆಯಿಂದ ಮನೆಯ ಒಳಗಡೆ ನೀರು ಸೋರುತ್ತಿದ್ದರೆ (ಲೀಕೇಜ್) ಶಾಶ್ವತವಾಗಿ ನಿಲ್ಲಿಸಲಾಗುವುದು ಮತ್ತು 100% ಕೆಲಸದ ಗ್ಯಾರಂಟಿ ಇರುತ್ತದೆ.
96065 57066, 95913 10082

**ಕಲೆಕ್ಷನ್ ಬಾಯ್ ಬೇಕಾಗಿದ್ದಾರೆ**
ಕಲೆಕ್ಷನ್ ಬಾಯ್ ಆಗಿ ಕೆಲಸ ಮಾಡಲು ಪಿಯುಸಿ ಪಾಸಾಗಿರುವವರು ಬೇಕಾಗಿದ್ದಾರೆ. ಬಯೋಡೇಟಾದೊಂದಿಗೆ
ಸಂಪರ್ಕಿಸಿ : ನವೋದಯ ಚಿಟ್ ಫಂಡ್ಸ್, # 34, ಮುರುಘರಾಜೇಂದ್ರ ಕಾಂಪ್ಲೆಕ್ಸ್, ಶಿವಪ್ಪಯ್ಯ ಸರ್ಕಲ್ ಬಳಿ, ನಿಟುವಳ್ಳಿ ರಸ್ತೆ, ದಾವಣಗೆರೆ.

**ಹಾಲ್ ಬಾಡಿಗೆಗೆ ಇದೆ**
ಮಾಮಾಸ್ ಜಾಯಿಂಟ್ ರಸ್ತೆಯಲ್ಲಿರುವ ಶಿಲ್ಪ ಡಯಾಗ್ನಸ್ಟಿಕ್ಸ್ ಪಕ್ಕದಲ್ಲಿರುವ ಶ್ವೇತ ಬಿಲ್ಡಿಂಗ್‌ನ ಮೊದಲನೇ ಮಹಡಿಯಲ್ಲಿ ಹಾಲ್ ಬಾಡಿಗೆಗೆ ಇದೆ.
98440 65638

**ಬೇಕಾಗಿದ್ದಾರೆ**
ಆನಗೋಡು ಸಮೀಪ NH-48 ನಲ್ಲಿ ಇರುವ BPCL ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಉತ್ಸಾಹಿ ಯುವಕರು ಬೇಕಾಗಿದ್ದಾರೆ. ಸಂಪರ್ಕಿಸಿ :
99001 42052, 90082 28222

**ಮನೆಗಳು ಬಾಡಿಗೆಗೆ ಇವೆ**
ಸಿಂಗಲ್ ಬೆಡ್ ರೂಂ ಡಬಲ್ ಬೆಡ್ ರೂಂ ಮನೆಗಳು ಆಫೀಸ್‌ಗೆ ಯೋಗ್ಯವಿರುವ ಮೂರು ಬೆಡ್ ರೂಂ ಮನೆ ಮೊದಲನೇ ಬಸ್ ಸ್ಟ್ಯಾಂಡ್ ಹತ್ತಿರ ಇಂಡಿಪೆಂಡೆಂಟ್ ಹೌಸ್, ವಿದ್ಯಾನಗರ ಆಂಜನೇಯ ಬಡಾವಣೆ, ಶಿವಕುಮಾರ ಸ್ವಾಮಿ ಬಡಾವಣೆ, ವಿನಾಯಕ ಬಡಾವಣೆಯಲ್ಲಿ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ವೆಂಡರ್ ಮತ್ತು ಸಪ್ಲೈಯರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ :
98442 99666, 98441 99966

**ಮನೆಗಳು ಮಾರಾಟಕ್ಕಿವೆ**
30x50 East ವಿವೇಕಾನಂದ ಬಡಾವಣೆಯಲ್ಲಿ, 30x40 East LIC ಕಾಲೋನಿಯಲ್ಲಿ, 30x45 West ಶಿವಗಂಗೆ ಕಲ್ಯಾಣ ಮಂಟಪದ ಹತ್ತಿರ.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಬೇಕಾಗಿದ್ದಾರೆ**
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು/ಹುಡುಗಿಯರು ಬೇಕಾಗಿದ್ದಾರೆ. PUC or Any Degree.
ವಿಳಾಸ : ಕಾವೇರಿ ಮೆಡಿಹೌಸ್ ಪ್ರೈ.ಲಿ., ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ - 577002.

**ಸೈಟುಗಳು ದೊರೆಯುತ್ತವೆ**
ಡಾಲರ್ಸ್ ಕಾಲೋನಿ ಬನಶಂಕರಿ ಬಡಾವಣೆ, ಶಕ್ತಿನಗರ, ಡಿಸಿಎಂ, ಜಯನಗರ ಹಾಗೂ ಇತರೆ ಬಡಾವಣೆಗಳಲ್ಲಿ 30x40, 30x50 ಸೈಟುಗಳು & ಕಮರ್ಷಿಯಲ್ ಸೈಟುಗಳು, ಜಮೀನುಗಳು ಉತ್ತಮ ದರದಲ್ಲಿ ದೊರೆಯುತ್ತವೆ.
97315 12365

**WANTED For Nayana Eye Hospital**
Staff Nurse / Counselor
Staff nurse & Office Staff
(Freshers & Girls Only)
Qualification : GNM, B.Sc, B.Com, BBM or BCA with Computer Knoweldge & tally.
Contact No. 97423 77557

**ಕಮರ್ಷಿಯಲ್ ಸೈಟ್ ಮಾರಾಟಕ್ಕಿದೆ**
ಶಾಮನೂರು ಗ್ರಾಮದ ಡೋರ್ ನಂ. 169/8ರಲ್ಲಿ 761 ಚದರ ಮೀಟರ್ ಅಳತೆ ಇರುವ ಕಮರ್ಷಿಯಲ್ ಖಾಲಿ ನಿವೇಶನ ಮಾರಾಟಕ್ಕಿದೆ. ಸಂಪರ್ಕಿಸಿ.
76250 61005, 92417 84884

**ಮನೆ ಮಾರಾಟಕ್ಕಿದೆ**
ಕೆ.ಬಿ ಬಡಾವಣೆ, ಕೆನರಾ ಬ್ಯಾಂಕ್ ರಸ್ತೆ ದಕ್ಷಿಣ ಮುಖ 15x45 ಅಳತೆಯ ಗ್ರೌಂಡ್, ಮೊದಲನೇ ಹಾಗೂ ಎರಡನೇ ಮಹಡಿಯ ಮನೆ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ.
98440 25005

**ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
ಮೊ. 95357-35888

**ತಕ್ಷಣ ಬೇಕಾಗಿದ್ದಾರೆ**
T.V.S. TOYOTA, ಬ್ರಿಟಾನಿಯಾ, ಟಾಟಾ ಮೋಟಾರ್ಸ್, ಬಿಗ್ ಬಜಾರ್ಸ್, ಕಂಪನಿಗಳಿಗೆ, ಆಫೀಸ್‌ಗಳಿಗೆ, 7th, 10th, PUC, Degree, ITI, Diploma, ಯುವಕ-ಯುವತಿಯರು ನೇರ ನೇಮಕಾತಿ, 18000/- ದಿಂದ 60000/- ವಸತಿ, ಊಟವಿದೆ.
72595 52930

**ದೋಸೆ ಬ್ಯಾಟರ್**
ಆತ್ಮಕೃಷ್ಣ ರೆಸ್ಟೋರೆಂಟ್ ಅವರ ಅತ್ಯುತ್ತಮವಾದ ಮಸಾಲಾ ದೋಸೆ ಹಿಟ್ಟು, ರುಚಿಕರವಾದ ಚಟ್ನಿ, ಪಲ್ಯ ದೊರೆಯುತ್ತದೆ.
ಪಿ.ಜೆ. ಬಡಾವಣೆ, ದಾವಣಗೆರೆ.
70903 58242

**ಬೇಕಾಗಿದ್ದಾರೆ**
ಗುಪ್ತ ಗೋಲ್ಡ್ ಪ್ಯಾಲೇಸ್‌ನಲ್ಲಿ ಸೇಲ್ಸ್ ವಿಭಾಗಕ್ಕೆ ಯುವತಿಯರು 18 ರಿಂದ 25 ವರ್ಷವಿರಬೇಕು. ದಾವಣಗೆರೆಯಲ್ಲಿ ವಾಸವಾಗಿದ್ದವರು, ಕಾಮರ್ಸ್ & ಬಿಕಾಂ., II ಪಿಯುಸಿ ಆಗಿರಬೇಕು, ಸಂಪರ್ಕಿಸುವ ಸಮಯ : ಬೆಳಿಗ್ಗೆ 12 ರಿಂದ ಸಾಯಂಕಾಲ 7.00
08192 230774, 232674

**WANTED PHARMASIST**
CONTACT :
SHILPA DIAGNOSTICS PVT LTD., MCC B BLOCK, NEAR SWIMMING POOL, DAVANGERE.
98440 65638

**ಮನೆ ಬಾಡಿಗೆಗೆ ಇದೆ**
ತರಳಬಾಳು 11ನೇ ಕ್ರಾಸ್‌ನಲ್ಲಿ #2000/48 (ಹಾಲ್/ಕಿಚನ್) ಮನೆ ಬಾಡಿಗೆಗಿದೆ.
974215 4244, 98864 47046

**WANTED DRIVERS**
6 wheel Eicher vehicle.
Full time
99029 58743

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಎಂ.ಸಿ.ಸಿ. 'ಎ' ಬ್ಲಾಕ್, 11ನೇ ಮುಖ್ಯ ರಸ್ತೆಯಲ್ಲಿ ಇರುವ 3 BHK ನೆಲ ಮಹಡಿ ಮನೆ ಎಲ್ಲಾ ಸೌಕರ್ಯ ಹೊಂದಿದ್ದು, ಬಾಡಿಗೆಗೆ ದೊರೆಯುತ್ತದೆ.
ಸಸ್ಯಾಹಾರಿಗಳಿಗೆ ಮಾತ್ರ.
+919964696621
ಬ್ರೋಕರ್‌ಗಳಿಗೆ ಅವಕಾಶವಿಲ್ಲ

**WANTED**
PROs For Chiranjeevi Academy, Ananthpur.
Any Degree. Attractive income. should know both Kannada and English. Contact.
94900 00406, 63014 53621

**WANTED**
Worker at OM DENTAL CARE Ram & Co Circle, Davangere.
With Attractive Pay
Kindly Contact :
Timing : 5.00 Pm to 9.00 pm
90669 93738

**WANTED LADY TEACHERS**
B.Sc B.Ed-2, BA, B.Ed-2, Hindi-B.Ed-1, Aaya-1, Van Driver-1. Contact : immediately to secretary.
Vinayaka convent
Ganeshpet, behind kalikadevi temple Dvg.
95356 10817, 88920 07561

**WANTED TEACHERS**
BA, B.Ed (Social Science)
B.Sc - 2, PUC D.Ed -2
Computer Teacher
ACM School
Devarj Urs Layout, 'C' Block, 2nd Cross, Davanagere.
89703 21855

**HOUSE FOR RENT (2 BHK)**
# 3887, Old RTO Office, MCC `B' Block, Near Ayyappa swamy temple, Davanagere.
96111 04206

**WANTED FOR LODGE**
Manager-Graduates with Experienced Prefered
Salary-Rs. 10,000 to upto 15,000 pm
98440 65235


**ಮಳಿಗೆಗಳು ಬಾಡಿಗೆಗಿವೆ**
ಜಿಲ್ಲಾ ಕ್ರೀಡಾಂಗಣದ ಹತ್ತಿರ, ಮೊದಲನೇ ಮಹಡಿಯಲ್ಲಿ 10x25 ಅಡಿ ಅಳತೆಯ 2 ಮಳಿಗೆಗಳು ಹಾಗೂ 2ನೇ ಮಹಡಿಯಲ್ಲಿ 25x25 ಅಡಿ ಅಳತೆಯ ಒಂದು ಮಳಿಗೆ ಬಾಡಿಗೆ ಇವೆ. ಮಳಿಗೆಗಳು ಸುಸಜ್ಜಿತವಾಗಿದ್ದು, ಬಾಡಿಗೆಗಾಗಿ ಸಂಪರ್ಕಿಸಿ :
94498 30566

**ಬೇಕಾಗಿದ್ದಾರೆ**
Mechanic & Assistant Mechanic, Qualification : ITI Diesel / Fitter
Eicher Trucks & Buses Workshop
ಸಂಪರ್ಕಿಸಿ :
ವಿಜಯ ಆಟೋ ಸೇಲ್ಸ್ ಅಂಡ್ ಸರ್ವೀಸ್, ಪಿ.ಬಿ. ರೋಡ್, ದಾವಣಗೆರೆ.
94480 70098

**ಕೆಲಸಕ್ಕೆ ಬೇಕಾಗಿದ್ದಾರೆ**
ಹುಡುಗರು, ದ್ವಿಚಕ್ರ ವಾಹನ ಹೊಂದಿರುವವರು, ಫೀಲ್ಡ್ ಆಫೀಸರ್ ಕೆಲಸಕ್ಕೆ ಬೇಕಾಗಿದ್ದಾರೆ. ಎಸ್ಸೆಸ್ ಬಡಾವಣೆ, ಎಸ್ಸೆಸ್ ಆಸ್ಪತ್ರೆ ರಸ್ತೆ, ದಾವಣಗೆರೆ.
9000 ದಿಂದ 12000ವರೆಗೆ ವೇತನ ಇರುತ್ತದೆ.
ಸಮಯ : 10.30 ರಿಂದ ಸಂಜೆ 5ರವರೆಗೆ.
91486 20145, 89711 68504

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.



ದಾವಣಗೆರೆ : 2 & 3ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಿಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**REQUIRED**
SALESMAN - 2
DELIVERY BOYS-2
Attractive Salary
Only Experienced
May Contact:
Sri Malatesha Furnishing Centre
Darshan Complex, P.B.Road, Davanagere - 2.
91108 68664

**New House For Rent (Only Veg)**
1 Bed Room-1st floor-1 House
1 Bed Room - 2nd Floor-1 House
2 Bed Room-2nd Floor-1 Home
Old Banashankari Layout, Davangere., behind bypass,
9740370797

**ನೇರ ಪರೀಕ್ಷೆಗಳು**
SSLC, PUC, BA, B.Com, NTC, BBA, MBA (ALL) B.Tech, Diploma, ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್
ಶ್ರೀ ಗಂಗೋತ್ರಿ ಕರೆಸ್ಪಾಂಡೆನ್ಸ್ ಕಾಲೇಜ್
ಲಾಯರ್ ರೋಡ್, ದಾವಣಗೆರೆ.
ಫೋ. : 86602 35013

**ಓಂ ಶ್ರೀ ಗುರುಭ್ಯೋ ನಮಃ**
ರೇಕಿ ಮತ್ತು ರಾಜಕ್ರಿಯಾ ರೇಖಿ
(ಆರೋಗ್ಯ, ವಿವಾಹ, ಸಂತಾನ, ಶಿಕ್ಷಣಕ್ಕಾಗಿ ಮತ್ತು ಕಾಯಿಲೆ ಕರ್ಮ ನಿವಾರಣೆಗಾಗಿ)
ಹಾವೇರಿ, ಬಳ್ಳಾರಿ, ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗದಲ್ಲಿ ತರಬೇತಿಗಾಗಿ ಸಂಪರ್ಕಿಸಿ :
76761 83394, 90364 90336

**ಬೇಕಾಗಿದ್ದಾರೆ**
ಏಜೆನ್ಸಿಯಲ್ಲಿ ಡೆಲಿವರಿ ಕೊಡಲು ಡೆಲಿವರಿ ಹುಡುಗರು ಮತ್ತು ಡ್ರೈವರ್ ಬೇಕಾಗಿದ್ದಾರೆ.
94485 34028, 95354 84774

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಬೇಕಾಗಿದ್ದಾರೆ**
ಲಾಡ್ಜ್‌ನಲ್ಲಿ ಹಗಲು ಮತ್ತು ರಾತ್ರಿ ಪ್ರತ್ಯೇಕ ಪಾಳಿಯಗಳಲ್ಲಿ ರೂಂ ಬಾಯ್ ಮತ್ತು ಸೂಪರ್‌ವೈಸರ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಬಳದೊಂದಿಗೆ ಊಟ-ವಸತಿ ಸೌಲಭ್ಯವಿರುತ್ತದೆ.
ಸಂಪರ್ಕಿಸಿ :
63639-54459

**ಈಶ್ವರಿ ಮಹಿಳಾ ತರಬೇತಿ ಕೇಂದ್ರ**
ಫ್ಯಾಷನ್ ಡಿಸೈನಿಂಗ್ - ಟೈಲರಿಂಗ್ ಕೋರ್ಸ್, ರಾಜಸ್ಥಾನಿ ಚೂಡಿ - ಬ್ಲೌಸ್ ಕಟಿಂಗ್, ಮಿಡಿಗಳು & ಫ್ರಾಕುಗಳು, ಹ್ಯಾಂಡ್ ಎಂಬ್ರಾಯಿಡಿಂಗ್ & ಗ್ಲಾಸ್ ಪೆಂಟಿಂಗ್, ಪಾಟಪೇಂಟಿಂಗ್ ಹಾಗೂ ಕ್ರೋಷಾ ಕುಚ್ಚು ಅನುಭವಿ ತರಬೇತುದಾರರಿಂದ ಶಿಕ್ಷಣ ಕೊಡಲಾಗುವುದು. ಆಸಕ್ತಿಯುಳ್ಳವರು ಸಂಪರ್ಕಿಸಿ : ವಿಳಾಸ - ಶ್ರೀ ಜಗದ್ಗುರು ರೇಣುಕಾ ಕೃಪಾ, # 2798, ಎಸ್.ಎಸ್. ಲೇಔಟ್ 'ಬಿ' ಬ್ಲಾಕ್ 10-A ಕ್ರಾಸ್. 97316 50435, 96325 80172, 95358 15543

**WANTED TEACHERS**
Kids Campus International Pre school
Davangere
Wanted : Teachers for playgroup, Pre-kg, Lkg and Ukg
Fluency in English
99003 78196

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: SSLC/PUC/ITI ಪಾಸ್/ಫೇಲ್ ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು
ದಿ.7.6.2023ರ ಬುಧವಾರ
ದಿ.8.6.2023ರ ಗುರುವಾರ
ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಬೇಕಾಗಿದ್ದಾರೆ**
ಎಂ.ಎಸ್. ಡಿಸ್ಟ್ರಿಬ್ಯೂಟರ್ಸ್ ಆಕ್ಸ್‌ಫರ್ಡ್ ಸ್ಕೂಲ್ ಹತ್ತಿರ, ಬೇತೂರ್ ರೋಡ್, ದಾವಣಗೆರೆ. Sales & Delivery boys, Salary 9K to 10K First Preference Experience Candidate
9008115066, 9008114452

**ಸೈಟ್ ಮಾರಾಟಕ್ಕಿದೆ**
ದಾವಣಗೆರೆ ನಗರದ ಹೊರವಲಯದ ಕುಂದುವಾಡ ಹತ್ತಿರ ಇರುವ ತುಂಗಭದ್ರಾ ಬಡಾವಣೆಯಲ್ಲಿ 20x30 ಅಳತೆಯ, ಉತ್ತರ ಮುಖವುಳ್ಳ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ :
97416 84666, 82177 98233

# ನೈತಿಕತೆ ನಡೆಯ ರಾಮರಾಜ್ಯದ ಕನಸು ಕಂಡಿದ್ದ ಗಾಂಧೀಜಿ

## ಕರುಣಾ ಜೀವ ಕಲ್ಯಾಣ ಟ್ರಸ್ಟಿನಲ್ಲಿ ಜರುಗಿದ 'ಚಿಂತನ ಮಂಥನ' ಕಾರ್ಯಕ್ರಮದಲ್ಲಿ ಶಿವನಕೆರೆ ಬಸವಲಿಂಗಪ್ಪ

ದಾವಣಗೆರೆ, ಮೇ 29- ಗಾಂಧೀಜಿ ಜೀವನದ ನೂರಾರು ಪ್ರಮುಖ ಘಟನೆಗಳು ಅವರ ನೈತಿಕ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಸಾಕ್ಷಿಯಾಗಿವೆ. ಅವರು ಸ್ವತಃ ನೈತಿಕತೆಯ ಜೀವನ ನಡೆಸಿ, ಭಾರತ ದೇಶದ ಜನರೆಲ್ಲಾ ನೈತಿಕತೆಯ ಜೀವನ ನಡೆಸಲಿ, ಭಾರತ ನಿಜವಾದ ಅರ್ಥದಲ್ಲಿ ಸತ್ಯ, ಅಹಿಂಸೆಯ ನಡೆ, ನುಡಿ ರೂಢಿಸಿಕೊಂಡು ರಾಮರಾಜ್ಯವಾಗಲಿ ಎಂಬುದು ಅವರ ಕನಸಾಗಿತ್ತು ಎಂದು ಶಿವನಕೆರೆ ಬಸವಲಿಂಗಪ್ಪ ಹೇಳಿದರು.

ನಗರದ ಸಾಮಾಜಿಕ ಸೇವಾ ಸಂಸ್ಥೆ ಕರುಣಾ ಜೀವ ಕಲ್ಯಾಣ ಟ್ರಸ್ಟಿನಲ್ಲಿ ಕಳೆದ ವಾರ ನಡೆದ 'ಭಾರತದಲ್ಲಿ ನೈತಿಕ ಅಧಿಕಾರ ಸ್ಥಾಪಿಸಲು ಹೆಣಗಿದ ಗಾಂಧೀಜಿ' ಎಂಬ ವಿಷಯದ ಚಿಂತನ-ಮಂಥನ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು

ಅದಕ್ಕಾಗಿ ಗಾಂಧೀಜಿ ಸಪ್ತ ಸಾಮಾಜಿಕ ಪಾತಕಗಳಾದ ತತ್ವರಹಿತ ರಾಜಕೀಯ, ದುಡಿಮೆ ಇಲ್ಲದ ಸಂಪತ್ತು, ನೀತಿ ಹೀನ ವಾಣಿಜ್ಯ, ಶೀಲವಿಲ್ಲದ ಶಿಕ್ಷಣ, ಆತ್ಮಸಾಕ್ಷಿರಹಿತ ಭೋಗ, ಮಾನವತಾ ಶೂನ್ಯ ವಿಜ್ಞಾನ, ತ್ಯಾಗವಿಲ್ಲದ ಪೂಜೆ ಇವುಗಳು ಸಮಾಜಕ್ಕೆ ಪಾತಕಗಳು. ಈ ಪಾತಕಗಳಿಂದ ನಾವು ಮುಕ್ತರಾಗೋಣವೆಂದು ಪ್ರತಿಪಾದಿಸಿದರು. ಅಲ್ಲದೇ ದಶ ವ್ರತಗಳಾದ ಅಹಿಂಸೆ, ಆಸ್ತೇಯ, ಬ್ರಹ್ಮಚರ್ಯ, ಸ್ವದೇಶಿ ವಸ್ತುಗಳ ಬಳಕೆ, ಸತ್ಯ, ಅಸಂಗ್ರಹ, ಶರೀರ ಶ್ರಮ, ಅಸ್ವಾದ, ಸರ್ವತ್ರ ಭಯವರ್ಜನ, ಸರ್ವಧರ್ಮ ಸಮಾನತ್ವ ಇವುಗಳನ್ನು ಪಾಲಿಸುತ್ತಿದ್ದರು ಮತ್ತು ಭಾರತೀಯರಿಗೆ ಪಾಲಿಸಲು ವಿನಂತಿಸುತ್ತಿದ್ದರು.



ಗಾಂಧೀಜಿಯಿಂದ ಪ್ರೇರೇಪಿತರಾದ ಸಮಕಾಲೀನ ಲಕ್ಷಾಂತರ ನೇತಾರರು ಗಾಂಧೀಜಿಯ ಪ್ರಭಾವಕ್ಕೆ ಒಳಗಾಗಿ ನೈತಿಕತೆ, ಸರಳತೆ, ಸೌಹಾರ್ದತೆ, ಪರಧರ್ಮ ಸಹಿಷ್ಣುತೆಗಳ ಪ್ರಕಾರ ಬಾಳಿದರು. ಕೇವಲ ಸ್ವತಂತ್ರ ಬಂದು 75 ವರ್ಷಗಳಲ್ಲಿ ದೇಶದ ಅರ್ಧಕ್ಕಿಂತಲೂ ಜಾಸ್ತಿ ಕ್ರಿಮಿನಲ್ ಹಿನ್ನೆಲೆ ಇರುವವರು ಶಾಸಕರು, ಸಂಸದರು ಆಗಿದ್ದಾರೆ ಎನ್ನುವುದು ನೈತಿಕತೆಯ ಕುಸಿತದ ಪರಿಣಾಮ.

> **ಅನೈತಿಕತೆಯ ಗ್ಯಾಂಗ್ರಿನ್..**
>
> 'ಇಡೀ ದೇಶಕ್ಕೆ ಅನೈತಿಕತೆಯ ಗ್ಯಾಂಗ್ರಿನ್ ಹಿಡಿದಿದೆ. ಅದನ್ನು ಗಾಂಧಿ ತತ್ವಗಳಿಂದ ಆಪರೇಷನ್ ಮಾಡಿ, ದೇಶ ಉಳಿಸಬೇಕಾಗಿದೆ'
>
> **- ಆವರಗೆರೆ ರುದ್ರಮುನಿ**
> ರೈತ ನಾಯಕರು

ಅನೇಕ ಶ್ರೀಮಂತರು ರಾಜಕಾರಣ ಸೇವೆ ಎಂದರಿಯದೆ, ಖ್ಯಾತಿ ಮತ್ತು ಮತ್ತಷ್ಟು ಶ್ರೀಮಂತರಾಗಲೆಂದೇ ರಾಜಕೀಯಕ್ಕೆ ಪ್ರವೇಶಿಸುತ್ತಿದ್ದಾರೆ.

ಈ ಪ್ರಸ್ತುತ ಪರಿಸ್ಥಿತಿ ವಿಷಾದವೆನಿಸುತ್ತದೆ. ಆದರೆ, ಸರಳರೂ, ಸಜ್ಜನರೂ ದೇಶ ನಡೆಸುವುದು ಗಾಂಧೀಜಿಯವರ ಇಚ್ಛೆಯಾಗಿತ್ತು. ಉದಾಹರಣೆಗೆ ಹಿಂದೆ ರಾಜಾಜಿ, ಲಾಲ್ ಬಹದ್ದೂರ್ ಶಾಸ್ತ್ರಿ, ಸರೋಜಿನಿ ನಾಯ್ಡು, ನಿಜಲಿಂಗಪ್ಪ, ಕೆಂಗಲ್ ಹನುಮಂತಯ್ಯ, ಯಶೋಧರ ದಾಸಪ್ಪ, ವೀರೇಂದ್ರ ಪಾಟೀಲ್, ಮುರಾರ್ಜಿ ದೇಸಾಯಿ ಮುಂತಾದ ಗಾಂಧಿವಾದಿಗಳು ದೇಶದ ಚುಕ್ಕಾಣಿ ಹಿಡಿದಿದ್ದರು.

ಈಗಲೂ ಸಹ ಕಾಲ ಮಿಂಚಿಲ್ಲ. ಸರ್ಕಾರಿ ಕಚೇರಿಗಳಲ್ಲಿ ಕೇವಲ ಗಾಂಧೀಜಿ, ಬಸವಣ್ಣನವರ ಫೋಟೋ ಹಾಕುವುದು ಮಾತ್ರವಲ್ಲ ಅವರ ನೈತಿಕತೆಯ ಆದರ್ಶದ ಗುಣಗಳನ್ನು ಸಹ ಅಳವಡಿಸಿಕೊಂಡು ನೈತಿಕ ಆಡಳಿತ ನಡೆಸ ಬೇಕಾಗಿದೆ .

ಗಾಂಧೀಜಿಯವರಲ್ಲಿದ್ದ ತಾಯ್ತನ, ಬಡವರ ಬಗ್ಗೆ ಅನುಕಂಪ, ಅಸ್ಪೃಶ್ಯತೆ ನಿವಾರಣೆ, ಕೋಮು ಸೌಹಾರ್ದತೆ, ಮಹಿಳಾ ಸಮಾನತೆ ಇವೆಲ್ಲವೂ ಇನ್ನೂ ಜಾರಿಗೆ ಬಂದಿಲ್ಲ. ಅವುಗಳ ಅಳವಡಿಕೆ ಮುಖ್ಯವೆಂದು ಶಿವನಕೆರೆ ಬಸವಲಿಂಗಪ್ಪ ತಿಳಿಸಿದರು.

ರೈತ ನಾಯಕ ಆವರಗೆರೆ ರುದ್ರಮುನಿ ಮಾತನಾಡಿ, ಇಡೀ ದೇಶಕ್ಕೆ ಅನೈತಿಕತೆಯ ಗ್ಯಾಂಗ್ರಿನ್ ಹಿಡಿದಿದೆ. ಅದನ್ನು ಗಾಂಧಿ ತತ್ವಗಳಿಂದ ಆಪರೇಷನ್ ಮಾಡಿ, ದೇಶ ಉಳಿಸಬೇಕಾಗಿದೆ ಎಂದರು.

ಸಂವಾದದಲ್ಲಿ ಗುರುಮೂರ್ತಿ, ಎನ್.ಕೆ.ಗೌಡ, ಮಲ್ಲಾಬಾದಿ ಬಸವರಾಜ್, ಮುರುಳೀಧರ್, ನರಸಿಂಹ ಮೂರ್ತಿ ಮುಂತಾದವರು ಭಾಗವಹಿಸಿ ಮಾತನಾಡಿದರು.

# ಗುರಿ ತಲುಪಲು ಶಿಸ್ತು ಬೇಕು : ದಿನೇಶ್ ಕೆ.ಶೆಟ್ಟಿ



ದಾವಣಗೆರೆ, ಮೇ 29 - ಜೀವನದಲ್ಲಿ ಅಂದುಕೊಂಡ ಗುರಿ ತಲುಪಲು ಪ್ರತಿಯೊಬ್ಬರಿಗೂ ಶಿಸ್ತು ಬೇಕು. ಗುರುಗಳು ತೋರಿದ ಶಿಸ್ತಿನ ದಾರಿಯನ್ನು ಹಿಡಿದು ಶ್ರದ್ಧೆ ನಿಷ್ಠೆಯಿಂದ ಪ್ರಯತ್ನ ಪಟ್ಟರೆ ಸರಿಯಾದ ಗುರಿಯನ್ನು ಬೇಗ ತಲುಪಬಹುದು ಎಂದು ದಾವಣಗೆರೆ ಕ್ರಿಕೆಟ್ ಅಕಾಡೆಮಿಯ ಅಧ್ಯಕ್ಷರು, ದಾವಣಗೆರೆ ಜಿಲ್ಲಾ ಕ್ರೀಡಾಪಟುಗಳ ಸಂಘದ ಅಧ್ಯಕ್ಷರೂ ಆದಂತಹ ದಿನೇಶ್ ಕೆ.ಶೆಟ್ಟಿ ಕಿವಿ ಮಾತು ಹೇಳಿದರು.

ದಾವಣಗೆರೆ ಕ್ರಿಕೆಟ್ ಅಕಾಡೆಮಿ ವತಿಯಿಂದ ಹಮ್ಮಿಕೊಂಡಿದ್ದ 22ನೇ ವರ್ಷದ ಬೇಸಿಗೆ ಕ್ರಿಕೆಟ್ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಶಿಬಿರದ ವಿದ್ಯಾ ರ್ಥಿಗಳಿಗೆ ಪ್ರಮಾಣ ಪತ್ರವನ್ನು ವಿತರಿಸಿ ಅವರು ಮಾತನಾಡಿದರು.

ಮೊದಲಿಗೆ ಕ್ರಿಕೆಟ್‌ಗಾಗಿ ಹೆಚ್ಚಿನ ತರಬೇತಿ ಪಡೆಯಲು ಬೆಂಗಳೂರು ಅಥವಾ ಮೈಸೂರಿಗೆ ಹೋಗಬೇಕಾಗುತ್ತಿತ್ತು. ಅದು ತುಂಬಾ ದುಬಾರಿಯಾಗಿದ್ದ ಕಾರಣ ಪೋಷಕರು ಪ್ರತಿಭಾವಂತ ಕ್ರೀಡಾಪಟುಗಳನ್ನು ಕಳಿಸಲು ಹಿಂಜರಿಯುತ್ತಿದ್ದರು, ಆದರೆ ಈಗ ದಾವಣಗೆರೆಯಲ್ಲಿ ಕ್ರೀಡಾ ಪ್ರಾಧಿಕಾರದ ಕೋಚ್ ಆದ ಪಿ.ವಿ. ನಾಗರಾಜ್‌ರವರು ಪ್ರಾರಂಭಿಸಿ, ಈಗ ಅವರ ಮಾರ್ಗದರ್ಶನದಲ್ಲಿ ಬಿಸಿಸಿಐ ಕೋಚ್ ಗೋಪಾಲಕೃಷ್ಣ, ಕೆ.ಎಸ್.ಸಿ.ಎ. ಕೋಚ್ ತಿಮ್ಮೇಶ್, ಉಮೇಶ್ ಸಿರಿಗೆರೆ, ಕುಮಾರ್ ಅವರುಗಳ ನೇತೃತ್ವದಲ್ಲಿ ಅತ್ಯುತ್ತಮ ತರಬೇತಿ ನೀಡುತ್ತಿದ್ದು, ದಾವಣಗೆರೆಯಲ್ಲಿಯೂ ಒಳ್ಳೆಯ ಪ್ರತಿಭೆಗಳನ್ನು ತಯಾರು ಮಾಡುತ್ತಿರುವುದು ಪ್ರಶಂಸನೀಯ. ಶಿಬಿರಕ್ಕೆ ಬಂದ ಕ್ರೀಡಾಪಟುಗಳು ತರಬೇತಿಯನ್ನು ಮುಂದುವರೆಸಿಕೊಂಡು ಅತ್ಯುತ್ತಮ ಸ್ಥಾನ ತಲುಪಲಿ ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ಹಿರಿಯ ಕ್ರಿಕೆಟ್ ಆಟಗಾರರಾದ ಮಂಜುನಾಥ, ಕ್ರಿಕೆಟ್ ಪ್ರೋತ್ಸಾಹಕ ಶಾಮನೂರು ತಿಪ್ಪೇಶ್, ಕಿರಿಯ ತರಬೇತುದಾರ ವೆಂಕಟೇಶ್, ಹೇಮಂತ್, ಹಿರಿಯ ಕ್ರೀಡಾಪಟುಗಳು, ಶಿಬಿರಾರ್ಥಿಗಳು ಹಾಗೂ ಪೋಷಕರು ಉಪಸ್ಥಿತರಿದ್ದರು.

# ಗೃಹಲಕ್ಷ್ಮಿ ಯೋಜನೆ ಜಾರಿಗೆ ಅಂಗನವಾಡಿ ಕಾರ್ಯಕರ್ತೆಯರ ಬಳಕೆಗೆ ವಿರೋಧ



ದಾವಣಗೆರೆ, ಮೇ 29 - ರಾಜ್ಯ ಸರ್ಕಾರದ ನೂತನ ಗ್ಯಾರಂಟಿಗಳಲ್ಲಿ ಒಂದಾದ ಗೃಹಲಕ್ಷ್ಮಿ ಯೋಜನೆ ಜಾರಿಗೆ ಫಲಾನುಭವಿಗಳ ಆಯ್ಕೆ ಮಾಡುವುದಕ್ಕೆ ಅಂಗನವಾಡಿ ಕಾರ್ಯಕರ್ತೆಯರನ್ನು ಬಳಸಿಕೊಳ್ಳುವುದಕ್ಕೆ ಸಂಘಟನೆ ವಿರೋಧ ವ್ಯಕ್ತಪಡಿಸುತ್ತದೆ ಎಂದು ಸಂಘಟನೆಯ ಎಐಟಿಯುಸಿ ಸಂಯೋಜಿತ ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಫೆಡರೇಷನ್‌ನ ರಾಜ್ಯ ಸಂಚಾಲಕ ಆವರಗೆರೆ ಚಂದ್ರು ತಿಳಿಸಿದ್ದಾರೆ.

ಈಗಾಗಲೇ ಅಂಗನವಾಡಿ ಕಾರ್ಯಕರ್ತೆಯರು ತಮ್ಮ ಇಲಾಖೆಯ ಕೆಲಸಗಳಲ್ಲದೆ, ಇತರೆ ಇಲಾಖೆಗಳ ಕೆಲಸಗಳನ್ನು ಮಾಡುತ್ತಿರುವುದರಿಂದ ಕೆಲಸದ ಹೊರೆ ಜಾಸ್ತಿಯಾಗಿದೆ. ಆದ್ದರಿಂದ ನೂತನ ಸರ್ಕಾರವು ಜಾರಿಗೆ ತರುತ್ತಿರುವ ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳ ಆಯ್ಕೆಯ ಕೆಲಸವನ್ನು ಅಂಗನವಾಡಿ ಕಾರ್ಯಕರ್ತೆಯರಿಗೆ ವಹಿಸದೆ ಕಂದಾಯ ಇಲಾಖೆಗೆ ವಹಿಸಬೇಕೆಂದು ಸಂಘಟನೆ ಸರ್ಕಾರಕ್ಕೆ ಆಗ್ರಹಿಸುತ್ತದೆ.

# ಹೆಂಡತಿ, ಮಗುವನ್ನು ಕೊಲೆ ಮಾಡಿದ್ದ ಆರೋಪಿತನಿಗೆ ಜೀವಿತಾವಧಿ ಶಿಕ್ಷೆ

ದಾವಣಗೆರೆ, ಮೇ 29- ಶೀಲ ಶಂಕಿಸಿ ಪತ್ನಿ ಹಾಗೂ ಮಗುವನ್ನು ಕೊಲೆ ಮಾಡಿದ ಆರೋಪಿಗೆ ಇಲ್ಲಿನ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದೆ.

ಮಾಯಕೊಂಡ ಗ್ರಾಮದ ನಾಗರಾಜ್ ಅವರಿಗೆ ಶಿಲ್ಪಾಳನ್ನು ಕೊಟ್ಟು ಮದುವೆ ಮಾಡಲಾಗಿತ್ತು. ಅವರಿಗೆ 2 ವರ್ಷದ ಕೃತಿಕಾ ಎನ್ನುವ ಹೆಣ್ಣು ಮಗುವಿತ್ತು.

ಪತ್ನಿಯ ಶೀಲದ ಬಗ್ಗೆ ಶಂಕಿಸಿ ನಾಗರಾಜ್ ನಿತ್ಯ ಗಲಾಟೆ ಮಾಡುತ್ತಿದ್ದ. ಕಳೆದ 2018ರ ಏಪ್ರಿಲ್ 19 ರಂದು ಮನೆಯಲ್ಲಿ ಯಾರೂ ಇಲ್ಲದ ವೇಳೆ ಪತ್ನಿಯೊಂದಿಗೆ ಜಗಳ ಮಾಡಿ, ಬಚ್ಚಲು ರೂಮಿನ ಕಡೆ ಹೋದ ಶಿಲ್ಪಾಳನ್ನು ಕಡೆವಿ ಹಗ್ಗದಿಂದ ಕುತ್ತಿಗೆಗೆ ಬಿಗಿದು ಕೊಲೆ ಮಾಡಿ, ಯಾರಿಗೂ ಗೊತ್ತಾಗದಂತೆ ನೇಣು ಹಾಕಿದ್ದ.

ನಂತರ 2 ವರ್ಷದ ಮಗಳು ಕೃತಿಕಾಳನ್ನು ಸಾಕುವ ಜವಾಬ್ದಾರಿ ನನ್ನ ಮೇಲೆ ಬರುತ್ತದೆಂದು ಯೋಚಿಸಿ, ಮಗುವನ್ನೂ ನೇಣು ಹಾಕಿ ಕೊಲೆ ಮಾಡಿ ಹಿಂಬಾಗಿಲಿನಿಂದ ತೆರಳಿ ಸಾಕ್ಷ್ಯ ನಾಶಪಡಿಸಿದ ಆರೋಪದ ಮೇಲೆ ಆಗಿನ ತನಿಖಾಧಿಕಾರಿ ಗುರುಬಸವರಾಜ್ ರವರು ಪ್ರಕರಣದ ತನಿಖೆ ಮಾಡಿ ಆರೋಪಿತನ ವಿರುದ್ದ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿದ್ದರು.

ಪ್ರಕರಣದ ಸಂಪೂರ್ಣ ವಿಚಾರಣೆ ನಡೆಸಿದ ಮಾನ್ಯ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ದಾವಣಗೆರೆಯ ನ್ಯಾಯಾಧೀಶರಾದ ಪ್ರವೀಣ್ ಕುಮಾರ್ ಆರ್.ಎನ್ ರವರು ಆರೋಪಿತನ ಮೇಲಿನ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಆರೋಪಿತನಿಗೆ ಜೀವಿತಾವಧಿ ಶಿಕ್ಷೆ ವಿಧಿಸಿ ತೀರ್ಪು ನೀಡಿರುತ್ತಾರೆ. ಸರ್ಕಾರಿ ಅಭಿಯೋಜಕ ಜಯಪ್ಪ ಕೆ.ಜಿ ಸರ್ಕಾರದ ಪರ ವಾದ ಮಂಡಿಸಿದ್ದರು.

# ಅಕಾಲಿಕ ಮಳೆಯಿಂದ ಬೆಳೆ ಹಾನಿ: ಅಗತ್ಯ ಕ್ರಮಕ್ಕೆ ಒತ್ತಾಯ

ದಾವಣಗೆರೆ, ಮೇ 29- ಮುಂಗಾರು ಹಂಗಾಮಿನ ಅಕಾಲಿಕ ಮಳೆಯಿಂದ ಭತ್ತ ಮತ್ತು ತೋಟದ ಬೆಳೆಗಳು ಬಡವರ ಮನೆಗಳು ಹಾಳಾಗಿದ್ದು, ಕೂಡಲೇ ಅಗತ್ಯ ಕ್ರಮ ಕೈಗೊಳ್ಳುವಂತೆ ಕರ್ನಾಟಕ ರಾಜ್ಯ ರೈತ ಸಂಘ ಒತ್ತಾಯಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ರಾಜ್ಯ ಕಾರ್ಯದರ್ಶಿ ಬಲ್ಲೂರು ರವಿಕುಮಾರ್ ಅವರು, ಜಿಲ್ಲಾಧಿಕಾರಿಗಳು, ಕೃಷಿ ಮತ್ತು ತೋಟಗಾರಿಕೆ ಇಲಾಖೆ ಅಧಿಕಾರಿಗಳು ಮೇ ತಿಂಗಳಲ್ಲಿ ಅಕಾಲಿಕ ಮಳೆಯಿಂದ ದಾವಣಗೆರೆ ಜಿಲ್ಲೆ ದಾವಣಗೆರೆ ತಾಲ್ಲೂಕಿನ ಕಸಬಾ ಹೋಬಳಿಗಳು, ಹರಿಹರ ತಾಲ್ಲೂಕಿನ ಮಲೇಬೆನ್ನೂರು ಹೋಬಳಿ, ಚನ್ನಗಿರಿ ತಾಲ್ಲೂಕಿನ ಬಸವಾಪಟ್ಟಣ, ಸಂತೇಬೆನ್ನೂರು ಹೋಬಳಿಗಳಲ್ಲಿ ಭತ್ತದ ಬೆಳೆಗಳು ಹಾಳಾಗಿದ್ದು, ನಷ್ಟ ಹೊಂದಿರುವ ರೈತರಿಗೆ ಕೂಡಲೇ ಪರಿಹಾರ ನೀಡುವಂತೆ ಆಗ್ರಹಿಸಿದರು.

ಭತ್ತದ ಮಾರುಕಟ್ಟೆಯಲ್ಲಿ ಹಾಲಿ 2200 ರಿಂದ 2300 ದರ ಇದ್ದು, ಪ್ರಸ್ತುತ 40-50 ಚೀಲ ಇಳುವರಿ ಬರುತ್ತಿದ್ದು, ಪ್ರತಿ ಎಕರೆಗೆ 75,000 ದಿಂದ 80000 ರೂ. ಗಳು ಹಣ ಬರುತ್ತಿದ್ದು, ಅಕಾಲಿಕ ಮಳೆಯಿಂದ ಸುಮಾರು 60,000 ರೂ. ನಷ್ಟವಾಗುತ್ತಿದೆ. ಸರ್ಕಾರ ಭೂಮಿಯ ಉಳುಮೆ, ಗೊಬ್ಬರ, ಔಷಧಿ ಮತ್ತು ಕೂಲಿ ಕೆಲಸದ ಬಾಬ್ತು ಪ್ರತಿ ಎಕರೆಗೆ 30,000 ರೂ. ವೆಚ್ಚವಾಗುತ್ತದೆ. ಆದ್ದರಿಂದ ಪ್ರತಿ ಎಕರೆಗೆ 50 ಸಾವಿರ ರೂ. ಸರ್ಕಾರದಿಂದ ರೈತರ ಖಾತೆಗೆ ಜಮಾ ಮಾಡಬೇಕೆಂದು ಒತ್ತಾಯಿಸಿದರು.

ಅತಿ ಬಡವರ ಮನೆಗಳು ಗಾಳಿ, ಮಳೆಯಿಂದ ಹೆಂಚುಗಳು ಮತ್ತು ತಗಡುಗಳು ಹಾರಿ ಹೋಗಿದ್ದು, ಮನೆಗಳು ಸಹ ಧಕ್ಕೆಯಾಗಿರುವ ಪ್ರಯುಕ್ತ ಅಂತಹ ಬಡವರ ಮನೆಗಳನ್ನು ಸರಕಾರ ತಾತ್ಕಾಲಿಕ ಪರಿಹಾರವಲ್ಲದೆ, ಶಾಶ್ವತ ಪರಿಹಾರವಾಗಿ ಮನೆಗಳನ್ನು ನಿರ್ಮಿಸಿ ಕೊಡಬೇಕಾಗಿ ಮನವಿ ಮಾಡಿದರು.

ಸಂಘದ ಜಿಲ್ಲಾಧ್ಯಕ್ಷ ಕೆ.ಎಸ್. ಪ್ರಸಾದ್, ರಾಂಪುರದ ಬಸವರಾಜ್, ಮಾಯಕೊಂಡದ ಅಶೋಕ್, ಐಗೂರು ಶಿವಮೂರ್ತೆಪ್ಪ, ಕೆ.ಹೆಚ್. ಪ್ರತಾಪ್, ದಶರಥರಾಜ್, ಬಿಸಲೇರಿ ಮಲ್ಲಿಕಾರ್ಜುನಪ್ಪ, ಹಾಲೇಶ್, ನಾಗರಾಜ್ ಐಗೂರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ಸರ್ವೋತ್ತಮ ಸೇವಾ ಪ್ರಶಸ್ತಿಗೆ ಅರ್ಜಿ

ದಾವಣಗೆರೆ, ಮೇ 29- ರಾಜ್ಯ ಸರ್ಕಾರದ ಅಧಿಕಾರಿ / ನೌಕರರಿಗೆ ಸರ್ವೋತ್ತಮ ಸೇವಾ ಪ್ರಶಸ್ತಿ ಪಡೆಯಲು ನಾಮ ನಿರ್ದೇಶನಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಜೂನ್ 15 ರವರೆಗೆ ಅವಧಿಯನ್ನು ವಿಸ್ತರಿಸಲಾಗಿದೆ.

# 'ಮಲ್ಲಿಕಾ' ಉತ್ಸವಕ್ಕೆ ವರುಣನ ಸಿಂಚನ




ದಾವಣಗೆರೆ, ಮೇ 29- ನಗರದ ಜಿ.ಎಂ. ತಾಂತ್ರಿಕ ಮಹಾವಿದ್ಯಾಲಯದ ದಿ. ಜಿ.ಮಲ್ಲಿಕಾರ್ಜುನಪ್ಪ ತೆರೆದ ಸಭಾಂಗಣದಲ್ಲಿ ಸೋಮವಾರ ಸಂಜೆ ವರುಣನ ಆಗಮನದ ನಡುವೆಯೂ 'ಮಲ್ಲಿಕಾ-2023' ಕ್ರೀಡಾ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಕಾಲೇಜಿನ ಆವರಣದಲ್ಲಿ ಹಬ್ಬದ ಸಂಭ್ರಮದ ರೀತಿಯಲ್ಲಿ 'ಮಲ್ಲಿಕಾ' ಉತ್ಸವದಲ್ಲಿ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಬಗೆ ಬಗೆಯ ದಿರಿಸುಗಳನ್ನು ಧರಿಸಿ, ಪರಸ್ಪರ ಸೆಲ್ಫಿ, ಗ್ರೂಪ್ ಫೋಟೋ ತೆಗೆಸಿಕೊಳ್ಳುವ ಮೂಲಕ ಅತ್ಯಂತ ಹರ್ಷದಿಂದ ಪಾಲ್ಗೊಂಡಿದ್ದರು.

ಕಾರ್ಯಕ್ರಮದ ಆರಂಭದಲ್ಲಿ ಖ್ಯಾತ ಸಂಗೀತ ನಿರ್ದೇಶಕ ವಿ. ಮನೋಹರ ಮಾತನಾಡಿ, ಕರ್ನಾಟಕದ ಮಧ್ಯ ಭಾಗದ ಜಿಲ್ಲೆ ದಾವಣಗೆರೆ ರಾಜಧಾನಿಯಾಗಿದ್ದರೆ ಇನ್ನಷ್ಟು ಅಭಿವೃದ್ಧಿ ಕಾಣಬಹುದಿತ್ತೇನೋ ಎಂಬ ಆಶಯ ವ್ಯಕ್ತಪಡಿಸಿದರು.

ದಾವಣಗೆರೆ ಮಧ್ಯಕರ್ನಾಟಕದ ಕೇಂದ್ರ ಬಿಂದುವಾಗಿದ್ದು, ರಾಜಧಾನಿಯಾಗಿದ್ದರೆ ಅಕ್ಕಪಕ್ಕದ ಜಿಲ್ಲೆಗಳಿಗೆ ಅನುಕೂಲವಾಗುವ ಜೊತೆಗೆ ಸರ್ವಾಂಗೀಣ ಪ್ರಗತಿಗೆ ಕಾರಣವಾಗುತ್ತಿತ್ತು ಎಂಬ ಭಾವನೆ ನನ್ನದು ಎಂದರು.

ಜಿಎಂಐಟಿ ಕಾಲೇಜಿನ ಖಜಾಂಚಿ ಜಿ.ಎಸ್. ಅನಿತ್‌ಕುಮಾರ್ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಕಾಮಿಡಿ ಕಿಲಾಡಿಗಳು, ಮಹಾಭಾರತ ಕಾರ್ಯಕ್ರಮದ ಹಾಸ್ಯ ಕಲಾವಿದರಾದ ಸಂತೋಷ್, ಕುಂದಾಪುರ ಸೂರ್ಯ, ನಟ, ನಿರ್ಮಾಪಕ ಸತೀಶ್, ರಾಜೀವ್, ಎಂ.ಬಿ.ಎ. ವಿಭಾಗದ ಮುಖ್ಯಸ್ಥ ಡಾ. ಬಸವರಾಜ್, ಡಾ. ಕಿರಣ್ ಕುಮಾರ್, ಅಜ್ಜಯ್ಯ, ಕಲಾವಿದ ಆರ್.ಟಿ. ಅರುಣ್ ಕುಮಾರ್, ಪ್ರೊ. ಬಕ್ಕಪ್ಪ ಪ್ರೊ.ಕೆ.ಎಸ್. ಓಂಕಾರಪ್ಪ ಸೇರಿದಂತೆ ಕಾಲೇಜಿನ ವಿವಿಧ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು ಉಪಸ್ಥಿತರಿದ್ದರು.

ಇದೇ ವೇಳೆ ಕ್ರೀಡಾ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಣೆ ಮಾಡಲಾಯಿತು.

ಚಂದನಾ ಪ್ರಾರ್ಥಿಸಿದರು. ಪ್ರಾಚಾರ್ಯ ಡಾ. ಎಂ.ಬಿ. ಸಂಜಯ್ ಪಾಂಡೆ ಸ್ವಾಗತಿಸಿದರು.

# ಜುಲೈನಲ್ಲಿ ಗಗನಯಾತ್ರಿಗಳ ಘಟಕದ ಪರೀಕ್ಷೆ

ಶ್ರೀಹರಿಕೋಟ ಮೇ 29 – ಗಗನಯಾನ ಅಭಿಯಾನಕ್ಕಾಗಿ ಬರುವ ಜುಲೈ ತಿಂಗಳಲ್ಲಿ ಗಗನಯಾತ್ರಿಗಳ ಘಟಕವನ್ನು ಪರೀಕ್ಷೆಗೆ ಒಳಪಡಿಸಲು ಭಾರತದ ಬಾಹ್ಯಾಕಾಶ ಸಂಸ್ಥೆ ಇಸ್ರೋ ನಿರ್ಧರಿಸಿದೆ.

ಅಮೆರಿಕದ ಬಾಹ್ಯಾಕಾಶ ಸಂಸ್ಥೆಯಾದ ನಾಸಾ ಜೊತೆಗೂಡಿ ಸಿಂಥೆಟಿಕ್ ಅಪರ್ಚರ್ ರಡಾರ್ ಯೋಜನೆಯ ದಿಸೆಯಲ್ಲೂ ಕಾರ್ಯನಿರ್ವಹಿಸಲಾಗುತ್ತಿದೆ ಎಂದು ಇಸ್ರೋ ಅಧ್ಯಕ್ಷ ಎಸ್. ಸೋಮನಾಥ್ ತಿಳಿಸಿದ್ದಾರೆ.

ಗಗನಯಾತ್ರೆಗೆ ಸಂಬಂಧಿಸಿದಂತೆ ನೌಕಾ ದಳ ಸೇರಿದಂತೆ ಹಲವು ಸಂಸ್ಥೆಗಳ ಜೊತೆಗೂಡಿ ಇಸ್ರೋ ಕಾರ್ಯನಿರ್ವಹಿಸುತ್ತಿದೆ. ಜುಲೈನಲ್ಲಿ ಗಗನಯಾತ್ರಿಗಳ ಘಟಕದ ಪರೀಕ್ಷೆಗೆ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ಎಂದವರು ಹೇಳಿದ್ದಾರೆ.

ಗಗನಯಾನದ ವೇಳೆ ಏನಾದರೂ ಅವಘಡ ಸಂಭವಿಸಿದರೆ ಸಿಬ್ಬಂದಿ ಯಾವ ರೀತಿ ಹೊರ ಬರಬೇಕು ಎಂಬುದನ್ನು ತೋರಿಸಲು ಈ ಉಡಾವಣೆ ನಡೆಸಲಾಗುತ್ತಿದೆ ಎಂದು ಸೋಮನಾಥ್ ಹೇಳಿದ್ದಾರೆ.

## ಕೇಂದ್ರ ಸರ್ಕಾರದ ವಿವಿಧ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳಿಗೆ ಅರ್ಜಿ

ದಾವಣಗೆರೆ, ಮೇ 29- ಕೇಂದ್ರ ಸರ್ಕಾರದ ವಿವಿಧ ಇಲಾಖೆಯಲ್ಲಿ ಖಾಲಿ ಇರುವ 1600 ಕ್ಕೂ ಅಧಿಕ ಕಿರಿಯ ಗುಮಾಸ್ತ, ಕಿರಿಯ ಸಹಾಯಕ ಕಾರ್ಯದರ್ಶಿ ಮತ್ತು ದತ್ತಾಂಶ ನಮೂದಕ ಕಾರ್ಯನಿರ್ವಾಹಕ ಹುದ್ದೆಗಳ ಭರ್ತಿಗಾಗಿ ಸಿಬ್ಬಂದಿ ನೇಮಕಾತಿ ಆಯೋಗದ ವತಿಯಿಂದ ಕಂಬೈನ್ಡ್ ಹೈಯರ್ ಸೆಕೆಂಡರಿ (10+2) ಲೆವೆಲ್ ಪರೀಕ್ಷೆಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆಯು ಕಂಪ್ಯೂಟರ್ ಆಧಾರಿತವಾಗಿರುತ್ತದೆ. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳ ವಯೋಮಿತಿ 18 ರಿಂದ 27 ವರ್ಷಗಳಾಗಿದ್ದು ನಿಯಮಾನುಸಾರ ಸಡಿಲಿಕೆ ಇರುತ್ತದೆ. ಆಸಕ್ತ ಅಭ್ಯರ್ಥಿಗಳು ವೆಬ್‌ಸೈಟ್ https://ssc.nic.in ಅಥವಾ www.sskkr.kar.nic.in ಮೂಲಕ ಆನ್‌ಲೈನ್‌ನಲ್ಲಿ ಜೂನ್ 8 ರೊಳಗಾಗಿ ಅರ್ಜಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂ: 080-25502520/ 9483862020 ಗೆ ಅಥವಾ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ದೂ ಸಂ: 08192-259446, 7406323294 ಸಂಪರ್ಕಿಸಬಹುದು.

## ಇಂದು ಗಂಗಾಮತ ಸಮಾಜದ ಸಭೆ

ಶ್ರೀ ಗಂಗಾಮತ ಸಮಾಜದ ಕಾಂಪ್ಲೆಕ್ಸ್‌ನಲ್ಲಿ ಶ್ರೀ ಗಂಗಾ ಪರಮೇಶ್ವರಿ ಜಯಂತ್ಯುತ್ಸವ ಸಮಿತಿ ಹಾಗೂ ಜಿಲ್ಲಾ ಗಂಗಾಮತ ಸಮಾಜದ ವತಿಯಿಂದ ಇಂದು ಶ್ರೀ ಗಂಗಾಪರಮೇಶ್ವರಿ ಜಯಂತ್ಯುತ್ಸವದ ಪೂರ್ವಭಾವಿ ಸಭೆ ಇಂದು ಸಂಜೆ 5 ಗಂಟೆಗೆ ನಡೆಯಲಿದೆ.

ಗಂಗಾಮತ ಸಮಾಜದ ಜಿಲ್ಲಾಧ್ಯಕ್ಷ ಬಿ.ಕೆ. ಮಂಜುನಾಥ ಮಾಗಾನಹಳ್ಳಿ ಅಧ್ಯಕ್ಷತೆ ವಹಿಸಲಿದ್ದಾರೆ.

## ಓದುಗರ ಪತ್ರ

### ರೈಲಿನಲ್ಲಿ ಇರಲಿ ಸ್ಥಳ ಸೂಚನಾ ಫಲಕ

**ಮಾನ್ಯರೇ,**

ದೇಶದಲ್ಲಿ ಪ್ರತಿದಿನ ಸಾವಿರಾರು ಸಂಖ್ಯೆಯಲ್ಲಿ ರೈಲುಗಳು ಪ್ರಯಾಣಿಕರನ್ನು ಹೊತ್ತು ಸಂಚರಿಸುತ್ತವೆ. ಇದೊಂದು ರೀತಿ ಜನಸ್ನೇಹಿ ಸಾರಿಗೆ ವ್ಯವಸ್ಥೆ, ಆದರೆ ನಮ್ಮ ರೈಲ್ವೆಗೆ ಆಧುನಿಕ ಸ್ಪರ್ಶ ಬೇಕಾಗಿದೆ. ರಾತ್ರಿ ಹೊತ್ತು ಪ್ರಯಾಣಿಕರು ತಾವು ಎಲ್ಲಿ ಇದ್ದೇವೆ ಎಂದು ತಿಳಿದುಕೊಳ್ಳಲು ಸಾಧ್ಯವಾಗದೆ, ಇಳಿಯಬೇಕಾದ ನಿಲ್ದಾಣಕ್ಕೆ ಬದಲಾಗಿ ಹಿಂದಿನ ಅಥವಾ ಮುಂದಿನ ನಿಲ್ದಾಣಗಳಲ್ಲಿ ಇಳಿದ ಉದಾಹರಣೆಗಳು ಬಹಳಷ್ಟಿವೆ.

ರೈಲ್ವೆ ಇಲಾಖೆ ಇದನ್ನು ಗಂಭೀರವಾಗಿ ಪರಿಗಣಿಸಬೇಕು. ರೈಲಿನ ಒಳಗೆ ನಿಲ್ದಾಣಗಳ ಹೆಸರು ತೋರಿಸುವ ಎಲ್ಇಡಿ ಫಲಕಗಳನ್ನು ಅಳವಡಿಸುವ ಅಥವಾ ನಿಲ್ದಾಣದ ಹೆಸರಿನ ಮುದ್ರಿತ ಧ್ವನಿ ಕೇಳಿಸುವ ವ್ಯವಸ್ಥೆ ಮಾಡಬೇಕು. ಇದರಿಂದ, ನಿದ್ರೆಗೆ ಜಾರಿದ ಪ್ರಯಾಣಿಕರಿಗೆ ಹಾಗೂ ತಾವು ಯಾವ ನಿಲ್ದಾಣದಲ್ಲಿ ಇದ್ದೇವೆ ಎಂದು ತಿಳಿದುಕೊಳ್ಳಲು ಬಯಸುವವರಿಗೆ ಅನುಕೂಲವಾಗುತ್ತದೆ.

**-ರೋಹಿತ್ ಎಸ್. ಜೈನ್,** ದಾವಣಗೆರೆ.

### ಸಿಕ್ಕಿರುವ 'ಭಾಗ್ಯಗಳನ್ನು' ಅವಶ್ಯಕತೆಗೆ ಅನುಗುಣವಾಗಿ ಬಳಸಬೇಕಾಗಿದೆ..

**ಮಾನ್ಯರೇ,**

ರಾಜ್ಯದಲ್ಲಿ ನೂತನ ಸರ್ಕಾರ ನುಡಿದಂತೆ ನಡೆದು ತನ್ನ ಐತಿಹಾಸಿಕ ಐದು ಭಾಗ್ಯಗಳನ್ನು ಜಾರಿಗೊಳಿಸಿದೆ. ರಾಜ್ಯದಲ್ಲಿ ಎಲ್ಲಾ ಭಾಗಗಳಿಂದ ವಿಶೇಷವಾಗಿ ಚರ್ಚೆಗೆ ಒಳಪಟ್ಟಿದ್ದು ಗೃಹಜ್ಯೋತಿ ಭಾಗ್ಯ ಸಾಮಾಜಿಕ ಜಾಲತಾಣಗಳಲ್ಲಿ ಗೃಹಿಣಿಯರು, ಸಾರ್ವಜನಿಕರು ವಿದ್ಯುತ್ ಶುಲ್ಕ ಪಾವತಿಸುವುದಿಲ್ಲ ಎನ್ನುವ ವಿಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಅದರಲ್ಲಿ ಹಲವು ಉದ್ದೇಶಪೂರ್ವಕವಾಗಿ ಮಾಡಿದ್ದಿರಬಹುದು.

ವಿಷಯ ಅದಲ್ಲ, ಸರ್ಕಾರ ಗೃಹಜ್ಯೋತಿ ಯೋಜನೆ ಅಡಿ ಬಿಪಿಎಲ್ ಕುಟುಂಬದವರಿಗೆ 200 ಯೂನಿಟ್ ವಿದ್ಯುತ್ತನ್ನು ಬಡವರಿಗೆ ಅನುಕೂಲವಾಗಲಿ ಎಂದು ಉಚಿತವಾಗಿ ನೀಡಿದೆ, ಆದರೆ ಅದು ದುರುಪಯೋಗವಾಗಬಾರದು, ಮಾರುಕಟ್ಟೆಯಲ್ಲಿ ದಿಢೀರನೆ ವಿದ್ಯುತ್ ಉಪಕರಣಗಳ ಮಾರಾಟ ದುಪ್ಪಟ್ಟಾಗಿದೆ. ಅವಶ್ಯಕತೆ ಇದೆಯೋ ಇಲ್ಲವೋ ಉತ್ತಮ ಗುಣಮಟ್ಟದ್ದು ಹೌದೋ, ಅಲ್ಲವೋ ಯಾವುದನ್ನೂ ಲೆಕ್ಕಿಸದೆ ಮಾರುಕಟ್ಟೆಯಲ್ಲಿ ಗ್ರಾಹಕರು ಖರೀದಿಗಾಗಿ ಮುಗಿಬಿದ್ದಿದ್ದಾರೆ.

ಬಹಳಷ್ಟು ಬಿಪಿಎಲ್ ಕುಟುಂಬಗಳು 75 ಯೂನಿಟ್ 100 ಯೂನಿಟ್ 150 ಯೂನಿಟ್ ವಿದ್ಯುತ್ತನ್ನು ಬಳಸುತ್ತಿವೆ. ಆದರೆ 200 ಯೂನಿಟ್ ಉಚಿತ ಎನ್ನುವ ಕಾರಣಕ್ಕಾಗಿ ಹೆಚ್ಚು ವಿದ್ಯುತ್ತನ್ನು ಬಳಸಲಾರಂಭಿಸಿದರೆ ಅದು ರೂಢಿಯಾಗುತ್ತದೆ. ಈ ಭಾಗ್ಯ ಎಷ್ಟು ವರ್ಷಗಳು ಇರುತ್ತವೆಯೋ ಇನ್ನು ಸ್ಪಷ್ಟವಾಗಿ ತಿಳಿದಿಲ್ಲ ಹಾಗೂ ಮುಂಬರುವ ಸರ್ಕಾರಗಳು ಈ ಭಾಗ್ಯಗಳನ್ನು ಮುಂದುವರೆಸುತ್ತವೆಯೋ, ಇಲ್ಲವೋ ಯಾರಿಗೂ ತಿಳಿಯದು. ಆದ್ದರಿಂದ ಸಿಕ್ಕಿರುವ ಯೋಜನೆಗಳನ್ನು ಅವಶ್ಯಕತೆಗನುಗುಣವಾಗಿ ಬಳಸಿಕೊಳ್ಳಬೇಕಾಗಿದೆ.

**- ಹೆಲ್ಪ್‌ಲೈನ್ ಸುಭಾನ್,** ದಾವಣಗೆರೆ.

# ರೈತರಿಗೆ ಕೊಟ್ಟ ಭರವಸೆಗಳನ್ನು ಈಡೇರುಸುವಂತೆ ಎಐಕೆಎಸ್ ಒತ್ತಾಯ

ದಾವಣಗೆರೆ, ಮೇ 29- ಚುನಾವಣೆಗೂ ಮುನ್ನ ರೈತರಿಗೆ ಕೊಟ್ಟ ಭರವಸೆಗಳನ್ನು ಈಡೇರುಸುವಂತೆ ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ನೂತನ ಕಾಂಗ್ರೆಸ್ ಸರ್ಕಾರವನ್ನು ಒತ್ತಾಯಿಸಿತು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಐಕೆಎಸ್ ಜಿಲ್ಲಾಧ್ಯಕ್ಷ ಹೆಚ್.ಜಿ. ಉಮೇಶ್ ಅವರು, ರಾಜ್ಯದಲ್ಲಿ ಜಾರಿ ಮಾಡಿದ್ದ ಎಲ್ಲಾ ರೈತ ವಿರೋಧಿ ಕಾನೂನು ತಿದ್ದುಪಡಿಗಳನ್ನು ಹಿಂಪಡೆಯುವ ಬಗ್ಗೆ ಅಗತ್ಯ ಸುಗ್ರಿವಾಜ್ಞೆ ಹೊರಡಿಸಬೇಕೆಂದು ಆಗ್ರಹಿಸಿದರು.

ಕೃಷಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಬಳಕೆ ಮಿತಿ ಏರಿಕೆ , ಬಡ್ಡಿ ರಹಿತ ಕೃಷಿ ಸಾಲದ ಮಿತಿಯನ್ನು ಮೂರರಿಂದ ಹತ್ತು ಲಕ್ಷದವರೆಗೆ ಏರಿಕೆ, ಸೂಕ್ತ ಬೆಂಬಲ ಬೆಲೆ, ಮಾರುಕಟ್ಟೆ ವಿಸ್ತರಣೆಯಂತಹ ಭರವಸೆಗಳನ್ನು ಆದ್ಯತೆ ಮೇರೆಗೆ ಕೂಡಲೇ ಸಂಪುಟ ಒಪ್ಪಿಗೆ ಪಡೆದು ಆದೇಶ ನೀಡುವಂತೆ ಮನವಿ ಮಾಡಿದರು.

ಉಳಿಮೆ ಹಕ್ಕನ್ನು ಸರ್ಕಾರಿ ಭೂಮಿಯ ಗೇಣಿದಾರಿಕೆ ಎಂದು ಪರಿಗಣಿಸಿ ಅವರನ್ನು ಒಕ್ಕಲೆಬ್ಬಿಸುವುದು, ಖಾಲಿ ಮಾಡಿಸುವುದು, ಭೂಸ್ವಾಧೀನ ಪಡಿಸುವುದನ್ನು ತಡೆಯುವಂತಹ ಸೂಕ್ತ ಕಾನೂನು ರಕ್ಷಣೆ ನೀಡಿ, ಹೊಸ ಮಾನದಂಡ ನಿಗದಿಪಡಿಸಿ ಅರ್ಜಿ ಸ್ವೀಕರಿಸಿ ಹಕ್ಕುಪತ್ರ ನೀಡುವ ನೀತಿಯನ್ನು ರೂಪಿಸಬೇಕೆಂದು ಆಗ್ರಹಿಸಿದರು.

ರಾಜ್ಯದ ಸಣ್ಣ, ಅತಿಸಣ್ಣ ರೈತರ, ಕೃಷಿ ಕಾರ್ಮಿಕರ, ಕುಶಲ ಕರ್ಮಿಗಳ ನಿವೇಶನ, ವಸತಿ ಸಮಸ್ಯೆಗಳನ್ನು ಅತ್ಯಗತ್ಯ ಆದ್ಯತೆಯ ಮೇರೆಗೆ ಪರಿಗಣಿಸಲು ನೀತಿ ರೂಪಿಸಬೇಕೆಂದರು.

ಪಶ್ಚಿಮಘಟ್ಟದ ವ್ಯಾಪ್ತಿಯಲ್ಲಿರುವ 11 ಜಿಲ್ಲೆಗಳಲ್ಲಿ ಕಸ್ತೂರಿರಂಗನ್ ವರದಿ ಜಾರಿ ಸಂಬಂಧ ಉಂಟಾಗಿರುವ ಸಮಸ್ಯೆಗಳಾದ ಬಫರ್ ಜೋನ್, ಪರಿಸರ ಸೂಕ್ತ ವಲಯ, ಮೂಲಭೂತ ಸೌಕರ್ಯ ಅಭಿವೃದ್ಧಿ ತಡೆ ಇತ್ಯಾದಿ ಮಾನವ ಹಕ್ಕುಗಳ ವಿಚಾರಗಳನ್ನು ಪುನರ್ ಪರಿಶೀಲಿಸಲು ಅಗತ್ಯ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಸರ್ಕಾರ ಘೋಷಿಸಿದ ಗ್ಯಾರಂಟಿಗಳನ್ನು ಕೂಡಲೇ ಈಡೇರಿಸಲು ರಾಜ್ಯ ಸರ್ಕಾರ ಮುಂದಾಗಬೇಕು. ಈಗ ಗ್ಯಾರಂಟಿ ಜಾರಿ ಬಗ್ಗೆ ಸೃಷ್ಠಿಯಾಗಿರುವ ಗೊಂದಲಗಳನ್ನು ನಿವಾರಣೆ ಮಾಡಬೇಕೆಂದು ಉಮೇಶ್ ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಎಐಕೆಎಸ್ ಮುಖಂಡರಾದ ಐರಣಿ ಚಂದ್ರು, ಸಿದ್ಧಲಿಂಗಪ್ಪ ಹಾಲೇಕಲ್ಲು, ನರೇಗಾ ರಂಗನಾಥ್, ಭೀಮಾರೆಡ್ಡಿ, ಎ. ತಿಪ್ಪೇಶಿ, ಕುಂದುವಾಡ ಚಂದ್ರಪ್ಪ, ಎನ್.ಟಿ. ತಿಪ್ಪೇಸ್ವಾಮಿ ಉಪಸ್ಥಿತರಿದ್ದರು.

## ಇಂದು ಜಿಎಂಐಟಿ 'ಮಲ್ಲಿಕಾ-2023' ಸಮಾರೋಪ ಸಮಾರಂಭ

ಜಿ.ಎಂ. ತಾಂತ್ರಿಕ ಮಹಾವಿದ್ಯಾಲಯದ ಜಿ. ಮಲ್ಲಿಕಾರ್ಜುನಪ್ಪ ತೆರೆದ ಸಭಾಂಗಣದಲ್ಲಿ ಇಂದು ಸಂಜೆ 6 ಗಂಟೆಗೆ 'ಮಲ್ಲಿಕಾ-2023' ಉತ್ಸವದ ಸಮಾರೋಪ ಸಮಾರಂಭ ನಡೆಯಲಿದೆ. ಶ್ರೀಶೈಲ ಎಜುಕೇಶನಲ್ ಟ್ರಸ್ಟ್ ಕಾರ್ಯದರ್ಶಿ ಜಿ.ಎಂ. ಲಿಂಗರಾಜ್ ಅಧ್ಯಕ್ಷತೆ ವಹಿಸಲಿದ್ದು, ಸಂಸದ ಜಿ.ಎಂ. ಸಿದ್ದೇಶ್ವರ, ನಟ, ಆರ್ಟ್ ಡೈರೆಕ್ಟರ್ ಅರುಣ್ ಸಾಗರ್, ಟ್ರಸ್ಟ್ ಚೇರ್ಮನ್ ಜಿ.ಎಂ. ಪ್ರಸನ್ನಕುಮಾರ್, ಖಜಾಂಚಿ ಜಿ.ಎಸ್. ಅನಿತ್‌ಕುಮಾರ್, ಪ್ರಾಚಾರ್ಯ ಡಾ. ಸಂಜಯ್ ಪಾಂಡೆ ಭಾಗವಹಿಸಲಿದ್ದಾರೆ.

# ನಗರದಲ್ಲಿ ನಾಳೆ ಬೃಹತ್ ಉದ್ಯೋಗ ಮೇಳ

ದಾವಣಗೆರೆ, ಮೇ 29- ಜಿಎಂಐಟಿ ಪ್ಲೇಸ್ಮೆಂಟ್ ವಿಭಾಗದ ಸಹಯೋಗದೊಂದಿಗೆ ನಗರದ ಜಿಎಂಎಸ್ ಅಕಾಡೆಮಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಾಡಿದ್ದು ದಿನಾಂಕ 31ರ ಬುಧವಾರ ಬೃಹತ್ ಉದ್ಯೋಗ ಮೇಳ ಹಮ್ಮಿಕೊಳ್ಳಲಾಗಿದೆ ಎಂದು ಜಿಎಂಐಟಿ ತರಬೇತಿ ಮತ್ತು ಉದ್ಯೋಗ ವಿಭಾಗದ ಮುಖ್ಯಸ್ಥ ತೇಜಸ್ವಿ ಕಟ್ಟಿಮನಿ ಟಿ.ಆರ್ ಹೇಳಿದ್ದಾರೆ.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಬೆಳಗ್ಗೆ 9 ರಿಂದ ಸಂಜೆ 4 ಗಂಟೆವರೆಗೆ ಉದ್ಯೋಗ ಮೇಳ ನಡೆಯಲಿದ್ದು, ಹತ್ತನೇ ತರಗತಿ ಪಾಸಾದ ವಿದ್ಯಾರ್ಥಿಗಳಿಂದ ಸ್ನಾತಕೋತ್ತರ ಪದವಿ ಪಡೆದ ಎಲ್ಲಾ ವಿದ್ಯಾರ್ಥಿಗಳೂ ಈ ಮೇಳದಲ್ಲಿ ಭಾಗವಹಿಸಬಹುದು ಎಂದರು.

ಸ್ನೈಡರ್ ಎಲೆಕ್ಟ್ರಿಕ್, ಬಜಾಜ್ ಅಲಿಯನ್ಸ್, ಬಿಎಫ್‌ಡಬ್ಲ್ಯೂ, ಸ್ಯಾಮ್ಸಂಗ್, ಲೈಟಿಂಗ್ ಟೆಕ್ನಾಲಜೀಸ್, ಸೆವೆಂತ್ ಸೆನ್ಸ್ ಟೆಕ್ನಾಲಜೀಸ್, ಜಿಎಂ ಸಮೂಹ ಸಂಸ್ಥೆಗಳು, ಫೇಸ್ ಪವರ್ ಸಿಸ್ಟಮ್ಸ್, ಹೋಂಡಾ ಮೋಟಾರ್ಸ್, ಸಾಸ್ಮೋಸ್ ಟೆಕ್ನಾಲಜೀಸ್ ಸೇರಿದಂತೆ, 35ಕ್ಕೂ ಹೆಚ್ಚು ಕಂಪನಿಗಳು ಮೇಳದಲ್ಲಿ ಭಾಗವಹಿಸಲಿದ್ದು, 4800 ಉದ್ಯೋಗಾವಕಾಶ ಲಭ್ಯವಿದ್ದು, ಸದುಪಯೋಗ ಪಡಿಸಿಕೊಳ್ಳುವಂತೆ ಅವರು ಕರೆ ನೀಡಿದರು.

ನಾಳೆ ಬುಧವಾರ ಬೆಳಗ್ಗೆ 9.30ಕ್ಕೆ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀಶೈಲ ಎಜುಕೇಶನಲ್ ಟ್ರಸ್ಟ್ ಖಜಾಂಚಿ ಜಿ.ಎಸ್. ಅನಿತ್‌ಕುಮಾರ್ ಮತ್ತು ದಾವಣಗೆರೆ ವಿಶ್ವವಿದ್ಯಾಲಯದ ಉಪಕುಲಪತಿ ಡಾ.ಬಿ.ಡಿ. ಕುಂಬಾರ್ ನೆರವೇರಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಜಿಎಂಎಸ್ ಅಕಾಡೆಮಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರಾದ ಪ್ರೊ. ಶ್ವೇತಾ ಮರಿಗೌಡರ್, ಅಭಿಷೇಕ್, ಅಭಿಲಾಷ್ ಉಪಸ್ಥಿತರಿದ್ದರು.

WANTED
Required
Sales Men & Sales Girls
to work in cloth Store.
Interested can Apply with proper Resume along with Passport Size Photo Attested.
ASHUJI DISTRIBUTORS
#323, Binny Company Road, Davanagere.

# ಸಿದ್ದರಾಮಯ್ಯ ಆಪ್ತರಿಗೆ ಪ್ರಮುಖ ಖಾತೆಗಳು



ಬೆಂಗಳೂರು, ಮೇ 29 - ಹಣಕಾಸು, ಬೃಹತ್ ಕೈಗಾರಿಕೆ, ಇಂಧನ, ಸಮಾಜ ಕಲ್ಯಾಣ, ಲೋಕೋಪಯೋಗಿ, ಕಂದಾಯ, ಆರೋಗ್ಯ ಮತ್ತು ಶಿಕ್ಷಣ ಸೇರಿದಂತೆ, ಪ್ರಮುಖ ಇಲಾಖೆಗಳನ್ನು ತಮ್ಮ ಆಪ್ತ ಹಾಗೂ ಬೆಂಬಲಿಗ ಮಂತ್ರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೀಡಿದ್ದಾರೆ.

ಕೇಂದ್ರದ ವರಿಷ್ಠರು ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬೆಂಬಲಿಗರಿಗೆ ಅಂತಹ ಜನಪರ ಖಾತೆಗಳು ದೊರೆತಿಲ್ಲ ಎಂದು ರಾಜಕೀಯ ವಲಯದಲ್ಲಿ ವಿಶ್ಲೇಷಣೆ ಮಾಡಲಾಗುತ್ತಿದೆ.

ತಾವೂ ಸೇರಿದಂತೆ ಸಂಪುಟದ 34 ಸದಸ್ಯರಿಗೂ ಖಾತೆ ಹಂಚಿಕೆ ಮಾಡಿ ರಾಜ್ಯಪಾಲರಿಗೆ ಮಾಡಿದ ಶಿಫಾರಸ್ಸಿಗೆ ರಾಜ್ಯಪಾಲರ ಒಪ್ಪಿಗೆ ದೊರೆತಿದೆ.

ಸಿದ್ದರಾಮಯ್ಯ ಆಪ್ತರಾಗಿರುವ ಕೃಷ್ಣ ಭೈರೇಗೌಡರಿಗೆ (ಕಂದಾಯ), ಕೆ.ಜೆ. ಜಾರ್ಜ್ (ಇಂಧನ), ಎಂ.ಬಿ.ಪಾಟೀಲ್ (ಬೃಹತ್ ಕೈಗಾರಿಕೆ), ಜಮೀರ್ ಅಹ್ಮದ್ (ವಸತಿ), ಸತೀಶ್ ಜಾರಕಿಹೊಳಿ (ಲೋಕೋಪಯೋಗಿ), ಭೈರತಿ ಸುರೇಶ್ (ನಗರಾಭಿವೃದ್ಧಿ) ದೊರೆತಿದೆ.

**ಸಚಿವರ ಖಾತೆ ಹಂಚಿಕೆ ಅಧಿಕೃತ ಪಟ್ಟಿ ಈ ಕೆಳಕಂಡಂತಿದೆ.**

- **ಸಿಎಂ ಸಿದ್ದರಾಮಯ್ಯ**- ಹಣಕಾಸು, ಐಟಿ-ಬಿಟಿ, ಗುಪ್ತಚರ
- **ಡಿಸಿಎಂ ಡಿಕೆ ಶಿವಕುಮಾರ್**- ಸಣ್ಣ ಮತ್ತು ಬೃಹತ್ ನೀರಾವರಿ, ಬೆಂಗಳೂರು ಅಭಿವೃದ್ಧಿ
- **ಡಾ. ಜಿ.ಪರಮೇಶ್ವರ್**- ಗೃಹ
- **ಹೆಚ್.ಕೆ. ಪಾಟೀಲ್**- ಕಾನೂನು ಮತ್ತು ಸಂಸದೀಯ, ಪ್ರವಾಸೋದ್ಯಮ
- **ಕೆ.ಹೆಚ್.ಮುನಿಯಪ್ಪ**- ಆಹಾರ
- **ರಾಮಲಿಂಗಾರೆಡ್ಡಿ**- ಸಾರಿಗೆ ಮತ್ತು ಮುಜರಾಯಿ
- **ಎಂ.ಬಿ.ಪಾಟೀಲ್** - ಬೃಹತ್ ಕೈಗಾರಿಕೆ
- **ಕೆ.ಜೆ.ಜಾರ್ಜ್**- ಇಂಧನ
- **ದಿನೇಶ್ ಗುಂಡೂರಾವ್** - ಆರೋಗ್ಯ
- **ಹೆಚ್ ಸಿ ಮಹದೇವಪ್ಪ** - ಸಮಾಜ ಕಲ್ಯಾಣ
- **ಸತೀಶ್ ಜಾರಕಿಹೊಳಿ**- ಲೋಕೋಪಯೋಗಿ
- **ಕೃಷ್ಣ ಭೈರೇಗೌಡ**- ಕಂದಾಯ
- **ಪ್ರಿಯಾಂಕ್ ಖರ್ಗೆ**- ಗ್ರಾಮೀಣಾಭಿವೃದ್ಧಿ
- **ಶಿವಾನಂದ ಪಾಟೀಲ್**-ಜವಳಿ-ಸಕ್ಕರೆ
- **ಜಮೀರ್ ಅಹಮದ್ ಖಾನ್**- ವಸತಿ
- **ಶರಣಬಸಪ್ಪ ದರ್ಶನಾಪುರ್**- ಸಣ್ಣ ಕೈಗಾರಿಕೆ
- **ಈಶ್ವರ್ ಖಂಡ್ರೆ**- ಅರಣ್ಯ
- **ಚೆಲುವರಾಯಸ್ವಾಮಿ** - ಕೃಷಿ
- **ಎಸ್.ಎಸ್.ಮಲ್ಲಿಕಾರ್ಜುನ್** – ತೋಟಗಾರಿಕೆ ಮತ್ತು ಗಣಿ
- **ರಹೀಂ ಖಾನ್** - ಪೌರಾಡಳಿತ, ಹಜ್
- **ಸಂತೋಷ್ ಲಾಡ್**- ಕಾರ್ಮಿಕ
- **ಡಾ.ಶರಣುಪ್ರಕಾಶ್ ಪಾಟೀಲ್**- ವೈದ್ಯಕೀಯ
- **ಆರ್.ಬಿ.ತಿಮ್ಮಾಪುರ**- ಅಬಕಾರಿ
- **ಕೆ.ವೆಂಕಟೇಶ್**- ಪಶುಸಂಗೋಪನೆ
- **ಶಿವರಾಜ್ ತಂಗಡಗಿ** - ಹಿಂದುಳಿದ ವರ್ಗ, ಕನ್ನಡ ಮತ್ತು ಸಂಸ್ಕೃತಿ
- **ಡಿ.ಸುಧಾಕರ್** - ಯೋಜನೆ
- **ಬಿ.ನಾಗೇಂದ್ರ** - ಕ್ರೀಡೆ ಮತ್ತು ಪರಿಶಿಷ್ಟ ಪಂಗಡ ಕಲ್ಯಾಣ
- **ಕೆ.ಎನ್.ರಾಜಣ್ಣ** - ಸಹಕಾರ
- **ಬಿ.ಎಸ್.ಸುರೇಶ್** - ನಗರಾಭಿವೃದ್ಧಿ
- **ಲಕ್ಷ್ಮಿ ಹೆಬ್ಬಾಳ್ಕರ್** - ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
- **ಮಂಕಾಳ್ ವೈದ್ಯ** - ಮೀನುಗಾರಿಕೆ ಮತ್ತು ಬಂದರು
- **ಮಧು ಬಂಗಾರಪ್ಪ** - ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ
- **ಡಾ.ಎಂ.ಸಿ.ಸುಧಾಕರ್** - ಉನ್ನತ ಶಿಕ್ಷಣ
- **ಎನ್.ಎಸ್. ಬೋಸರಾಜ್** – ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ

# ಜವಾಬ್ದಾರಿ ನಿರ್ವಹಣೆಗೆ ಭಕ್ತರ ಸಹಕಾರ ಅಗತ್ಯ: ಬಸವಪ್ರಭು ಶ್ರೀ



ಚಿತ್ರದುರ್ಗ, ಮೇ 29- ಮುರುಘಾ ಮಠಕ್ಕೆ ಸರ್ಕಾರ ಆಡಳಿತಾಧಿಕಾರಿ ನೇಮಕ ಮಾಡಿದ ಕ್ರಮವನ್ನು ಪ್ರಶ್ನಿಸಿ, ಹೈಕೋರ್ಟ್ ಮೆಟ್ಟಿಲೇರಿದ್ದೆವು. ನ್ಯಾಯಾಲಯ ಐತಿಹಾಸಿಕ ತೀರ್ಪು ನೀಡಿದೆ. ಶಿವಮೂರ್ತಿ ಶರಣರು ನೀಡಿದ ಜವಾಬ್ದಾರಿಯನ್ನು ಉತ್ತಮವಾಗಿ ನಿಭಾಯಿಸುತ್ತೇನೆ. ಇದಕ್ಕೆ ಭಕ್ತರ ಸಹಕಾರ ಅಗತ್ಯವಿದೆ ಎಂದು ಬಸವಪ್ರಭು ಸ್ವಾಮೀಜಿ ಹೇಳಿದರು.

ಮುರುಘಾ ಮಠದ ಉಸ್ತುವಾರಿಯನ್ನು ಶ್ರೀ ಬಸವ ಪ್ರಭು ಸ್ವಾಮೀಜಿ ಅವರಿಗೆ ನೀಡಿ, ತಾತ್ಕಾಲಿಕ ಆಡಳಿತ ಸಮಿತಿ ರಚಿಸಲು ಭಾನುವಾರ ನಡೆದ ಭಕ್ತರ ಸಭೆಯು ಒಮ್ಮತದ ತೀರ್ಮಾನದ ನಂತರ ಅವರು ಮಾತನಾಡಿದರು.

ನ್ಯಾಯಾಲಯದ ಆದೇಶದಂತೆ ಸಭೆ ನಡೆಸಲಾಗಿದೆ. ತಾತ್ಕಾಲಿಕ ಆಡಳಿತ ಸಮಿತಿಯನ್ನು ಅಧಿಕೃತವಾಗಿ ಘೋಷಣೆ ಮಾಡಲಾಗುತ್ತದೆ. ಪೂಜಾ ಕೈಂಕರ್ಯ ಹಾಗೂ ಆಡಳಿತವನ್ನು ಬಸವಪ್ರಭು ಸ್ವಾಮೀಜಿ ಅವರೇ ನೋಡಿಕೊಳ್ಳುತ್ತಾರೆ ಎಂದು ಶಾಸಕ ಕೆ.ಸಿ.ವೀರೇಂದ್ರ ತಿಳಿಸಿದರು.

ಪೋಕ್ಸೋ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಶಿವಮೂರ್ತಿ ಶರಣರು ಮಠದ ಉಸ್ತುವಾರಿಯನ್ನು ಕಾನೂನು ಬದ್ಧವಾಗಿ ಬಸವಪ್ರಭು ಸ್ವಾಮೀಜಿ ಅವರಿಗೆ ನೀಡಿದ್ದರು. ಸರ್ಕಾರ ಆಡಳಿತಾಧಿಕಾರಿ ನೇಮಕ ಮಾಡಿದ್ದರಿಂದ ಸ್ವಾಮೀಜಿ ಧಾರ್ಮಿಕ ಕೈಂಕರ್ಯಗಳಿಗೆ ಸೀಮಿತವಾಗಿದ್ದರು.

ಸರ್ಕಾರ ಆಡಳಿತಾಧಿಕಾರಿ ನೇಮಕ ಮಾಡಿದ್ದನ್ನು ರದ್ದುಪಡಿಸಿದ್ದ ಹೈಕೋರ್ಟ್, ಆಡಳಿತ ಸಮಿತಿ ರಚನೆಗೆ ಸೂಚನೆ ನೀಡಿತ್ತು. ಆಡಳಿತ ಸಮಿತಿಯ ಸ್ವರೂಪ ಹಾಗೂ ಪದಾಧಿಕಾರಿಗಳ ಹೆಸರನ್ನು ಶೀಘ್ರವೇ ಹೈಕೋರ್ಟ್‌ಗೆ ಸಲ್ಲಿಸಲು ಸಭೆ ನಿರ್ಧರಿಸಿತು.

ಮಾಜಿ ಶಾಸಕ ಎಚ್.ಎಸ್.ಶಿವಶಂಕರ್, ಕಾಂಗ್ರೆಸ್ ಮುಖಂಡ ಎಚ್.ಎ.ಷಣ್ಮುಖಪ್ಪ, ಜೆಡಿಎಸ್ ಮುಖಂಡ ಬಿ.ಕಾಂತರಾಜ್ ಇದ್ದರು.

# ಬಿ.ಎಲ್.ಓ.ಗಳಿಗೆ ಜಿಲ್ಲಾಡಳಿತ ಅಭಿನಂದನೆ

ದಾವಣಗೆರೆ, ಮೇ 29- ಉತ್ತಮ ಪ್ರಜಾಪ್ರಭುತ್ವ ನಿರ್ಮಾಣಕ್ಕೆ ಹೆಚ್ಚಿನ ಮತದಾನ ಅಗತ್ಯವಿದೆ ಎಂದು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಹೇಳಿದರು.

ಸೋಮವಾರ ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ವತಿಯಿಂದ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಹಿಂದಿನ ವಿಧಾನಸಭಾ ಚುನಾವಣೆಗಿಂತಲೂ ಈ ಬಾರಿ ಚುನಾವಣೆಯಲ್ಲಿ ಮತಗಟ್ಟೆಗಳಲ್ಲಿ ಶೇ.20 ರಷ್ಟು ಮತದಾನ ಪ್ರಮಾಣ ಹೆಚ್ಚಿಸಿದ ಬಿಎಲ್‌ಓಗಳ ಅಭಿನಂದನಾ ಕಾರ್ಯಕ್ರಮ ಉದ್ದೇಶಿಸಿ ಅವರು ಮಾತನಾಡಿದರು.

ಜಿಲ್ಲೆಯ 101 ಮತಗಟ್ಟೆಗಳಲ್ಲಿ ಶೇ 10 ಕ್ಕಿಂತ ಹೆಚ್ಚು ಮತದಾನವಾಗಿದ್ದು, ಮಾಯಕೊಂಡ ಕ್ಷೇತ್ರದ 1 ಮತಗಟ್ಟೆಯಲ್ಲಿ ಶೇ 45 ರಷ್ಟು ಮತದಾನ ಹೆಚ್ಚಾಗಿದೆ. ಮತಗಟ್ಟೆ ಅಧಿಕಾರಿಗಳು ಮತದಾರರ ಪಟ್ಟಿ ಪರಿಷ್ಕರಣೆ ಮತ್ತು ಮತದಾರರ ಸೇರ್ಪಡೆ ಹಾಗೂ ಮನೆ ಮನೆಗೂ ತೆರಳಿ ಮತದಾರರ ಚೀಟಿಯನ್ನು ತಲುಪಿಸಲು ಶ್ರಮಿಸಿದ್ದಾರೆ ಎಂದರು.

ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ಸಹಜವಾಗಿ ಹೆಚ್ಚಿನ ಮತದಾನವಾಗಿದ್ದು, ನಗರ ಪ್ರದೇಶಗಳಲ್ಲಿ ಮತದಾನ ಪ್ರಮಾಣ ಕಡಿಮೆಯಾಗಿದೆ. ಮತದಾನ ಪಟ್ಟಿ ಪರಿಷ್ಕರಣಾ ಸಮಯದಲ್ಲಿ ಎರಡು ಕಡೆ ಪಟ್ಟಿಯಲ್ಲಿ ಹೆಸರು, ಮೃತರ ಹೆಸರು ಸೇರಿದಂತೆ 1 ಲಕ್ಷ ಜನ ಮತದಾರರನ್ನು ಪಟ್ಟಿಯಿಂದ ತೆಗೆದು ಹಾಕಲಾಗಿದೆ. ವಿವಿಧ ರೀತಿಯ ಮತದಾನ ಜಾಗೃತಿ ಕಾರ್ಯಕ್ರಮಗಳನ್ನು ಕೈಗೊಂಡು ಜಿಲ್ಲೆಯ ಮತದಾನ ಪ್ರಮಾಣವನ್ನು ಹೆಚ್ಚಿಸಲಾಗಿದೆ ಎಂದು ಹೇಳಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುರೇಶ್ ಹಿಟ್ನಾಳ್ ಮಾತನಾಡಿ, ಹಿಂದಿನ ಪ್ರಮಾಣಕ್ಕಿಂತ ಈ ಬಾರಿ ಶೇ.10ರಷ್ಟು ಮತದಾನ ಪ್ರಮಾಣವನ್ನು ಹೆಚ್ಚಿಸುವಂತೆ ಮತಗಟ್ಟೆ ಮಟ್ಟದ ಅಧಿಕಾರಿಗಳಿಗೆ ಗುರಿ ನೀಡಲಾಗಿತ್ತು. ಅದರಂತೆ ಜಿಲ್ಲೆಯ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿಯೂ ಮತದಾನ ಪ್ರಮಾಣ ಹೆಚ್ಚಿಗೆಯಾಗಿದೆ.

ಮುಂಬರುವ ಚುನಾವಣೆಯಲ್ಲೂ ಸಹ ಇನ್ನೂ ಹೆಚ್ಚಿನ ಪರಿಣಾಮಕಾರಿಯಾಗಿ ಕಾರ್ಯಗತಗೊಳ್ಳಬೇಕು ಎಂದರು.

ಹೊನ್ನಾಳಿ ಉಪವಿಭಾಗಾಧಿಕಾರಿ ಹುಲ್ಮನಿ ತಿಮ್ಮಣ್ಣ, ಆರ್‌ಓ, ಎಆರ್‌ಓ ಹಾಗೂ ಮತಗಟ್ಟೆ ಹಂತದ ಅಧಿಕಾರಿಗಳು ಉಪಸ್ಥಿತರಿದ್ದರು.



# ತರಳಬಾಳು ಶ್ರೀಗಳ ಆಶೀರ್ವಾದ ಪಡೆದ ಶಾಸಕ ಬಿ.ವೈ.ವಿಜಯೇಂದ್ರ



ಚಿತ್ರದುರ್ಗ, ಮೇ 29- ಬಿಜೆಪಿ ಶಾಸಕ ಬಿ.ವೈ.ವಿಜಯೇಂದ್ರ ಸಿರಿಗೆರೆಯ ಶ್ರೀ ತರಳಬಾಳು ಬೃಹನ್ಮಠಕ್ಕೆ ಇಂದು ಭೇಟಿ ನೀಡಿ, ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರಿಂದ ಆಶೀರ್ವಾದ ಪಡೆದರು.

ಶಾಸಕನಾದ ಬಳಿಕ ಸಿರಿಗೆರೆ ಮಠಕ್ಕೆ ಮೊದಲ ಭೇಟಿ ನೀಡಿ, ತರಳಬಾಳು ಶ್ರೀಗಳ ದರ್ಶನ, ಆಶೀರ್ವಾದ ಪಡೆದಿದ್ದೇನೆ. ಅಪ್ಪಾಜಿ ಬಿ.ಎಸ್ ಯಡಿಯೂರಪ್ಪ ಅವರಂತೆ ರಾಜಕಾರಣ, ಅಭಿವೃದ್ಧಿಗೆ ಶ್ರೀಗಳ ಆಶೀರ್ವಾದ ಬೇಕಿದೆ ಎಂದರು. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಬೆಳೆಯುವಂತೆ ಶ್ರೀಗಳು ಕಿವಿಮಾತು ಹೇಳಿರುವುದಾಗಿ ಹೇಳಿದರು.

ಈ ಸಂದರ್ಭದಲ್ಲಿ ಭರಮಸಾಗರದ ಮುಖಂಡ ಡಿ.ಎಸ್. ಪ್ರವೀಣ್ ಕುಮಾರ್ ಇತರರು ಉಪಸ್ಥಿತರಿದ್ದರು.

# ಬ್ಯಾಂಕ್ ಕಾರ್ಪೊರೇಟ್ ಆಡಳಿತದಲ್ಲಿ ಲೋಪ : ಆರ್‌ಬಿಐ

ಮುಂಬೈ, ಮೇ 29 – ಬ್ಯಾಂಕುಗಳ ಕಾರ್ಪೊರೇಟ್ ಆಡಳಿತದ ಬಗ್ಗೆ ಹಲವು ಸೂಚನೆಗಳನ್ನು ನೀಡಿದ್ದರೂ ಸಹ, ಇದರಲ್ಲಿ ಕೆಲ ಲೋಪಗಳು ಕಂಡು ಬಂದಿವೆ ಎಂದು ಆರ್.ಬಿ.ಐ. ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ. ಬ್ಯಾಂಕ್ ಮಂಡಳಿ ನಿರ್ದೇಶಕರ ಸಭೆಯಲ್ಲಿ ಮಾತನಾಡಿದ ದಾಸ್, ಇಂತಹ ಲೋಪಗಳನ್ನು ನಿವಾರಿಸಬೇಕಿದೆ. ಬ್ಯಾಂಕುಗಳ ಒತ್ತಡ ಹಾಗೂ ಉತ್ಪ್ರೇಕ್ಷಿತ ಹಣ ಕಾಸು ದಾಖಲೆಗಳನ್ನು ಮುಚ್ಚಿಡಲು ಯಾವುದೇ 'ಚತುರ ಕ್ರಮಕ್ಕೆ' ಮುಂದಾಗಬಾರದು ಎಂದು ಎಚ್ಚರಿಸಿದ್ದಾರೆ. ಈ ಲೋಪಗಳನ್ನು ನಿವಾರಿಸುವುದು ಬ್ಯಾಂಕ್ ಮಂಡಳಿ ಹಾಗೂ ಅಧ್ಯಕ್ಷರ ಜಂಟಿ ಹೊಣೆಗಾರಿಕೆಯಾಗಿದೆ ಎಂದು ಗವರ್ನರ್ ಹೇಳಿದ್ದಾರೆ.

# ಶಂಕರ ಸೇವಾ ಸಂಘದಿಂದ ಉಚಿತ ಸಾಮೂಹಿಕ ಧರ್ಮೋಪನಯನ



ದಾವಣಗೆರೆ, ಮೇ 29- ನಿಜಲಿಂಗಪ್ಪ ಬಡಾವಣೆಯಲ್ಲಿರುವ ಶ್ರೀ ಶಾರದಾಂಬ ಸಭಾ ಭವನದಲ್ಲಿ ಶಂಕರ ಸೇವಾ ಸಂಘದ ವತಿಯಿಂದ ಈಚೆಗೆ ಉಚಿತ ಸಾಮೂಹಿಕ ಉಪನಯನ ಏರ್ಪಡಿಸ ಲಾಗಿತ್ತು. ದಾವಣಗೆರೆ ಹಾಗೂ ಪರ ಊರಿನಿಂದ ಬಂದಂತಹ ವಟುಗಳಿಗೆ ಬ್ರಹ್ಮೋಪದೇಶವನ್ನು ಉಪದೇಶಿಸಲಾಯಿತು. ವೇದಬ್ರಹ್ಮ ಶ್ರೀ ಶಂಕರನಾರಾಯಣ ಶಾಸ್ತ್ರಿಗಳ ನೈತೃತ್ವದಲ್ಲಿ ಅವರ ಶಿಷ್ಯಂದಿರುಗಳಾದ ಪುಟ್ಟಸ್ವಾಮಿ, ರಾಮಕೃಷ್ಣರಾವ್, ಜಯರಾಮ್, ನಾರಾಯಣ ಜೋಶಿ, ಪವನ್, ಹರೀಶ್ ಮುಂತಾದವರು ಬ್ರಹ್ಮೋಪದೇಶವನ್ನು ನಡೆಸಿಕೊಟ್ಟರು.

ಈ ಸಂದರ್ಭದಲ್ಲಿ ಶಂಕರ ಸೇವಾ ಸಂಘದ ಅಧ್ಯಕ್ಷ ಡಾ. ಬಿ. ಟಿ. ಅಚ್ಯುತ, ಕಾರ್ಯದರ್ಶಿ ಶ್ರೀನಿವಾಸ ಜೋಶಿ, ಪದಾಧಿಕಾರಿಗಳಾದ ವಿನಾಯಕ ಜೋಶಿ, ಸುಬ್ರಹ್ಮಣ್ಯ ಟಿ., ಮೋತಿ ಸುಬ್ರಮಣ್ಯ, ದೇವಸ್ಥಾನದ ಅರ್ಚಕರು, ಮ್ಯಾನೇಜರ್ ರಮೇಶ್ ಹಾಗೂ ಸದಸ್ಯರುಗಳು ಉಪಸ್ಥಿತರಿದ್ದರು.

# ಹಣದುಬ್ಬರದಿಂದ ಕೇಂದ್ರದ ಲೂಟಿ

ನವದೆಹಲಿ, ಮೇ 29 - ಕೇಂದ್ರದ ನರೇಂದ್ರ ಮೋದಿ ಸರ್ಕಾರ ಒಂಭತ್ತು ವರ್ಷ ಪೂರೈಸಿದ ಸಂದರ್ಭದಲ್ಲಿ ಟೀಕಾ ಪ್ರಹಾರ ನಡೆಸಿರುವ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮಾರಕ ಹಣದುಬ್ಬರದ ಮೂಲಕ ಜನರನ್ನು ಲೂಟಿ ಮಾಡಲಾಗುತ್ತಿದೆ ಎಂದಿದ್ದಾರೆ.

ಮಾರಕ ಹಣದುಬ್ಬರದ ಮೂಲಕ ಬಿಜೆಪಿ ಜನರ ಗಳಿಕೆಯನ್ನು ಲೂಟಿ ಮಾಡುತ್ತಿದೆ. ಜಿ.ಎಸ್.ಟಿ. ಕಾರಣದಿಂದ ಎಲ್ಲದರ ಮೇಲೆ ಪರಿಣಾಮವಾಗಿದೆ, ಬಜೆಟ್ ಹಾಳಾಗಿದೆ, ಜೀವನ ಕಠಿಣವಾಗಿದೆ ಎಂದು ಖರ್ಗೆ ಆರೋಪಿಸಿದ್ದಾರೆ.

ಅಚ್ಛೇ ದಿನ್ ಎಂದು ಹೇಳುತ್ತಿದ್ದ ಸರ್ಕಾರ, ಈಗ ಅಮೃತ ಕಾಲ ಎನ್ನುತ್ತಿದೆ. ಆದರೆ, ಈ ಅವಧಿಯಲ್ಲಿ ಸಾರ್ವಜನಿಕರ ಹಣ ಲೂಟಿ ಮಾಡಲಾಗಿದೆ ಎಂದೂ ಅವರು ಆರೋಪಿಸಿದ್ದಾರೆ.

# ಜಿಎಸ್‌ಎಲ್‌ವಿ ಉಡಾವಣೆ ಯಶಸ್ವಿ

ಶ್ರೀಹರಿಕೋಟ, ಮೇ 29 – ಎನ್‌ವಿಎಸ್-01 ದಿಕ್ಸೂಚಿ ಉಪಗ್ರಹವನ್ನು ಜಿ.ಎಸ್.ಎಲ್.ವಿ. ರಾಕೆಟ್ ಮೂಲಕ ಉಡಾವಣೆ ಮಾಡುವಲ್ಲಿ ಭಾರತೀಯ ಬಾಹ್ಯಾಕಾಶ ಸಂಸ್ಥೆಯಾದ ಇಸ್ರೋ ಯಶಸ್ಸು ಕಂಡಿದೆ. ಎರಡನೇ ಪೀಳಿಗೆಯ ದಿಕ್ಸೂಚಿ ಉಪಗ್ರಹಗಳ ಅಳವಡಿಕೆಯಲ್ಲಿ ಇದು ಇಸ್ರೋದ ಮೊದಲ ಹೆಜ್ಜೆಯಾಗಿದೆ. ಈ ಉಪಗ್ರಹಗಳ ನೆರವಿನಿಂದ ಭಾರತದಲ್ಲಿ ನಿಖರ ಸಂಚಾರಿ ಮಾರ್ಗದರ್ಶನ ದೊರೆಯಲಿದೆ.

# 2,000 ನೋಟು ವಿನಿಮಯ ಪ್ರಶ್ನಿಸುವ ಅರ್ಜಿ ವಜಾ

ನವದೆಹಲಿ, ಮೇ 29 – ಯಾವುದೇ ಗುರುತಿನ ಚೀಟಿ ಇಲ್ಲದೇ 2,000 ರೂ.ಗಳ ನೋಟುಗಳನ್ನು ಬದಲಿಸಿಕೊಳ್ಳಲು ಅವಕಾಶ ನೀಡುವ ರಿಸರ್ವ್ ಬ್ಯಾಂಕ್ ಕ್ರಮವನ್ನು ದೆಹಲಿ ಹೈಕೋರ್ಟ್ ಎತ್ತಿ ಹಿಡಿದಿದೆ.

ಸರ್ಕಾರದ ನೀತಿಗಳನ್ನು ಆಧರಿಸಿದ ಕ್ರಮಗಳ ಬಗ್ಗೆ ನ್ಯಾಯಾಲಯ ನಿರ್ಧರಿಸಲಾಗದು ಎಂದು ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮ ಹಾಗೂ ನ್ಯಾಯಮೂರ್ತಿ ಸುಬ್ರಮಣ್ಯಂ ಪ್ರಸಾದ್ ಅವರನ್ನು ಒಳಗೊಂಡ ಪೀಠ ಹೇಳಿದೆ.

ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ್ ಅವರು ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿ, ನೋಟುಗಳನ್ನು ಬದಲಾಯಿಸಿಕೊಳ್ಳಲು ಗುರುತಿನ ಚೀಟಿ ಕಡ್ಡಾಯಗೊಳಿಸಬೇಕು ಎಂದು ಕೋರಿದ್ದರು.

# ಭಾರತೀಯ ನೌಕಾದಳಕ್ಕೆ ಆಯ್ಕೆ: ಭೂಮಿಕಾಗೆ ಸನ್ಮಾನ



ಹರಿಹರ, ಮೇ 29- ಭಾರತೀಯ ನೌಕಾದಳಕ್ಕೆ ಆಯ್ಕೆಯಾಗಿರುವ ನಗರದ ಕು. ಭೂಮಿಕಾ ವೈ.ಎಂ. ಅವರನ್ನು ಆಕಾರ್ ಆಧಾರ್ ಸಂಸ್ಥೆ ಮತ್ತು ಗಣಪಾಸ್ ಇನ್ನೋವೇಟಿವ್ ಗ್ರೂಪ್ ವತಿಯಿಂದ ಸನ್ಮಾನಿಸಲಾಯಿತು. ಸನ್ಮಾನ ಸ್ವೀಕರಿಸಿ ಮಾತನಾಡಿದ ಭೂಮಿಕಾ, ಸತತ ಪ್ರಯತ್ನ, ಓದಿದ್ದನ್ನು ಹೆಚ್ಚು ಮನನ ಮಾಡಿಕೊಳ್ಳುವುದು, ಮೊಬೈಲ್‌ನಿಂದ ದೂರವಿದ್ದದ್ದೇ ನನ್ನ ಯಶಸ್ವಿಗೆ ಮುಖ್ಯ ಕಾರಣವೆಂದರು.

ಅತಿಥಿಗಳಾಗಿ ಭಾಗವಹಿಸಿದ್ದ ಗಣಪಾಸ್ ಇನ್ನೋವೇಟಿವ್ ಗ್ರೂಪ್‌ನ ಗೌರವಾಧ್ಯಕ್ಷ ಎಸ್.ಎಚ್. ಹೂಗಾರ್ ಮಾತನಾಡಿ, ಕುಮಾರಿ ಭೂಮಿಕಾ ನಮ್ಮ ಹೆಮ್ಮೆಯಾಗಿದ್ದಾಳೆ, ಸತತ ಪರಿಶ್ರಮದ ಹೊರತು ಗೆಲುವಿಗೆ ಇನ್ನಾವುದೇ ದಾರಿಯಿಲ್ಲ ಎಂಬ ಅಂಶವನ್ನು ಸಾಧಿಸಿ ತೋರಿಸಿದ್ದಾಳೆಂದು ಹೇಳಿದರು.

ಎರಡೂ ಸಂಸ್ಥೆಗಳ ವತಿಯಿಂದ ಕುಮಾರಿ ಭೂಮಿಕ ಹಾಗೂ ಅವಳ ಸಾಧನೆಗೆ ಬೆನ್ನೆಲುಬಾಗಿ ನಿಂತ ತಾಯಿ ಲತಾ ಮಂಜುನಾಥ್ ಅವರನ್ನೂ ಆತ್ಮೀಯವಾಗಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಆಕಾರ್ ಆಧಾರ್ ಸಂಸ್ಥೆಯ ಅಧ್ಯಕ್ಷ ರಾಮು ಎಂ., ಗಣಪಾಸ್ ಇನ್ನೋವೇಟಿವ್ ಸಂಸ್ಥೆಯ ಅಧ್ಯಕ್ಷ ವಿನಾಯಕ ಜಿ.ಕೆ ಸದಸ್ಯರುಗಳಾದ ಜಗನ್ನಾಥ ಕೆ.ವೈ, ಪ್ರದೀಪ ಎಂ.ಆರ್, ಚನ್ನಕೇಶವ.ಬಿ, ಅರುಣ ಮೂರ್ಕಲ್, ಅಜೀಂ, ಸೈನಿಕರ ಅಭಿಮಾನಿ ನವೀನ್, ಶಿಕ್ಷಕ ಮಲ್ಲಿಕಾರ್ಜುನ ಬಾವಿಕಟ್ಟಿ ಮುಂತಾದವರು ಉಪಸ್ಥಿತರಿದ್ದರು.

ಶ್ವೇತಾ ಸ್ವಾಗತಿಸಿದರು, ಸೌಮ್ಯ ರಾಮು ನಿರೂಪಿಸಿದರು, ನಂದೀಶ್ ಹೆಚ್.ಬಿ. ವಂದಿಸಿದರು.

# ದೇವರಬೆಳಕೆರೆ ಪಿಕಪ್ ಜಲಾಶಯದಲ್ಲಿ ಮತ್ತೆ ಬಂದು ನಿಂತ ಜಲಸಸ್ಯ ರಾಶಿ, ಗೇಟ್ ತೆರವು ವಿಳಂಬ : ಆತಂಕದಲ್ಲಿ ರೈತರು



ಮಲೇಬೆನ್ನೂರು, ಮೇ 29 - ದೇವರ ಬೆಳಕೆರೆ ಪಿಕಪ್ ಜಲಾಶಯಕ್ಕೆ ಮತ್ತೆ ಜಲಸಸ್ಯ ರಾಶಿ ಹರಿದು ಬರುತ್ತಿದ್ದು, ಜಲಾಶಯದ ಹಿನ್ನೀರು ಹೆಚ್ಚಾಗಿ ಸಂಕ್ಲಿಪೀರ ಮತ್ತಿತರೆ ಗ್ರಾಮಗಳ ರೈತರ ಬೆಳೆಗಳು ನೀರಿನಲ್ಲಿ ಮುಳುಗುವ ಭೀತಿ ಎದುರಾಗಿದೆ. ಜಲಾಶಯದ ಕ್ರೆಸ್ಟ್‌ಗೇಟ್‌ಗಳಿಗೆ ಅಡ್ಡಲಾಗಿ ಜಲಸಸ್ಯ ರಾಶಿ ಸಿಲುಕಿಹಾಕಿಕೊಂಡಿರುವುದಕ್ಕೆ ಗೇಟ್ ತೆರವು ಕಾಮಗಾರಿ ವಿಳಂಬ ಆಗಿರುವುದೇ ಪ್ರಮುಖ ಕಾರಣ ಎಂದು ರೈತರು ಬೇಸರ ವ್ಯಕ್ತಪಡಿಸಿದ್ದಾರೆ.

ಕಳೆದ ಮಳೆಗಾಲದಲ್ಲಿ ಪ್ರವಾಹದಿಂದ ಜಲಸಸ್ಯ ಬಹಳಷ್ಟು ಬಂದಿದ್ದರಿಂದ ಹೆಚ್ಚುವರಿ ನೀರು ಹೋಗದೆ ಜಲಾಶಯದ ಹಿನ್ನೀರು ನುಗ್ಗಿ ತೋಟ, ಭತ್ತದ ಗದ್ದೆಗಳು ಮತ್ತು ರಸ್ತೆ ಮುಳುಗಿದಾಗ ಭೇಟಿ ನೀಡಿದ್ದ ಅಧಿಕಾರಿಗಳು, ಎಂಜಿನಿಯರ್‌ಗಳು ನೀಡಿದ್ದ ಭರವಸೆ ಇದುವರೆಗೂ ಈಡೇರಿಲ್ಲ ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಗೇಟ್ ಬದಲಿಸಲು ಹಣ ಮಂಜೂರಾಗಿತ್ತು. ಈವರೆಗೂ ಟೆಂಡರ್ ಪ್ರಕ್ರಿಯೆ ಎಲ್ಲಿಗೆ ಬಂದಿದೆ ಎಂಬುದು ಯಾರಿಗೂ ತಿಳಿಯುತ್ತಿಲ್ಲ. ಎಸ್‌ಇ ಒಮ್ಮೆ ಭೇಟಿ ನೀಡಿದ್ದು ಬಿಟ್ಟರೆ ಮತ್ಯಾರು ಇತ್ತ ಸುಳಿದಿಲ್ಲ.

ಯೋಜನೆಗೆ ಹಣ ಮಂಜೂರಾಗಿದೆ ಆದರೆ ಕೆಲಸ ಪ್ರಾರಂಭವಾಗಿಲ್ಲ. ಹೊಸದಾಗಿ ಗೇಟ್ ಅಳವಡಿಸುವ ಬದಲು ಮೊದಲು ಜಲಸಸ್ಯ ತಡೆದು ನಿಲ್ಲುವುದು ತಪ್ಪಿಸಲು ಹಾಲಿ ಇರುವ ಗೇಟ್ ತೆರವು ಮಾಡಿಕೊಟ್ಟರೆ ಸಾಕು ಎನ್ನುತ್ತಾರೆ ಗುಳದಹಳ್ಳಿ, ಸಂಕ್ಲೀಪುರದ ರೈತರು.

ಜಲಸಸ್ಯ ತೆರವು ಮಾಡಲು ರಸ್ತೆ ಬದಿಯ ಮೆಟಲ್ ಗಾರ್ಡ್ ಕಿತ್ತು ಹಾಕಿ ಅರೆಬರೆ ಕಾಮಗಾರಿ ಮಾಡಿದ ಕಾರಣ ಅಣೆಕಟ್ಟು ಮುಖ್ಯ ಭಾಗ ಅಪಾಯಕಾರಿ ವಲಯವಾಗಿದೆ. ಸೇತುವೆ ಶಿಥಿಲವಾಗಿದೆ, ಕೆಂಪು ಪಟ್ಟಿಯನ್ನು ಕೂಡ ಕಟ್ಟಿಲ್ಲ ಎಂದು ದೇವರಬೆಳೆಕೆರೆ ಗ್ರಾಮಸ್ಥರು ಬೇಸರ ವ್ಯಕ್ತಪಡಿಸಿದರು.

ಚುನಾವಣೆ ಮುಗಿದಿದೆ. ಹೊಸ ಸರ್ಕಾರ ರಚನೆ ಆಗಿದೆ. ಜಿಲ್ಲೆಗೆ ಸಚಿವರು ನೇಮಕಗೊಂಡಿದ್ದಾರೆ. ಅಣೆಕಟ್ಟೆಯಲ್ಲಿ ಮುಳಗಡೆಯಾದ ಬೂದಿಹಾಳು ಗ್ರಾಮದವರೇ ಆದ ಬಿ.ಪಿ. ಹರೀಶ್ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಗೇಟ್ ಬದಲಿಸಲು ಅಥವಾ ದುರಸ್ತಿಗೆ ಇದು ಸಕಾಲವಾಗಿದೆ.

ಜಿಲ್ಲಾಧಿಕಾರಿಗಳು ಹಾಗೂ ಕರ್ನಾಟಕ ನೀರಾವರಿ ನಿಗಮದ ಅಧಿಕಾರಿಗಳು ತುರ್ತಾಗಿ ಗಮನ ಹರಿಸಿ ಸಮಸ್ಯೆ ಪರಿಹರಿಸಲು ಮುಂದಾಗಬೇಕು.

ಈಗಲೂ ಕಾಲಹರಣ ಮಾಡಿದರೆ ಮಲೇಬೆನ್ನೂರಿನ ನೀರಾವರಿ ನಿಗಮದ ಎದುರು ಧರಣಿ, ಪ್ರತಿಭಟನೆ, ಹೋರಾಟ ಅನಿವಾರ್ಯ ಎಂಬ ಎಚ್ಚರಿಕೆಯನ್ನು ರೈತ ಮುಖಂಡ ಸಂಕ್ಲೀಪುರದ ನಾಗೇಂದ್ರಪ್ಪ ನೀಡಿದ್ದಾರೆ. ಮೈಸೂರಿನ ತಜ್ಞರ ತಂಡ ಜಲ ಸಸ್ಯದ ಸಮಸ್ಯೆ, ಹಿನ್ನೀರು ಜಮೀನಿಗೆ ನುಗ್ಗುವುದನ್ನು ತಪ್ಪಿಸಲು ಗೇಟ್ ತೆರವು ಮಾಡುವ ಕುರಿತು ಸರ್ವೆ ನಡೆಸಿ ಸರ್ಕಾರಕ್ಕೆ ವರದಿ ನೀಡಿದ್ದಾರೆ. ವರದಿ ಹಿರಿಯ ಎಂಜಿನಿಯರುಗಳ ಮುಂದಿದೆ. ಹೊಸ ಆಧುನಿಕ ಗೇಟ್ ಅಳವಡಿಸಲು ಅಣೆಕಟ್ಟು ಸುರಕ್ಷತಾ ಸಮಿತಿ ಭೇಟಿ ನೀಡಿ ವರದಿ ನೀಡಬೇಕಿದೆ ಎಂದು ಎಇಇ ಚಂದ್ರಕಾಂತ್ ಮಾಹಿತಿ ನೀಡಿದರು.





ಬೇಕಾಗಿದ್ದಾರೆ
ಸೇಲ್ಸ್ ಎಕ್ಸಿಕ್ಯೂಟಿವ್ - 2
ಸ್ಪೇರ್ ಪಾರ್ಟ್ಸ್ ಸ್ಟೋರ್ ಇನ್ ಚಾರ್ಜ್ - 2
ಅನುಭವವುಳ್ಳವರಿಗೆ ಆದ್ಯತೆ.
ಲಕ್ಷ್ಮಿ ಸುಜುಕಿ
ದಾವಣಗೆರೆ.
ಫೋನ್ : 98442 55540

ಸಂಭೋಜರ್ ಎಜುಕೇಶನ್ & ಮಲ್ಟಿಪರ್ಪಸ್ ಅಸೋಸಿಯೇಷನ್ (ರಿ)
ಸಮೃದ್ಧಿ ಕೋಚಿಂಗ್ ಅಕಾಡೆಮಿಯಿಂದ
ಪ್ರಶಾಂತ್ ಕುಮಾರ್ ಎನ್. ಅವರಿಗೆ ಅಭಿನಂದನೆಗಳು



ಪ್ರಶಾಂತ್ ಕುಮಾರ್ ಎನ್. ಆದ ನನಗೆ ಸಮೃದ್ಧಿ ಕೋಚಿಂಗ್ ಅಕಾಡೆಮಿಯು ಹಾಗೂ ಸಂಸ್ಥೆಯ ನಿರ್ದೇಶಕರಾದ ಮಂಜುನಾಥ ಸಂಭಾಜಿ ಸರ್ ರವರು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಯಶಸ್ವಿಯಾಗಲು ಅತ್ಯುತ್ತಮ ಮಾರ್ಗದರ್ಶನ, ತರಬೇತಿ, ಅಧ್ಯಯನ ಸಾಮಗ್ರಿ, ಗ್ರಂಥಾಲಯ, ಕಿರುಪರೀಕ್ಷೆಗಳನ್ನು ನೀಡುವ ಜೊತೆಗೆ ಆತ್ಮಸ್ಥೈರ್ಯವನ್ನು ನೀಡಿದ್ದಕ್ಕೆ ಹೃದಯಪೂರ್ವಕ ಧನ್ಯವಾದಗಳು ತಿಳಿಸುತ್ತೇನೆ.
–ಪ್ರಶಾಂತ ಕುಮಾರ್

ದಿನಾಂಕ 24.05.2023 ರಂದು ಪ್ರಕಟವಾದ SSC (JE) ಅಂತಿಮ ಪರೀಕ್ಷೆಯಲ್ಲಿ ಕೇಂದ್ರ ಸರ್ಕಾರದ CPWD ಇಲಾಖೆಯಲ್ಲಿ ಸರ್ಕಾರಿ ನೌಕರಿ ಪಡೆದುಕೊಂಡ ಸಾಧನೆಗೆ ಸಮೃದ್ಧಿ ಅಕಾಡೆಮಿ ಸಂಸ್ಥೆಯ ನಿರ್ದೇಶಕರಾದ ಮಂಜುನಾಥ ಸಂಭಾಜಿಯವರು ತಮ್ಮ ನೆಚ್ಚಿನ ವಿದ್ಯಾರ್ಥಿಗೆ ಸಂಸ್ಥೆಯ ಪರವಾಗಿ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ಸಂಸ್ಥೆಯ ವಿಶೇಷತೆಗಳು
ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ, ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗಳಿಂದ ನಿಯೋಜನೆಗೊಂಡ ಅಭ್ಯರ್ಥಿಗಳಿಗೆ IAS, KAS, Group-C, Banking,, SSC & RRB ಕೋರ್ಸ್‌ಗಳಿಗೆ ಉಚಿತ ತರಬೇತಿ ನೀಡುವ ಸಂಸ್ಥೆಯಾಗಿದೆ. ದೆಹಲಿ, ಹೈದರಾಬಾದ್, ಬೆಂಗಳೂರು ಮತ್ತು ಶಿವಮೊಗ್ಗದಿಂದ ಬರುವ ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿ, ಉಚಿತ ಅಧ್ಯಯನ ಸಾಮಗ್ರಿ, 24x7 ಲೈಬ್ರರಿ, ಹಾಸ್ಟೆಲ್ ವ್ಯವಸ್ಥೆ ಮತ್ತು MOCK TEST.

ಸಂಪರ್ಕಿಸಿ:
ಸೆಂಟ್ ಪಾಲ್ಸ್ ಕಾನ್ವೆಂಟ್ ರೋಡ್, ಪಿ.ಜೆ. ಬಡಾವಣೆ, ದಾವಣಗೆರೆ–02
9620262361, 6364640296